# ವಿಪ್ರನುಡಿ

ಸ್ವಾವಲಂಬನೆ–ಸಂಘಟನೆ–ಸಂಸ್ಕಾರ

ಸಂಪುಟ–34, ಶ್ರೀ ಶುಭಕೃತ್‌ನಾಮ ಸಂವತ್ಸರ, ಶ್ರಾವಣ ಮಾಸ ಆಗಸ್ಟ್–2022, ಸಂಚಿಕೆ–5, ಪುಟಗಳು–32, ಬೆಲೆ ರೂ.–15/–

## ಚಾತುರ್ಮಾಸ್ಯ ವ್ರತ ನಿರತ ಗುರುವರ್ಯರಿಗೆ ಮಹಾಸಭೆಯ ಪ್ರಣಾಮಗಳು



ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರುಗಳಾದ
ಶ್ರೀ ಭಾರತೀತೀರ್ಥ ಮಹಾ ಸ್ವಾಮಿಗಳು ಹಾಗೂ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು



ಹರಿಹರಪುರದ ಶ್ರೀ ಸ್ವಯಂಪ್ರಕಾಶ
ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳು



ಮಂತ್ರಾಲಯದ ಶ್ರೀ ಸುಗುಣೇಂದ್ರ ತೀರ್ಥ
ಶ್ರೀಪಾದಂಗಳವರು



ವ್ಯಾಸರಾಯ ಪೀಠದ (ಸೋಸಲೆ)
ಶ್ರೀ ವಿದ್ಯಾವಿಜಯತೀರ್ಥ ಶ್ರೀಪಾದಂಗಳವರು






ಮಂತ್ರಾಲಯದಲ್ಲಿ ಲಕ್ಷ ಹರಿಕಥಾಮೃತಸಾರ ಪಾರಾಯಣ



ಬೇಲೂರಿನಲ್ಲಿ ಪದಾಧಿಕಾರಿಗಳ ಸಭೆ



ಗದಗ ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ ಸಮಾರಂಭ





ಬೇಲೂರಿನಲ್ಲಿ ನಡೆದ ವಿಪ್ರ ಸಮಾವೇಶ ಸಮಾರಂಭ



ಜೆ.ಪಿ. ನಗರ (7–8 ಹಂತ) ಪ್ರತಿಭಾ ಪುರಸ್ಕಾರ ಸಮಾರಂಭ



ಮಹಾಸಭಾ ಕಲೆ ಮತ್ತು ಸಾಂಸ್ಕೃತಿಕ ವೇದಿಕೆ ಉದ್ಘಾಟನೆ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ, ಗಾಯತ್ರೀ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70
ದೂರವಾಣಿ : 26771695, 26770066
E-mail : info@akbms.com
Website : www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**
ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**
ಖಜಾಂಚಿ
**ವೆಂಕಟೇಶ ಎಸ್. ನಾಯಕ್**
ಸಂಘಟನಾ ಕಾರ್ಯದರ್ಶಿ
**ಡಾ|| ಬಿ.ಎಸ್. ರಾಘವೇಂದ್ರ ಭಟ್**

ವಿಪ್ರನುಡಿ ಪ್ರಕಟಣಾ ಸಮಿತಿ

ಪ್ರಧಾನ ಸಂಪಾದಕರು
**ಡಾ|| ಎಂ.ಕೆ. ಶ್ರೀಧರ್**

ಗೌರವ ಸಲಹೆಗಾರರು
**ಎಂ.ಕೆ. ಭಾಸ್ಕರರಾವ್**
**ಡಾ|| ಎಂ. ಸೂರ್ಯಪ್ರಸಾದ್**

ಸಮಿತಿ ಸದಸ್ಯರು
**ಜ್ಯೋತಿಷಿ ವಿ|| ಡಾ| ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ ಬೆಂಗಳೂರು-560 050. ದೂ. : 26606061.

# ನಲ್ನುಡಿ

**ಭಾಷಾಸು ಮುಖ್ಯಾ ಮಧುರಾ ದಿವ್ಯಾ ಗೀರ್ವಾಣಭಾರತೀ ।**
**ತಸ್ಯಾಂ ಹಿ ಕಾವ್ಯಂ ಮಧುರಂ ತಸ್ಮಾದಪಿ ಸುಭಾಷಿತಮ್ ॥**

'ಭಾಷೆಗಳಲ್ಲಿ ಮುಖ್ಯವಾದದ್ದು, ಮಧುರವಾದದ್ದು, ದಿವ್ಯವಾದದ್ದು ದೇವವಾಣಿ-ಸಂಸ್ಕೃತ ಭಾಷೆ; ಅದರಲ್ಲಿ ಕಾವ್ಯವು ಮಧುರ. ಆ ಕಾವ್ಯದಲ್ಲಿ ಸುಭಾಷಿತವು ಮಧುರವಾದದ್ದು.'

ಮನುಷ್ಯ-ಮನುಷ್ಯರೊಡನೆ ಸಂವಹನೆಗೆ ಮುಖ್ಯವಾದದ್ದು ಭಾಷೆ. ಮಾತನಾಡುವುದರಿಂದ ಅದಕ್ಕೆ ಭಾಷೆ ಎಂದು ಹೆಸರು (**ಭಾಷಯತೇ ಇತಿ ಭಾಷಾ** ।). ಈ ಭಾಷೆಯಿಂದಲೇ ಸಾಹಿತ್ಯ ಸೃಷ್ಟಿ. ಸಾಹಿತ್ಯದ ಸಾಂಗತ್ಯದಿಂದ ಸುಸಂಸ್ಕೃತ ಸಮಾಜದ ಉಗಮ. ಉತ್ತಮ ಸಮಾಜದಿಂದ ಸದೃಢವಾದ ರಾಜ್ಯಗಳು ರಾಷ್ಟ್ರಗಳು ಉಂಟಾಗುತ್ತವೆ. ಹೀಗಾಗಿ ಎಲ್ಲ ದೇಶಗಳ, ಜನಾಂಗಗಳ ಅಭಿವೃದ್ಧಿಗೆ ಭಾಷೆಯೇ ಪ್ರಮುಖವಾದದ್ದು, ಈ ಭಾಷೆ ನಿಂತ ನೀರಲ್ಲ. ಅದು ನಿರಂತರವಾಗಿ ಚಲನಶೀಲವಾದದ್ದು. ಗ್ಲಾಸ್‌ನಾಷ್ಟ್ ಎಂಬ ಸಿದ್ಧಾಂತದ ಪ್ರಕಾರ ನೂರು ವರ್ಷಗಳಿಗೊಮ್ಮೆ ಭಾಷೆಯ 80% ಪದಗಳು ನಾಶವಾಗುತ್ತದಂತೆ. ವಿಶ್ವದಲ್ಲಿ ಸಾವಿರಾರು ಭಾಷೆಗಳ ಉಗಮವಾಗಿದೆ. ಅದೆಷ್ಟು ಭಾಷೆಗಳು ಅವಸಾನ ಹೊಂದಿವೆಯೋ ತಿಳಿಯದು.

ಪ್ರಪಂಚದಲ್ಲಿ 500ಕ್ಕೂ ಹೆಚ್ಚು ಲಿಪಿಯುಳ್ಳ ಭಾಷೆಗಳಿವೆ. ಆ ಭಾಷೆಗಳಲ್ಲಿ ಪ್ರಮುಖವಾದದ್ದು ಸಂಸ್ಕೃತ ಭಾಷೆ, ಜಗತ್ತಿನ ಪುರಾತನ ಭಾಷೆಗಳಲ್ಲಿ, ಇದೂ ಒಂದು. ವೈದಿಕ ಭಾಷೆಯು ಸಂಸ್ಕರಣೆಗೊಂಡು ಸಂಸ್ಕೃತ ಭಾಷೆಯಾಯಿತು. (**ಸಮ್ಯಕ್ ಕೃತಮ್ ಸಂಸ್ಕೃತಮ್** ।). ವೇದಕಾಲದಿಂದ ಇಂದಿನವರೆಗೆ ಹತ್ತು-ಹನ್ನೆರಡು ಸಾವಿರ ವರ್ಷಗಳ ಇತಿಹಾಸವಿರುವ ಈ ಭಾಷೆಯಲ್ಲಿ ಸಮೃದ್ಧ ಸಾಹಿತ್ಯವಿದೆ. ವೇದೋಪನಿಷತ್ತುಗಳು, ರಾಮಾಯಣ-ಮಹಾಭಾರತ ಇತಿಹಾಸ ಕಾವ್ಯಗಳು, ದರ್ಶನಗಳು, ಪುರಾಣಗಳು, ಗದ್ಯ-ಪದ್ಯ,, ಗದ್ಯ-ಪದ್ಯ ಮಿಶ್ರಿತ ಚಂಪೂ, ನಾಟಕ ಸ್ತೋತ್ರ, ಸುಭಾಷಿತ, 64 ಲಲಿತ ಕಲೆಗಳು, ವೈಜ್ಞಾನಿಕ-ತಾಂತ್ರಿಕ ಗ್ರಂಥಗಳೆಲ್ಲವೂ ಸಂಸ್ಕೃತದಲ್ಲಿದ್ದು ಅವುಗಳನ್ನು ಓದಲು, ಅರ್ಥ ಮಾಡಿಕೊಳ್ಳಲು ಒಂದು ಜನ್ಮದಲ್ಲಿ ಸಾಧ್ಯವಿಲ್ಲ.

ಸಹಸ್ರಾರು ಕವಿಗಳು ಈ ಸಂಗೀತಮಯವಾದ ಭಾಷೆಯಲ್ಲಿ ಹಲವು ಪ್ರಕಾರಗಳ ಸಾಹಿತ್ಯ ಸೃಷ್ಟಿ ಮಾಡಿದ್ದಾರೆ. ವಾಲ್ಮೀಕಿ, ವ್ಯಾಸ, ಭಾಸ, ಕಾಳಿದಾ, ಭವಭೂತಿ ಮುಂತಾದ ಕವಿಗಳು. ಕಾಂತ್ರದರ್ಶಿಗಳಾಗಿದ್ದು ಕಾವ್ಯಗಳ ಮೂಲಕ ಸನ್ನಡತೆ, ಉತ್ತಮ ಸಮಾಜ, ದೇಶಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಹಲವಾರು ಕವಿಗಳು ಸುಭಾಷಿತಗಳ ಮಾರ್ಗವನ್ನು ಅನುಸರಿಸಿದ್ದಾರೆ. ಸುಭಾಷಿತವಾದರೆ ಒಳ್ಳೆಯ ನುಡಿ, ಒಳ್ಳೆಯ ಮಾತು, ಮಂಗಳಕರ ಮಾತು ನುಡಿ. (**ಸುಷ್ಟುಭಾಷಿತಂ ಸುಭಾಷಿತಮ್ । ಶೋಭನಂ ಭಾಷಿತಂ ಸುಭಾಷಿತಮ್** ।) ಕವಿ ಬರೆದ್ದೆಲ್ಲವೂ ಕಾವ್ಯವೇ (**ಕವೇಃ ಕರ್ಮಕಾವ್ಯಮ್** ।). ತನ್ನ ವಿದ್ಯೆ, ಸಂಸ್ಕಾರ, ಜೀವನಾನುಭವಗಳ ಮೂಲಕ ಪಕ್ವಗೊಂಡ ಮನಸ್ಸು, ಭಾವ-ಬುದ್ಧಿಗಳಿಂದ ಸ್ಫುರಿಸಿದ್ದೇ ಕಾವ್ಯವಾಗುವುದು. ಆ ಕಾವ್ಯವನ್ನು ಆಲಿಸಲು, ಹಾಡಲು ಮಧುರವಾದದ್ದು, ಹೃದಯಂಗಮವಾದದ್ದು ಶ್ರೇಷ್ಠವಾದ ಕಾವ್ಯಗಳ. ಓದು, ಮನನದಿಂದ ಮನಸ್ಸು ಸಂಸ್ಕಾರಪೂತವಾಗುತ್ತದೆ. ಇಂತಹ ಸಮೃದ್ಧ ಕಾವ್ಯದಲ್ಲಿ ಸುಭಾಷಿತಗಳ ಪ್ರಕಾರವೂ ಒಂದು. ಸುಭಾಷಿತ ರತ್ನ ಭಂಡಾಗಾರ, ಸುಭಾಷಿತ ರತ್ನಾವಲೀ, ಸದುಕ್ತಿರ್ಣಾಮೃತ, ಭತೃಹರಿಯ ಶತಕತ್ರಯ ಮುಂತಾದ ಗ್ರಂಥಗಳಲ್ಲಿ ಲಕ್ಷಾಂತರ ಸುಭಾಷಿತ ನುಡಿಗಳಿವೆ. ಅವುಗಳ ಮಹಿಮೆ ಎಷ್ಟಿದೆಯೆಂದರೆ, ಸುಭಾಷಿತಗಳ ರಸಾಸ್ವಾಧನೆಯ ಮುಂದೆ ಮಧುರವಾದ ಅಮೃತವು ಹೆದರಿ ಸ್ವರ್ಗಕ್ಕೆ ಓಡಿಹೋಗುತಂತೆ । (**ಸುಭಾಷಿತ ರಸಸಾಗ್ರೇ, ಸುಧಾಭೀತಾ ದಿವಂಗತಾ** ।). ಪೌರಾಣಿಕ ಹಿನ್ನೆಲೆಗಳ ಪ್ರಕಾರ ಈ ಭಾಷೆಯಲ್ಲಿ ದೇವತೆಗಳು ವ್ಯವಹರಿಸುತ್ತಿದ್ದರು. ಇದು ಸನಾತನ ವೈದಿಕ, ಭಾರತ ಭಾಷೆ. ಭರತಮುನಿ ಮತ್ತು ಅವರ ಮಕ್ಕಳು ಈ ದೇಶವನ್ನಾಳಿದ್ದರಿಂದ ಇದಕ್ಕೆ ಭಾರತವೆಂಬ ಹೆಸರು. ಇನ್ನೊಂದು ವಾಖ್ಯೆಯ ಪ್ರಕಾರ 'ಭಾ' ಎಂದರೆ ಹೊಳೆಯುವುದು, ಪ್ರಕಾಶಿಸುವುದು. ಅಂದರೆ ಜ್ಞಾನ ಪ್ರಕಾಶ ಅದರಲ್ಲಿ ತೊಡಗಿರುವವರೇ ರತರು. ಹೀಗಾಗಿ ಭಾರತವಾಯಿತು. ಒಂದು ದೇಶದ ಸಂಸ್ಕೃತಿಗೆ ಪೂರಕ ಅಂಶಗಳೆಲ್ಲಾ, ಈ ಭಾಷೆಯಲ್ಲಿದೆ. ಆದ್ದರಿಂದ ಭಾರತದ ಪ್ರತಿಷ್ಠೆಗೆ ಕಾರಣವಾದದ್ದು ಸಂಸ್ಕೃತ ಮತ್ತು ಸಂಸ್ಕೃತಿ. (**ಭಾರತಸ್ಯ ಪ್ರತಿಷ್ಠೇ ದ್ವೇ ಸಂಸ್ಕೃತಿಂ ಸಂಸ್ಕೃಯತಸ್ತಥಾ** ।) ಸಣ್ಣವಯಸ್ಸಿನಲ್ಲಿ ಸಂಸ್ಕೃತವನ್ನು ಹೇಳಿಕೊಟ್ಟರೇ, ಹಲವು ಸುಭಾಷಿತಗಳನ್ನು ಕಂಠಪಾಠ ಮಾಡಿಸಿದರೆ, ಭವಿಷ್ಯದಲ್ಲಿ ಅವರು ಸತ್ಪ್ರಜೆಗಳಾಗುವುದರಲ್ಲಿ ಸಂದೇಹವಿಲ್ಲ.

# "ರಾಷ್ಟ್ರ ಹಿತಚಿಂತನ ಮಂತ್ರ"

ಎಸ್, ಶ್ರೀಧರಮೂರ್ತಿ

ನಮ್ಮ ಭಾರತ ದೇಶ ಈ ವರುಷ ಅಮೃತ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿದೆ. ಈ ಅಮೃತ ಸುಸಂದರ್ಭದಲ್ಲಿ ರಾಷ್ಟ್ರಹಿತ ಚಿಂತನೆಯನ್ನು ನೆನಪಿಸುವ ವೇದಸಾಹಿತ್ಯದ ಒಂದು ಮಂತ್ರದ ಬಗ್ಗೆ ಚಿಂತನೆ ಮಾಡೋಣ.

ವೇದಗಳಲ್ಲಿಯ ಮೊದಲ ಭಾಗ, ಕರ್ಮಕಾಂಡ ಅಥವ ದರ್ಮಕಾಂಡ. ಮನುಜರು ತಮ್ಮ ಕಾಮನೆಗಳನ್ನು ಧರ್ಮದ ಚೌಕಟ್ಟಿನಲ್ಲಿ ಪಡೆಯುವ ಹಲವು ಪ್ರಾರ್ಥನೆಗಳನ್ನು ಉಪಾಸನೆಗಳನ್ನೂ ವಿವರವಾಗಿ ತಿಳಿಸಿಕೊಟ್ಟಿದೆ. ಈ ಸಕಾಮ ಕರ್ಮಗಳನ್ನು ಆಚರಿಸುತ್ತಾ ಹಂತಹಂತವಾಗಿ ಒಬ್ಬ ವ್ಯಕ್ತಿ ಪರಿಪಕ್ವತೆಯನ್ನು ಪಡೆಯುತ್ತಾ ವೇದದ ಅಂತಿಮ ಭಾಗವಾದ ಜ್ಞಾನಕಾಂಡ ಅಥವ ವೇದಾಂತವನ್ನು ಪ್ರವೇಶಿಸುವ ಅರ್ಹತೆ ಪಡೆಯುತ್ತಾನೆ.

ಈ ರೀತಿಯ ಪ್ರಾರ್ಥನಾ ಮಂತ್ರಗಳ ಮಧ್ಯೆ ವೇದಕಾಲೀನ ಋಷಿಗಳು, ತಾವು ವಾಸಮಾಡುತ್ತಿರುವ ದೇಶದ, ಪರಿಸರದ ಮತ್ತು ಸಮಸ್ತ ಜನರ ಹಿತಕ್ಕಾಗಿ ನಿಸ್ವಾರ್ಥತತೆಯಿಂದ ಪ್ರಾರ್ಥಿಸುವ ಮಂತ್ರಗಳನ್ನೂ ಉಪದೇಶಿಸಿದ್ದಾರೆ.

ಈ ಪ್ರಕಾರದ ಒಂದು ಸುಂದರವಾದ ಮಂತ್ರವನ್ನು ನಾವು ಶುಕ್ಲಯರ್ಜುವೇದದ 24ನೇ ಅಧ್ಯಾಯದ 30, 31 ಮತ್ತು 32 ಮಂತ್ರಗಳಲ್ಲಿ ಕಾಣಬಹುದು.

**ಈ ವೇದ ಮಂತ್ರಗಳ ಸಾರಾಂಶವನ್ನು ತಿಳಿಯಲು ಯತ್ನಿಸೋಣ.**

**ಋಷಿ ಈ ರೀತಿ ಪ್ರಾರ್ಥಿಸುತ್ತಿದ್ದಾರೆ :–** ಹೇ ಸೃಷ್ಟಿಕರ್ತ ಪ್ರಭುವೇ, ನಮ್ಮ ನಾಡಿನ ಎಲ್ಲಾ ಬ್ರಾಹ್ಮಣರು (ಯಾರು ಬ್ರಹ್ಮಪರಾಯಣ ನಿಷ್ಠರೋ ಅವರು) ಜ್ಞಾನಾಗ್ನಿಯಿಂದ ಪ್ರಕಾಶಿಸಲ್ಪಡಲಿ ಅಂಥಹ ಜ್ಞಾನ ಸಂಪನ್ನರಿಂದ ನಮ್ಮ ದೇಶ ವಿಜೃಂಭಿಸಲಿ.

ರಾಷ್ಟ್ರವನ್ನು ಪಾಲಿಸುವ ಅರಸ (ಈಗಿನ ಪ್ರಧಾನ ಹುದ್ದೆಯ ನಾಯಕ) ಶೌರ್ಯವಂತರಾಗಲಿ, ಯುದ್ಧ ನೀತಿ ನಿಪುಣರಾಗಿ ಕ್ಷಾತ್ರ ತೇಜದಿಂದ ಕಂಗೊಳಿಸಲಿ ಮತ್ತು ಭೋಗವ್ಯಸನರಾಗದಿರಲಿ ಮತ್ತು ಯಾವುದೇ ವಿಧವಾದ ಸಂಕುಚಿತ ಮತ್ತು ಕುಬುದ್ಧಿ ಅವರನ್ನು ಸ್ಪರ್ಷಿಸದಿರಲಿ.

ಈ ರಾಷ್ಟ್ರದಲ್ಲಿ ಗೋವುಗಳು ವೃದ್ಧಿಯಾಗಲಿ ಮತ್ತು ಸಂವೃದ್ಧವಾಗಿ ಕ್ಷೀರ ನೀಡುವಂತಾಗಲಿ. ಋಷಭಗಳು ಆರೋಗ್ಯ ಮತ್ತು ಬಲಶಾಲಿಗಳಾಗಲಿ ಈ ರಾಷ್ಟ್ರದ ಅಶ್ವಗಳು ಬಲಶಾಲಿಗಳೂ ಮತ್ತು ವೇಗಗತಿಯುಳ್ಳವುಗಳಾಗಲಿ.

ಈ ರಾಷ್ಟ್ರದ ನಾರಿಯರು ಮಾತೃತ್ವ ಕಾಂತಿಯಿಂದ ಶೋಭಿಸಲಿ. ಈ ಮಾತೃತ್ವಭಾವ ಸುಂದರ ಗೃಹಕೃತ್ಯ ಮೂಡಿಸಲು ಸಹಕಾರಿಯಾಗಲಿ.

ದೇಶದ ಎಲ್ಲಾ ಮಕ್ಕಳೂ ಸಧೃಡರಾಗಿ, ವಿದ್ಯಾವಂತರಾಗಿ, ಸುಶೀಲರಾಗಿ, ಜಯಶಾಲಿಗಳಾಗಲಿ. ರಾಷ್ಟ್ರದ ಯುವಶಕ್ತಿ ಸಂಯಮಶೀಲರಾಗಲಿ ಮತ್ತು ಚತುರತೆಯಿಂದ ವಿದ್ವತ್ ಸಭೆಗಳಲ್ಲಿ ಮೇದಾಶಕ್ತಿಯಿಂದ ವಿಜೃಂಭಿಸುವಂತಾಗಲಿ ಮತ್ತು ತನ್ಮೂಲಕ ಪೂರ್ಣ ಪ್ರಮಾಣದ ಸಭ್ಯನಾಗರೀಕರಾಗಲಿ.

ಸಂತಾನ ಕಾಮನೆಯಿಂದ ಯಜ್ಞ ಮಾಡುವ ಯಜಮಾನನಿಗೆ (ಸದ್‌ಗೃಹಸ್ಥಿನಿಗೆ) ವೀರ ಸಂತಾನ ಪ್ರಾಪ್ತವಾಗಲಿ. ಈ ರಾಷ್ಟ್ರದಲ್ಲಿ ಪರ್ಜನ್ಯ ದೇವನ ಕೃಪೆಯಿಂದ ಕಾಲಕಾಲಕ್ಕೆ ಯಥೇಷ್ಟ ವರ್ಷಧಾರೆಯಾಗಲಿ. ಬೆಳೆಗಳು ಸಂಮೃದ್ಧವಾಗಿ ಫಲಿಸಲಿ.

ಈ ರಾಷ್ಟ್ರದ ಜನರು ತಮ್ಮ ತಮ್ಮ ಕ್ಷೇತ್ರದಲ್ಲಿ ನಿಷ್ಕಾಮದಿಂದ ಸೇವೆ ಸಲ್ಲಿಸುತ್ತಾ ತಮ್ಮ ಬಾಳಿನ ಗುರಿ ಮುಟ್ಟುವಂತಾಗಲಿ ಮತ್ತು ತನ್ಮೂಲಕ ರಾಷ್ಟ್ರದ ಯೋಗಕ್ಷೇಮದ ಕಡೆ ಚಿಂತಿಸುವಂತಾಗಲಿ. ಈಗ ದೇವರು ನೀಡಿರುವ ಸಂಪತ್ತನ್ನೂ, ವಿದ್ಯೆಯನ್ನೂ, ಜ್ಞಾನವನ್ನೂ ನಾವು ಜೋಪಾನದಿಂದ ಕಾಪಾಡಿಕೊಂಡು, ಕಾಲಕಾಲಕ್ಕೆ ಅದನ್ನು ವೃದ್ಧಿಗೊಳಿಸಿಕೊಂಡು ಅವುಗಳ ಸದುಪ ಯೋಗ ಮಾಡಿಕೊಳ್ಳುವ ಋಜ ಮಾರ್ಗಿಗಳಾಗುವಂತಾಗಲಿ.

ಇದು ನಮಗೆ ವೇದಕಾಲೀನ ಋಷಿಗಳು ಉಪದೇಶಿಸಿದ ಅತ್ಯಮೂಲ್ಯ ರಾಷ್ಟ್ರ ಸಮಷ್ಠಿ ಪ್ರಜ್ಞೆಯ ಪ್ರಾರ್ಥನಾ ಮಂತ್ರ. ಇದನ್ನು ವೈದಿಕ ರಾಷ್ಟ್ರಗೀತೆ ಎಂದೂ ಕರೆಯುತ್ತಾರೆ.

ನಾವು ಈ ರಾಷ್ಟ್ರ ಹಿತಚಿಂತಕ ಮಂತ್ರವನ್ನು ಈಗ ನಾವಿರುವ ಕಾಲಘಟ್ಟಕ್ಕೆ ತಕ್ಕಂತೆ ಅಳವಡಿಸಿ ಪ್ರಾರ್ಥಿಸೋಣ. ತಮ್ಮೂಲಕ ರಾಷ್ಟ್ರಪ್ರೇಮವನ್ನೂ ಪರಸ್ಪರ ಭಾಂದವ್ಯವನ್ನೂ ವೃದ್ಧಿಗೊಳಿಸೋಣ.

ಹಿಂದೂ ಶ್ರದ್ದೆಯಂತೆ ದೇವಋಣ, ಋಷಿಋಣ ಮತ್ತು ಪಿತೃಋಣದ ಜೊತೆ ರಾಷ್ಟ್ರಋಣವೂ ಅತಿಮುಖ್ಯ ಈ ರಾಷ್ಟ್ರಋಣವನ್ನು ತೀರಿಸಲು ನಮ್ಮ ನಮ್ಮ ಕ್ಷೇತ್ರದಲ್ಲಿ ನಿಷ್ಠೆಯಿಂದ, ಸಮರ್ಪಣಾಭಾವದಿಂದ ಸೇವೆ ಸಲ್ಲಿಸುವುದೊಂದೇ ಮಾರ್ಗ.

ಈ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಸುಸಂದರ್ಭದಲ್ಲಿ ನಾವೆಲ್ಲಾ ರಾಷ್ಟ್ರಕ್ಕಾಗಿ ವೀರಗತಿ ಹೊಂದಿದ, ಸ್ವಾತಂತ್ರ ಸಂಗ್ರಾಮದಲ್ಲಿ ಸೇವೆ ಸಲ್ಲಿಸಿದ, ಸ್ವಾತಂತ್ರ ಸಂಗ್ರಾಮದಲ್ಲಿ ಪಾಲ್ಗೊಂಡು ಹೊರಜಗತ್ತಿಗೆ ಗೋಚರವಾಗದೇ ಅಳಿದ ಎಲ್ಲಾ ಸೇನಾನಿಗಳಿಗೂ ನಮಿಸೋಣ.

ಈಗ ನಮ್ಮ ಸಮಕಾಲದಲ್ಲಿ, ರಾಷ್ಟ್ರಕ್ಕಾಗಿ ನಿಸ್ವಾರ್ಥದಿಂದ ದುಡಿಯುತ್ತಿರುವ ಎಲ್ಲಾ ಕ್ಷೇತ್ರದ ಜನರಿಗೂ ವಂದಿಸೋಣ.

**ರಾಷ್ಟ್ರಮಾತೆಗೆ ವಂದನೆಗಳು**

**ರಾಷ್ಟ್ರ ಧ್ವಜಕ್ಕೆ ವಂದನೆಗಳು**

**ಎಲ್ಲಾ ದೇಶಪ್ರೇಮಿಗಳಿಗೂ ಇದೋ ವಂದನೆ.**

ಸುವರ್ಣ ಸ್ವಾತಂತ್ರ್ಯ ಮಹೋತ್ಸವದ ಈ ಸುಸಂದರ್ಭದಲ್ಲಿ ದೇಶಭಾಂದವರಿಗೆಲ್ಲಾ ಇದೋ ಶುಭಕಾಮನೆಗಳು.

**ನಮ್ಮ ಭಾರತ ಸುಭಿಕ್ಷವಾಗಲಿ**

**ಸದಾ ಶಾಂತಿಯ ತವರೂರಾಗಲಿ.**

**॥ವಂದೇ ಮಾತರಂ॥**

# ಅಧ್ಯಕ್ಷರ ನುಡಿ



**ಆತ್ಮೀಯ ವಿಪ್ರಬಂಧುಗಳಿಗೆ ನಮಸ್ಕಾರಗಳು.**

ಸ್ವಾತಂತ್ರ್ಯ ಅಮೃತ ಮಹೋತ್ಸವದ ಸುಸಂದರ್ಭದಲ್ಲಿ ತಮಗೆಲ್ಲರಿಗೂ ಹಾರ್ದಿಕ ಶುಭಾಶಯಗಳು.

ನಮ್ಮ ದೇಶದ ಅಮೃತ ಮಹೋತ್ಸವದ ಆಚರಣೆಯು ಈ ದೇಶದ ಸಂಸ್ಕೃತಿ, ಪರಂಪರೆಯ ರಕ್ಷಣೆ ಮತ್ತು ಪೋಷಣೆ ಮಾಡುತ್ತಿರುವ ಸಮರ್ಥನಾಯಕ, ದೇಶಭಕ್ತ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ನಡೆಯುತ್ತಿರುವುದು ನಮ್ಮೆಲ್ಲರ ಸೌಭಾಗ್ಯ. ರಾಜಕೀಯ ದಾಸ್ಯದಿಂದ ಸ್ವಾತಂತ್ರ್ಯಬಂದು 75 ವರ್ಷಗಳೇ ಕಳೆದರೂ ಭಾರತೀಯರು ಬೌದ್ಧಿಕ ದಾಸ್ಯದಿಂದ, ಬ್ರಿಟೀಷರು ಬಿಟ್ಟು ಹೋಗಿರುವ ಪಾಶ್ಚಾತ್ಯ ಜೀವನ ಶೈಲಿಯ ದಾಸ್ಯದಿಂದ ಎಷ್ಟರ ಮಟ್ಟಿಗೆ ಸ್ವತಂತ್ರ್ಯರಾಗಿದ್ದೇವೆಂದು ಆತ್ಮಾವಲೋಕನವನ್ನು ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ಮಾಡಿಕೊಳ್ಳಬೇಕಾಗಿದೆ, ಸಿಗುವ ಉತ್ತರವು ಸಮಾಧಾನ ನೀಡೀತೆ?

1947ರಲ್ಲಿ ದೇಶಕ್ಕೆ ದೊರೆತ ಸ್ವಾತಂತ್ರ್ಯದ ಹಿಂದೆ ಅಂದಿನ ನಮ್ಮ ಹಿರಿಯರ ತ್ಯಾಗ ಬಲಿದಾನಗಳನ್ನು ನಾವು ಕೃತಜ್ಞತೆಯಿಂದ ಸ್ಮರಿಸೋಣ. ಅವರ ಅಂದಿನ ಆ ತ್ಯಾಗ ಬಲಿದಾನಗಳಿಂದ ಪಡೆದ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವ ಇಂದಿನ ಜನಾಂಗ ಈ ದೇಶಕ್ಕೆ ನಮ್ಮ ಕೊಡುಗೆ ಏನು ಎಂಬುದನ್ನು ಪ್ರಶ್ನಿಸಿಕೊಳ್ಳಬೇಕಾಗಿದೆ.

ಸ್ವಾರ್ಥ ಹಣ, ಅಧಿಕಾರದಾಹ, ಸ್ವಜನ ಪಕ್ಷಪಾತದಿಂದ ತುಂಬಿ ತುಳುಕುತ್ತಿರುವ ಇಂದಿನ ಕಲುಷಿತ ರಾಜಕೀಯ, ಸಾಮಾಜಿಕ ವಾತಾವರಣದಲ್ಲಿ ಭ್ರಷ್ಟರಾಗದೇ ಪ್ರಾಮಾಣಿಕವಾಗಿ ಬದುಕುವುದು ದುಸ್ತರವಾಗಿದೆ. ಈ ವ್ಯವಸ್ಥೆಯನ್ನು ಕೇವಲ ಟೀಕಿಸುವುದರಲ್ಲಿ ಕಾಲ ಕಳೆಯದೆ ದೇಶಕ್ಕಾಗಿ ನಾವೇನು ಮಾಡಬಹುದೆಂಬುದನ್ನು ಆಲೋಚಿಸಬೇಕಾಗಿದೆ. ಸ್ವಾತಂತ್ರ್ಯದೊಡನೆ ಬಂದ ಜವಾಬ್ದಾರಿ–ಕರ್ತವ್ಯಗಳನ್ನು ಪ್ರತಿಯೊಬ್ಬ ನಾಗರೀಕನು ಮನಗಂಡು, ಅದರಂತೆ ನಡೆದರೆ ದೇಶ ಇನ್ನಷ್ಟು ಪ್ರಗತಿಹೊಂದಲು ಸಾಧ್ಯ. 'ಬಳಕೆದಾರ' ನಿಂದ 'ಕೊಡುಗೆದಾರ' (Consumer to Contributer) ನಾಗುವ ದೃಢ ಸಂಕಲ್ಪವನ್ನು ಈ ಸುವರ್ಣ ಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಮಾಡೋಣ. ಸಮರ್ಥ–ಸಮೃದ್ಧ, ಬಲಿಷ್ಠ ದೇಶವನ್ನು ಕಟ್ಟೋಣ, ನಮ್ಮ ಭವ್ಯ ಪರಂಪರೆಯನ್ನು ಉಳಿಸೋಣ, ಬೆಳೆಸೋಣ, ನಾವೂ ಬೆಳೆಯೋಣ.

ನಾಡಿನ ಸಮುದಾಯದ ಎಲ್ಲ ಯತಿವರ್ಯರು ಚಾತುರ್ಮಾಸ ವ್ರತ ನಿರತರಾಗಿದ್ದಾರೆ. ಭಗವದ್ ಉಪಾಸನೆಯಲ್ಲಿರುವ ಗುರುಗಳ ದರ್ಶನ ಮಾಡಿ ಭಿಕ್ಷಾ ಸಮರ್ಪಣೆ ಅಥವ ಯಥಾನ್ ಶಕ್ತಿ ದಕ್ಷಿಣೆಯೊಂದಿಗೆ ಫಲ ಪುಷ್ಪ ಸಮರ್ಪಿಸಿ ಆಶೀರ್ವಾದ ಪಡೆಯುವುದು ಸತ್ಸಂಪ್ರದಾಯ. ಇದು ಗೃಹಸ್ಥರ ಕರ್ತವ್ಯವೂ ಹೌದು, ಅವರಿಗೆ ಶ್ರೇಯಸ್ಕರವೂ ಹೌದು. ಹಾಗಾಗಿ ಎಲ್ಲಾ ಸಂಪ್ರದಾಯದವರ ವ್ರತ ನಿರತ ಯತಿಗಳ ಆಶೀರ್ವಾದ ಪಡೆಯೋಣ. ಈ ಪವಿತ್ರ ಕಾಲದಲ್ಲಿ ಮಹಾಸಭೆ ನಾಡಿನ ಸಮಸ್ತ ವಿಪ್ರರ ಪರವಾಗಿ ಎಲ್ಲ ಸಂಪ್ರದಾಯಕ್ಕೆ ಸೇರಿದ ಸುಮಾರು 40 ವ್ರತಸ್ಥ ಯತಿಗಳಿಗೆ ಭಿಕ್ಷಾ ಸಮರ್ಪಣೆ ಮಾಡಲು ಸಂಘಟನಾ ಕಾರ್ಯದರ್ಶಿ ರಾಘವೇಂದ್ರ ಭಟ್ ನೇತೃತ್ವದಲ್ಲಿ ಆರಂಭಿಸಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಇದ್ದಕ್ಕಾಗಿ ಸ್ಥಳೀಯ ವಿಪ್ರ ಸಂಸ್ಥೆಗಳ , ಮುಖಂಡರ ಸಹಕಾರ ಕೋರುತ್ತೇನೆ.

ಇತ್ತೀಚೆಗೆ ಆರಂಭಗೊಂಡ ಕಲೆ ಮತ್ತು ಸಂಸ್ಕೃತಿ ವೇದಿಕೆಯ ಉದ್ಘಾಟನಾ ಸಮಾರಂಭವು ಅತ್ಯಂತ ಅಭೂತಪೂರ್ವವಾಗಿ ಜರುಗಿದ್ದು ಸಂತಸದ ಸಂಗತಿ.

ಸಂಗೀತ, ನೃತ್ಯ, ನಾಟಕ ಮುಂತಾದ ದೃಶ್ಯ ಕಲೆಗಳಿಗೆ ಮನುಷ್ಯನನ್ನು ದಿನನಿತ್ಯದ ಜಂಜಾಟದಿಂದ ಮುಕ್ತಗೊಳಿಸಿ ರಸಾನುಭವ ವನ್ನು ನೀಡಿ ಅದ್ವೈತಾನುಭೂತಿಯತ್ತ ಕೊಂಡೊಯ್ಯುವ ಶಕ್ತಿಯಿದೆ. **'ರಸೋ ವೈ ಸಃ'** ಎಂಬ ಉಪನಿಷತ್ತಿನ ಮಹಾವಾಕ್ಯವು ರಸಾನು ಭವವೇ ಬ್ರಹ್ಮಾನುಭವವೆಂದು ತಿಳಿಸುತ್ತದೆ. ಈ ಹಿನ್ನಲೆಯಲ್ಲಿ ಬದುಕಿನ ಸಾರ್ಥಕತೆಗೆ ಅಗತ್ಯವಾಗಿರುವ ಕಲೆ ಮತ್ತು ಸಂಸ್ಕೃತಿಯನ್ನು ಪೋಷಿಸಿ ರಕ್ಷಿಸುವ ಸಲುವಾಗಿ ಮತ್ತು ಸಮುದಾಯದ ಕಲೆಯ ವಿವಿಧ ಕ್ಷೇತ್ರಗಳ ಅನೇಕಾನೇಕ ಪ್ರತಿಭಾವಂತರಿಗೆ ಸೂಕ್ತ ವೇದಿಕೆಯನ್ನು ಏರ್ಪಡಿಸುವ ಮಹಾತ್ವಾಕಾಂಕ್ಷೆಯೊಂದಿಗೆ ಮಹಾಸಭೆಯು ಕಲೆ ಮತ್ತು ಸಾಂಸ್ಕೃತಿಕ ವೇದಿಕೆಯನ್ನು ಆರಂಭಿಸಿದೆ. ಇದರ ಹಿಂದೆ ನಮ್ಮ ಸಮುದಾಯವನ್ನು ಸಾಂಸ್ಕೃತಿಕವಾಗಿ ಬಲಿಷ್ಠಗೊಳಿಸುವ ಉದ್ದೇಶವು ಇದೆ.

ವೇದಿಕೆಯ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಸುರಮಣಿ ಪ್ರವೀಣ ಗೋಡ್ಖಿಂಡಿ ಹಾಗೂ ಚಿ॥ ರಾಹುಲ್ ವೆಲ್ಲಾಳ್‌ರವರ ಸಂಗೀತ ಸುಧೆಯು ಆಗಮಿಸಿದ ಸಹೃದಯ ರಸಿಕರೆಲ್ಲರ ಮನಸೂರೆಗೊಂಡು ಅವಿಸ್ಮರಣೀಯ ಕಾರ್ಯಕ್ರಮವಾಯಿತು.

ಮಹಾಸಭೆಯು ಮುಂಬರುವ ದಿನಗಳ ಕಾರ್ಯಕ್ರಮಗಳಿಗೆ ಇದೊಂದು 'ಮಾದರಿ' ಕಾರ್ಯಕ್ರಮವೆನ್ನುವಂತೆ ಕಾರ್ಯಕ್ರಮವನ್ನು ಸಂಘಟಿಸಿದ ಸಂಚಾಲಕಿ ನಾಗಲಕ್ಷ್ಮೀ ಕೆ. ರಾವ್ ಹಾಗೂ ಸಹ ಸಂಚಾಲಕ ಸತೀಶ್ ಎನ್.ಎಸ್. ಹಾಗೂ ಸಮಿತಿಯ ಸದಸ್ಯರು ನಿಜಕ್ಕೂ ಅಭಿನಂದನಾರ್ಹರು.

ಮುಂಬರುವ ದಿನಗಳಲ್ಲಿ ನಗರದ ವಿವಿಧ ಭಾಗಗಳಲ್ಲಿ ಹಾಗೂ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ನಿಯಮಿತವಾಗಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸ್ಥಳೀಯ ಉದಯೋನ್ಮುಖ ಕಲಾಪ್ರತಿಭೆಗಳಿಗೆ ವೇದಿಕೆಯನ್ನು ಕಲ್ಪಿಸಲಾಗುವುದು.

**॥ ಸರ್ವೇಜನಾಃ ಸುಖಿನೋಭವಂತು ॥**

**ಅಶೋಕ ಹಾರನಹಳ್ಳಿ**
**ಮಹಾಸಭಾಧ್ಯಕ್ಷರು.**

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ಅಗಸ್ಟ್ 15 ನಮಗೆಲ್ಲಾ ಮಹತ್ತ್ವದ ದಿನ. ನಮ್ಮ ನೆಚ್ಚಿನ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಕರೆ ಮೇರೆಗೆ ಇಡೀ ದೇಶವು ಸ್ವಾತಂತ್ರೋತ್ಸವದ 75ನೇ ವರ್ಷದ ಆಚರಣೆಯಲ್ಲಿ ವಿಜೃಂಭಣೆಯಿಂದ ತೊಡಗಿದೆ. 2021 ಆಗಸ್ಟ್ 15 ರಿಂದ ಆರಂಭಿಸಿ ಇಂದಿನವರೆಗೆ ಸ್ವಾತಂತ್ರ ವಿಷಯಕ್ಕೆ ಸಂಬಂಧಿಸಿದ ವೈವಿಧ್ಯಮಯ ಕಾರ್ಯಕ್ರಮಗಳನ್ನು ದೇಶದ ಉದ್ದಗಲಕ್ಕೂ ಆಚರಿಸಿದ ಸಂಭ್ರಮದಲ್ಲಿದ್ದೇವೆ. ಕೇಂದ್ರ ಸರ್ಕಾರದ "ಆಜಾದಿ ಕಾ ಅಮೃತ ಮಹೋತ್ಸವದ" ಕಾರ್ಯಕ್ರಮದಲ್ಲಿ ಆಬಾಲವೃದ್ಧರು ಪಾಲ್ಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಪರಿಶೀಲಿಸಿದರೆ, ಆ ಸ್ವಾತಂತ್ರ್ಯವನ್ನು ಪಡೆಯಲು ನಮ್ಮ ಹಿರಿಯರು ಎಷ್ಟು ಕಷ್ಟಪಟ್ಟರು ಎಂಬುದು ವರ್ಣನಾತೀತವಾದದ್ದು. ರಾಜ ಕೇಂದ್ರೀಕೃತವಾದ ವ್ಯವಸ್ಥೆಯಲ್ಲಿ ಬಹಳಷ್ಟು ರಾಜರು ಆಳಿಕೊಂಡಿದ್ದು, ತಮ್ಮ ತಮ್ಮಲ್ಲೇ ಹೋರಾಡಿಕೊಂಡು ರಾಜ್ಯ ವಿಸ್ತರಣೆಗಳ ಹಂಚಿನಲ್ಲಿದ್ದರು. ಹಲವಷ್ಟು ವಿದ್ರೋಹ, ರಾಜಪಿತೂರಿಗಳು ನಿರಂತರವಾಗಿ ನಡೆಯುತ್ತಿದ್ದವು. ವ್ಯಾಪಾರಕ್ಕಾಗಿ ಬಂದ ಆಂಗ್ಲರು, ಪೋರ್ಚುಗೀಸರು, ಡಚ್ಚರು, ಫ್ರಾನ್ಸ್ ಜನರು, ತಮ್ಮೊಂದಿಗೆ ಸೈನ್ಯವನ್ನು ತಂದು, ಈ ರಾಜರ ರಾಜಕೀಯ ದುರ್ಬಲತೆಯನ್ನು ಚೆನ್ನಾಗಿ ಬಳಸಿಕೊಂಡರು. ನಮ್ಮವರು ಈ ಪರಕೀಯ ಆಳ್ವಿಕೆಯನ್ನು ಒಪ್ಪಿಕೊಂಡದ್ದು ಅನಾಹುತವಾಯಿತು. ಆಂಗ್ಲರು ನಮ್ಮನ್ನೇ ಗುಲಾಮರನ್ನಾಗಿ ಮಾಡಿದರು. ಆದರೂ ಅಲ್ಲಲ್ಲಿ ಈ ಕ್ರೂರ ಆಂಗ್ಲ ಆಳ್ವಿಕೆಯ ವಿರುದ್ಧ ಹೋರಾಟ ಪುಟಿದೇಳುತ್ತಿತ್ತು. ಸ್ವಾತಂತ್ರ್ಯವೀರ ಸಾವರ್‌ಕರ್ ಅವರು 1857ರ ಸಿಪಾಯಿ ದಂಗೆಯನ್ನು ಮೊದಲ ಸ್ವಾತಂತ್ರ್ಯ ಸಮರವೆಂದು ಗುರುತಿಸಿದ್ದಾರೆ. ಇದೊಂದಿಗೆ ಬ್ರಿಟಿಷರ ವಿರುದ್ಧ ನಡೆದ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಲಕ್ಷೋಪಲಕ್ಷ ದೇಶಭಕ್ತರು ಹಲವಾರು ರೀತಿಯ ಕಷ್ಟ-ಕಾರ್ಪಣ್ಯಗಳನ್ನು ಅನುಭವಿಸಿ, ಕಾರಾಗೃಹ ಸೇರಿ, ದೂರದ ಅಂಡಮಾನ್‌ನಲ್ಲಿ ಕರಿ ನೀರಿನ ಶಿಕ್ಷೆಯನ್ನು ಅನುಭವಿಸಿದ್ದಾರೆ. ಅಸಂಖ್ಯಾತ ದೇಶಭಕ್ತರನ್ನು ಗಲ್ಲಿಗೇರಿಸಲಾಗಿತ್ತು. ಅವರ ಸಂಸಾರಗಳು ದಿಕ್ಕಾಪಾಲಾಗಿದ್ದವು. ಸಾವಿರಾರು ಅಜ್ಞಾತ ಸ್ವಾತಂತ್ರ್ಯ ಹೋರಾಟಗಾರರು ಜೀವನದ ಹಂಗಿಲ್ಲದೇ ಮನೆ ಸಂಸಾರಗಳನ್ನು ತೊರೆದು, ತನು-ಮನ-ಧನಗಳನ್ನು ವ್ಯಯಿಸಿ ಈ ಸಂಗ್ರಾಮದಲ್ಲಿ ಪಾಲ್ಗೊಂಡರು. ಕೇವಲ ಕೆಲವು ಮಹನೀಯರ ಹೋರಾಟ ಇತಿಹಾಸದಲ್ಲಿ ದಾಖಲಾಯಿತು. ತಥಾಕಥಿತ ಬುದ್ಧಿಜೀವಿಗಳು ಒಂದೋ-ಎರಡು ಕುಟುಂಬಗಳ ಸ್ವಾತಂತ್ರ್ಯ ಹೋರಾಟವನ್ನೇ ನೈಜವೆಂದು ಬಣ್ಣಿಸಿ ಇತಿಹಾಸ ಪುಸ್ತಕಗಳಲ್ಲಿ ಸೇರಿಸಿ ಸತ್ಯಾಂಶಗಳನ್ನು ಮರೆಮಾಚಿದರು. ಶ್ರೀಸಾಮಾನ್ಯನ ಹೋರಾಟವು ಬೆಳಕಿಗೆ ಬರಲಿಲ್ಲ. ಖ್ಯಾತ ಸಮಾಜಶಾಸ್ತ್ರಜ್ಞರಾದ ಡಾ. ವಿ.ಡಿ.ದಿವೇಕರ್, ಪ್ರತಿಭಾ ರಾನಡೆ, ಡಾ. ಸೂರ್ಯನಾಥ ಕಾಮತ್ ಮುಂತಾದವರು ಈ ಅಗಣಿತ ಅಜ್ಞಾನ ಹೋರಾಟಗಾರರನ್ನು ಕುರಿತು ಒಂದಷ್ಟು ದಾಖಲಿಸಿದ್ದಾರೆ. ಆ ಶ್ರೀಮಾನ್ಯರಲ್ಲಿ ಹಲವಾರು ಪ್ರಾಂತ್ಯ, ರಾಜ್ಯಗಳ ಸಮುದಾಯದವರು, ಬುಡಕಟ್ಟು ಜನಾಂಗದವರು, ನಾಗರಿಕರು, ಸೇನಾಯೋಧರಿದ್ದರು. ಉದಾಹರಣೆಗೆ 50 ವರ್ಷ ಅಂಡಮಾನ್ ಕಾರಾಗೃಹದಲ್ಲಿ ಸೆರೆಯಲ್ಲಿದ್ದ ಭಡೋಯಿ ಸಂಸ್ಥಾನದ ಮುಸಾಯ್ ಸಿಂಗ್ ವಿನಾಯಕ ದಾಮೋದರ ಸಾವರ್‌ಕರ್, ತಮಿಳುನಾಡಿನ ರಾಮನಾಥ ರಘುನಾಥ ಪ್ರದಂ ಸ್ವತಂತ್ರ ಸಂಸ್ಥಾನ ರಾಜನಾಗಿದ್ದು, ಮುತ್ತು ರಾಮಲಿಂಗ ವಿಜಯ ಸೇತುಪತಿ. ತನ್ನ ಜೀವಿತದ 48 ವರ್ಷಗಳಲ್ಲಿ 24 ವರ್ಷಗಳನ್ನು ಜೈಲಿನಲ್ಲಿ ಕಳೆದರು; ಥೇವರ್ ಸಮುದಾಯದ ಮುತ್ತುರಾಮಲಿಂಗ ಥೇವರ್, ಕರ್ನಾಟಕದ ಅಸಂಖ್ಯ ವಿಪ್ರರು ಗಾಂಧೀಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ಅವರಲ್ಲಿ ತಗಡೂರು ರಾಮರಾಯರು, ನರಗುಂದದ ವಿಷ್ಣು ಕುಲಕರ್ಣಿ, ಹಾರನಹಳ್ಳಿ ರಾಮಸ್ವಾಮಿ ಮುಂತಾದವರಿದ್ದರು. ವಿಶ್ವವಿಖ್ಯಾತ ಇಂಡೋ-ಆಂಗ್ಲ ಕಾದಂಬರಿಕಾರ ಡಾ॥ ಹಾಸನ ರಾಜರಾವ್ ಅವರು ತಮ್ಮ ಕಾಂತಾಪುರ ಎಂಬ ಕಾದಂಬರಿಯಲ್ಲಿ ಮೈಸೂರಿನ ಸಣ್ಣಹಳ್ಳಿ ಕಾಂತಾಪುರದಲ್ಲಿ ಬ್ರಿಟಿಷರ ವಿರುದ್ಧ ನಡೆದ ಸ್ವಾತಂತ್ರ್ಯ ಹೋರಾಟವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಕೇಂದ್ರ ಸರ್ಕಾರದ ಅಧಿಕಾರ, ಆಧುನಿಕ ಸಂಸ್ಕೃತ ಕವಿ ಡಾ.ಕೆ.ಎಸ್.ನಾಗರಾಜನ್ ಅವರು ಈ ಸ್ವಾತಂತ್ರ್ಯ ವೀರರ ಬಗ್ಗೆ 'ಭಾರತೀಯ ದೇಶಭಕ್ತ ಚರಿತಮ್' ಎಂಬ ಸಂಗ್ರಹ ಗದ್ಯಕಾವ್ಯವನ್ನು ಮನಮೋಹಕವಾಗಿ ರಚಿಸಿದ್ದಾರೆ. ವಿಚಾರವಾದಿ ಡಾ. ಹೆಚ್.ನರಸಿಂಹಯ್ಯನವರು ಹೇಳುತ್ತಿದ್ದಂತೆ ಸ್ವಾತಂತ್ರ್ಯಾನಂತರ ಜನಿಸಿದ ಭಾರತೀಯರಿಗೆ, ರಾಜಕೀಯ ನೇತಾರರಿಗೆ ಸ್ವಾತಂತ್ರ್ಯ ಹೋರಾಟದ, ಮೈಸೂರು ಚಳುವಳಿಯ ಮಹತ್ತ್ವ, ಕಷ್ಟ-ನಷ್ಟ, ನೋವು,-ನಲಿವು, ತ್ಯಾಗ ಬಲಿದಾನಗಳ ಪರಿಚಯವಿಲ್ಲ. ಇದನ್ನೇ ಸಮರ್ಪಕವಾಗಿ ದಾಖಲಿಸಿ, ಶಾಲಾ-ಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ಸೇರಿಸುವಂತೆ ಒತ್ತಾಯಿಸುತ್ತಿದ್ದರು. ಅಜ್ಞಾನ ಸಂಸ್ಕೃತ ಕವಿ ಹೇಳಿದಂತೆ ನಾಗರಿಕರು ಆತ್ಮತ್ಯಾಗ-ದೇಶಭಕ್ತಿಯಿಂದ ಸಮ್ಮಾನಕ್ಕೆ ಯಾವಾಗಲೂ ಅರ್ಹರಾಗಬೇಕು. (**ಆತ್ಮತ್ಯಾಗಃ ದೇಶಭಕ್ತಿಃ ಸಂಮಾನಾರ್ಹಃ ಸದಾ ಭವ**). ಆದರೆ ಇಂದಿನ ಬಹಳಷ್ಟು ಜನತಾಪ್ರಭುಗಳು ಸ್ವಾರ್ಥಕ್ಕೋಸ್ಕರ ರಾಜ, ದೇಶವನ್ನೇ ತ್ಯಾಗ ಮಾಡಲು ಸಿದ್ಧರು. ಖ್ಯಾತ ಪತ್ರಕರ್ತ ದು.ಗು. ಲಕ್ಷಣ್ ಹೇಳಿದಂತೆ ಈ ಅಜ್ಞಾತ ಹೋರಾಟದಲ್ಲಿ ಯಾರೂ ಸಹ ಪ್ರಸಿದ್ಧ ತಾಮ್ರಪತ್ರ ಮಾಸಾಶನ, ನೌಕರಿ ಆಸೆಗೆ ಹೋರಾಟದಲ್ಲಿ ತೊಡಗಿರಲಿಲ್ಲ. ಇಂದು ಅವರೆಲ್ಲರನ್ನು ಸ್ಮರಿಸಿ ಕೃತಜ್ಞತಾಪೂರ್ವಕವಾಗಿ ವಂದಿಸಿ ನಾವು ಕೃತಾರ್ಥರಾಗುವ ಸದಾವಕಾಶ ನಮ್ಮದಾಗಿದೆ. ಸ್ವಾತಂತ್ರ್ಯ ಹೋರಾಟಗಾರರ ಮನೆತನದಿಂದ ಬಂದು ಮಾರ್ಗದರ್ಶನ ನೀಡುತ್ತಿರುವ ನಮ್ಮ ಮಹಾಸಭಾ ಅಧ್ಯಕ್ಷರಾದ ಸನ್ಮಾನ್ಯ ಅಶೋಕ ಹಾರನಹಳ್ಳಿಯವರಿಗೆ ಈ ಸುಸಂದರ್ಭದಲ್ಲಿ ವಿಪ್ರನುಡಿಯ ನಮನ, ನಮಸ್ಕಾರಗಳು.

ತಮ್ಮ ವಿಶ್ವಾಸಿ, **ಪ್ರೊ. ॥ಎಂ.ಕೆ. ಶ್ರೀಧರ್**

# ಸ್ವರ್ಣವಲ್ಲೀ ಮಠದಲ್ಲಿ ಆರಂಭವಾದ ಚಾತುರ್ಮಾಸ್ಯ



ಎಲ್ಲ ಭಾಷೆಗಳಿಗೂ ಮಾತೃಭಾಷೆ ಸಂಸ್ಕೃತ. ಅದನ್ನು ಬೆಳೆಸಿದರೆ ಎಲ್ಲ ಭಾಷೆಗಳಿಗೂ ಅನುಕೂಲವಾಗುತ್ತದೆ. ಸಂಸ್ಕೃತ ಭಾಷೆಜ್ಞಾನ ಭಂಡಾರದ ಕೀಲಿ ಕೈ, ಅದನ್ನು ಉಳಿಸಿ ಬೆಳೆಸುವ ಕಾರ್ಯ ಆಗಬೇಕಿದೆ ಎಂದು ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ನುಡಿದರು. ಅವರು ಸ್ವರ್ಣವಲ್ಲಿ ಮಠದಲ್ಲಿ 32ನೇ ಚಾತುರ್ಮಾಸ್ಯದ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಆಶೀರ್ವಚನ ಮಾಡಿದರು.

ಆಚರಣೆ ಧರ್ಮದ ಮೌಲ್ಯಗಳನ್ನು ನೆನಪಿಸಿಕೊಳ್ಳುವುದ ಗೋಸ್ಕರವಾಗಿದೆ. ವೈರಾಗ್ಯ ಮತ್ತು ಭಕ್ತಿ ನಮ್ಮ ಧರ್ಮ ದ ಮೌಲ್ಯಗಳಲ್ಲಿ ಬಹು ಮುಖ್ಯವಾದಂತವು. ವೈರಾಗ್ಯ ಮತ್ತು ಭಕ್ತಿ ಎರಡೂ ಸೇರಿರುವ ವ್ಯಕ್ತಿಗಳು ವಿರಳಾತಿವಿರಳ. ಅಂತಹವರಲ್ಲಿ ವ್ಯಾಸರು ಹಾಗೂ ಶಂಕರಾಚಾರ್ಯರು ಗುರುತಿಸಿಕೊಂಡಿದ್ದರು ಎಂದ ಶ್ರೀಗಳು, ವ್ಯಾಸರ ಪೂಜೆಯೊಂದಿಗೆ ಯತಿಗಳು ಇಂದಿನಿಂದ ಚಾತುರ್ಮಾಸ ವ್ರತವನ್ನು ಪ್ರಾರಂಭಿಸುತ್ತಾರೆ ಎಂದರು.

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ **ಬಿ ಸಿ ನಾಗೇಶ್** ಮಾತನಾಡಿ, ಜಗತ್ತಿನ ಶ್ರೇಷ್ಠಭಾಷೆ ಸಂಸ್ಕೃತ ಎಲ್ಲಿ ಕಣ್ಮರೆ ಆಗಿಬಿಡಬಹುದು ಎಂಬ ಆತಂಕ ಕಾಡುತ್ತಿತ್ತು. ಈ ದೇಶದಲ್ಲಿ ಏನು ಕಲಿಸಬೇಕು, ಹೇಗೆ ಕಲಿಸಬೇಕು? ಚಿಂತನಗಳೇ ನಡೆದಿರಲಿಲ್ಲ. ಅಟಲ್ ಜಿ ಕಾಲದಲ್ಲಿ ಶಿಕ್ಷಣ ವ್ಯವಸ್ಥೆ ಬದಲಿಸಲು ಯತ್ನಿಸಿದ್ದರೂ ಸಾಧ್ಯವಾಗಿರಲಿಲ್ಲ. ಹೊಸ ಶಿಕ್ಷಣ ನೀತಿ ಜಾರಿಗೆ ತರಲು ಯತ್ನಗಳು ಈಗ ನಡೆದಿವೆ. ಮೊದಲ ಭಾಷೆ ಮಾತೃ ಭಾಷೆ ಆಗಬೇಕು ಎಂದು ಕೇಂದ್ರಕ್ಕೆ ಅಭಿಪ್ರಾಯ ಕಳಿಸಿದ್ದೇವೆ. ರಾಜ್ಯದ ಶಿಕ್ಷಣದಲ್ಲಿ ನೈತಿಕ ಶಿಕ್ಷಣ ಅಳವಡಿಸಲು ಯತ್ನ ನಡೆದಿದೆ. ಎಲ್ಲಾ ಸ್ವಾಮೀಜಿಗಳ ಸಲಹೆ ಪಡೆದು ಪಠ್ಯಕ್ರಮ ರಚಿಸಲಿದ್ದೇವೆ ಎಂದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ **ಶಂಭುಲಿಂಗ ಹೆಗಡೆ ನಡಗೋಡು ಹಾಗೂ ನಾಡೋಜ ಡಾ| ಕೃಷ್ಣಪ್ರಸಾದ** ಇವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಗಣೇಶ ಮಾನಸ ಪೂಜಾ, ಸತ್ಯವಿನಾಯಕ ವ್ರತ, ಅದ್ಭುತ ನಿಷ್ಠೆ ಹಾಗೂ ಅನುಷ್ಠಾನ ಎಂಬ ಮೂರು ಕೃತಿಗಳನ್ನು ಶ್ರೀಗಳು ಬಿಡುಗಡೆಗೊಳಿಸಿದರು.

ಶ್ರೀ ಪ್ರಣವಾನಂದ ಸ್ವಾಮಿಗಳು ಉಪಸ್ಥಿತರಿದ್ದರು. ಮಠದ ಆಡಳಿತ ಮಂಡಳಿ ಅಧ್ಯಕ್ಷ ವಿ. ಎನ್. ಹೆಗಡೆ ಬೊಮ್ನಳ್ಳಿ ಸ್ವಾಗತಿಸಿದರು. ಆರ್. ಎನ್. ಭಟ್ಟ ಸುಗಾವಿ ಕಾರ್ಯಕ್ರಮ ನಿರ್ವಹಿಸಿದರು. ಮಾತೃ ಮಂಡಳಿ ಅಧ್ಯಕ್ಷೆ ಗೀತಾ ಹೆಗಡೆ ಸೇರಿ ಹಲವರು ಉಪಸ್ಥಿತರಿದ್ದರು.

ಜಾಹಿರಾತು

## ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು-560 050.

**ಸ್ಥಳದ ಬಾಡಿಗೆ ಇರುವುದಿಲ್ಲ**

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080-26793054 ಮೊಬೈಲ್ 8277433666**

# ಭಾರತದ ಜ್ಞಾನಪರಂಪರೆ ವಿಶ್ವಕ್ಕೆ ಬೆಳಕಾಗಲಿ: ರಾಮಚಂದ್ರಾಪುರ ಶ್ರೀ



ಸಮಾಜಕ್ಕೆ ಸುಜ್ಞಾನದ ಬೆಳಕನ್ನು ಹರಿಸಿದ ಗುರು ಪರಂಪರೆಯ ಪೂಜೆಯೇ ಗುರುಪೂರ್ಣಿಮೆಯ ವಿಶೇಷ. ಭಾರತದ ಜ್ಞಾನ ಪರಂಪರೆ ವಿಶ್ವಕ್ಕೆ ಬೆಳಕಾಗಬೇಕು ಎಂಬ ಮಹತ್ಸಂಕಲ್ಪದೊಂದಿಗೆ ಈ ಬಾರಿಯ ಚಾತುರ್ಮಾಸ್ಯವನ್ನು 'ಗುರುಕುಲಚಾತುರ್ಮಾಸ್ಯ' ವಾಗಿ ಆಚರಿಸಲಾಗುತ್ತಿದೆ ಎಂದು **ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳು** ಹೇಳಿದರು.

ಗೋಕರ್ಣದ ಅಶೋಕೆಯಲ್ಲಿ 13.07.2022 ರಂದು ಆರಂಭವಾದ 'ಗುರುಕುಲ ಚಾತುರ್ಮಾಸ್ಯ'ದ ಧರ್ಮಸಭೆಯಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಗುರುಪೂರ್ಣಿಮೆ ಎನ್ನುವುದು ಜ್ಞಾನಚೈತನ್ಯದ ಪೂಜೆ. ಅಶೋಕೆಯಲ್ಲಿ ನಿರ್ಮಾಣವಾಗುತ್ತಿರುವ ಶ್ರೀ ವಿಷ್ಣುಗುಪ್ತ ವಿಶ್ವವಿದ್ಯಾಪೀಠದ ಮೂಲ ಉದ್ದೇಶವೂ ಸುಜ್ಞಾನ ಪ್ರಸಾರ. ವಿಶ್ವವಿದ್ಯಾಪೀಠ ಕಟ್ಟಲು ಸಮಸ್ತ ಸಮಾಜವನ್ನು ತೊಡಗಿಸುವುದೇ ಗುರುಕುಲ ಚಾತುರ್ಮಾಸ್ಯದ ಸಂಕಲ್ಪ ಎಂದರು. ಈ ಚಾತುರ್ಮಾಸ್ಯ ವಿ.ವಿ.ವಿ.ಗೆ ಭೀಮಶಕ್ತಿಯನ್ನು, ರಾಮಶಕ್ತಿಯನ್ನು ನೀಡಲಿ. ತಾನು ಬೆಳಗಿ, ದೇಶವನ್ನು ಬೆಳಗಿ, ವಿಶ್ವವನ್ನು ಬೆಳಗುವಂತಾಗಲಿ ಎಂದು ಆಶಿಸಿದರು.

ಸಮಸ್ತ ಸಮಾಜಕ್ಕೆ ಜೀವನದ ಪಾಠ ಹೇಳಿಕೊಡುವವನು ಗುರು; ಹೇಳಿಕೊಡುವ ತಾಣವೇ ಮಠ ಎಂದು ವಿಶ್ಲೇಷಿಸಿದರು. ವಿಧಾನಸಭಾಧ್ಯಕ್ಷ **ವಿಶ್ವೇಶ್ವರ ಹೆಗಡೆ ಕಾಗೇರಿ** ಮಾತನಾಡಿ, ಆಧ್ಯಾತ್ಮಿಕವಾಗಿ ನಮ್ಮ ತಹಳದಿಯನ್ನು ನಾವು ಬಲಗೊಳಿಸಬೇಕು. ದೇಶಮೊದಲು ಎಂಬ ಜಾಗೃತಭಾವದಲ್ಲಿ ಜ್ಞಾನ ಸಂಪತ್ತು ರಕ್ಷಿಸಿಕೊಳ್ಳಲು ಮುಂದಾಗೋಣ ಎಂದು ಕರೆ ನೀಡಿದರು. ಅಶೋಕೆಯಲ್ಲಿ ಹಚ್ಚಿದ ವಿಷ್ಣುಗುಪ್ತ ವಿಶ್ವವಿದ್ಯಾಪೀಠ ಎಂಬ ಜ್ಞಾನದ ದೀಪ ಇಡೀ ವಿಶ್ವವನ್ನು ಬೆಳಗುವಂತಾಗಲಿ ಎಂದು ಆಶಿಸಿದರು.

**ಡಾ. ಗಿರಿಧರ ಕಜೆ**ಯವರ ಆಯುರ್ವೇದ ಜ್ಞಾನ ಮಾಲಿಕೆಯ ಮೊದಲ ಪುಸ್ತಕವಾದ 'ಪೌಷ್ಟಿಕ – ಹಾಲು ಮಜ್ಜಿಗೆಯೆಂಬ ಅಮೃತ ದ್ರವ' ಕೃತಿಯು ಈ ಸಂದರ್ಭದಲ್ಲಿ ಲೋಕಾರ್ಪಿತವಾಯಿತು. ಚಾತುರ್ಮಾಸ್ಯ ಮಹತ್ವದ ಬಗ್ಗೆ ವಿದ್ವಾನ್ ಸತ್ಯನಾರಾಯಣ ಶರ್ಮ ಮಾತನಾಡಿದರು. ಹವ್ಯಕ ಮಹಾಮಂಡಲ ಅಧ್ಯಕ್ಷ ಆರ್. ಎಸ್.ಹೆಗಡೆ ಹರಗಿ ದಂಪತಿ ಸಭಾಪೂಜೆ ನೆರವೇರಿಸಿದರು. ಮೋಹನ್ ಭಾಸ್ಕರ ಹೆಗಡೆ ಸ್ವಾಗತಿಸಿದರು.

# ಗದಗ ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ



ಗದಗ್ ಜಿಲ್ಲಾ ಬ್ರಾಹ್ಮಣ ಸಮಾಜದಿಂದ ನೂತನ ಜಿಲ್ಲಾಧ್ಯಕ್ಷರಿಗೆ ಅಧಿಕಾರ ಪದಗ್ರಹಣ ಪ್ರತಿಭಾ ಪುರಸ್ಕಾರ ಸರಕಾರಿ ನಿವೃತ್ತ ನೌಕರರಿಗೆ ಸನ್ಮಾನ ಕಾರ್ಯಕ್ರಮ ದಿನಾಂಕ 31–7–22 ರಂದು ಗದುಗಿನ ವೀರನಾರಾಯಣ ದೇವಸ್ಥಾನದ ಆವರಣದಲ್ಲಿ 11 ಗಂಟೆಗೆ ಪ್ರಾರಂಭವಾಯಿತು ಸಭೆ ಸಾನಿಧ್ಯವನ್ನು ವೇದ ಮೂರ್ತಿ ದಂಡಪಾಣಿ ದೀಕ್ಷಿತರು ವಹಿಸಿದ್ದರು ವೇದಮೂರ್ತಿ ರತ್ನಾಕರ ಭಟ್ ಜೋಶಿ ವೇದಮೂರ್ತಿ ನೆಲೋಗಲ್ ಆಚಾರ್ಯರು ವಹಿಸಿದ್ದರು ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಶ್ರೀ ನಟರಾಜ್ ಭಾಗವತ್ ಉಪಾಧ್ಯಕ್ಷರು.ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೆಂಗಳೂರು ಶಿವಮೊಗ್ಗ ಮುಖ್ಯ ಅತಿಥಿಗಳಾಗಿ ಶ್ರೀನಾಥ್ ಜೋಶಿ ಎಸ್ಪಿ ಲೋಕಾಯುಕ್ತರು ಬೆಂಗಳೂರು. ಮಾನ್ಯ ಶ್ರೀ ವಿಜಯ ನಾಡಜೋಶಿ ಸಹ ಕಾರ್ಯದರ್ಶಿಗಳು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೆಂಗಳೂರು ಹುಬ್ಬಳ್ಳಿ. ಗದಗ್ ಹಾವೇರಿ ಜಿಲ್ಲಾ ಉಸ್ತುವಾರಿಗಳು. ಮಾನ್ಯ ಶ್ರೀ ಡಿಪಿ ಪಾಟೀಲ್ ಶ್ರೀ ಶಂಕರ್ ಪಾಟೀಲ್. ಡಾಕ್ಟರ್. ದತ್ತಮೂರ್ತಿ ಕುಲಕರ್ಣಿ ಡಾ. ಉದಯ ಕುಲಕರ್ಣಿ. ಶ್ರೀಮತಿ ಕಲಾವತಿ ಅಲಗೂರ್. ಶ್ರೀಮತಿ ದೀಪ ಪಾಟೀಲ್ ಹಾವೇರಿ. ಆಗಮಿಸಿದ್ದರು ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷರಾದ ಮಾನ್ಯಶ್ರೀ ವೆಂಕಟೇಶ ಕುಲಕರ್ಣಿ ವಹಿಸಿದ್ದರು. ಪ್ರಾಸ್ತಾವಿಕವಾಗಿ ಮಾನ್ಯ ಶ್ರೀ ಗುರುಣ್ಣ ಬಳಗಾನೂರ ಮಾತನಾಡಿದರು ವಂದನಾರ್ಪಣೆಯನ್ನು ಡಾ. ದತ್ತ ಪ್ರಸನ್ನ ಪಾಟೀಲ್ ನೆರವೇರಿಸಿದರು ಕಾರ್ಯಕ್ರಮವು ಅತಿ ವಿಜೃಂಭಣೆಯಿಂದ ನೆರವೇರಿತು ಗದಗ್ ಜಿಲ್ಲೆಯ ಬ್ರಾಹ್ಮಣರ ಸಮಾವೇಶ ಯಶಸ್ವಿಯಾಯಿತು. ಸದಸ್ಯತ್ವ ಫಾರ್ಮಗಳನ್ನು ಕೊಡಲಾಗಿ ಅಲ್ಲಿಯೇ ಫಾರ್ಮುಲನು ತುಂಬಿಕೊಟ್ಟರು.

# ಮಂತ್ರಾಲಯ: ಒಂದು ಲಕ್ಷ ಹರಿಕಥಾಮೃತಸಾರ ಪಾರಾಯಣ ಸಮರ್ಪಣೆ





ರಾಯಚೂರು–ಮಂತ್ರಾಲಯ ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಒಂದು ಲಕ್ಷ ಹರಿಕಥಾಮೃತಸಾರ ಪಾರಾಯಣ ಸಮರ್ಪಣೆ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಕಾರ್ಯಕ್ರಮ ಸಾನ್ನಿಧ್ಯವಹಿಸಿ ದೀಪಪ್ರಜ್ವಾಲನೆ ಮೂಲಕ ಉದ್ಘಾಟನೆ ನೆರವೇರಿಸಿದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರತೀರ್ಥರು ಅನುಗ್ರಹ ಸಂದೇಶ ನೀಡಿ ಕಾರ್ಯಕ್ರಮದ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದರು.

ಗುರುಸಾರ್ವಭೌಮ ದಾಸಸಾಹಿತ್ಯ ಪ್ರಾಜೆಕ್ಟ್ ಸಹಭಾಗಿತ್ವದಲ್ಲಿ ನಡೆದ ಹರಿಕಥಾಮೃತಸಾರ ಪಾರಾಯಣ ಕಾರ್ಯಕ್ರಮದ ನೇತೃತ್ವವನ್ನು ಅನಂತಪೂರು ಯಶೋದಮ್ಮ ವಹಿಸಿದ್ದರು. ಸುಮಾರು 1500 ಜನ ಸದಸ್ಯರು ಹರಿಕಥಾಮೃತಸಾರ ಪಾರಾಯಣ ಮಾಡಿದರು.

ಪರಮಪೂಜ್ಯ ಶ್ರೀ ಶ್ರೀ ಶ್ರೀ ಸುಭುದೇಂದ್ರ ತೀರ್ಥ ಶ್ರೀಪಾದಂಗಳವರು 10ನೇ ಚಾತುರ್ಮಾಸ್ಯ ದೀಕ್ಷೆಯನ್ನು ಶ್ರೀ ಮಠ ಮಂತ್ರಾಲಯದಲ್ಲಿ ಕೈಗೊಂಡರು. ಈ ಸುಸಂದರ್ಭದಲ್ಲಿ ಶ್ರೀಪಾದಂಗಳವರು ಮಂತ್ರಾಲಯದಲ್ಲಿ ಸಂಸ್ಥಾನ ಪೂಜೆ, ವಿಶೇಷ ಪೂಜೆಗಳನ್ನು ನೆರವೇರಿಸಿದರು.



## ವಿ। ನಾಗೇಂದ್ರ ಭಟ್ಟ ಹಿತ್ಲಳ್ಳಿ ರವರಿಗೆ ಮಹಾಸಭೆಯ ಸನ್ಮಾನ

**ಯಲ್ಲಾಪುರ:–** ಸಂಸ್ಕೃತ ಮತ್ತು ಜ್ಯೋತಿಷ್ಯ ಶಾಸ್ತ್ರದ ಪ್ರಕಾಂಡ ಪಂಡಿತರಾಗಿರುವ ವಿ। ನಾಗೇಂದ್ರ ಭಟ್ಟ ಹಿತ್ಲಳ್ಳಿ ರವರಿಗೆ ಫ್ಲೋರಿಡಾದ ಶ್ರೀವಿದ್ಯಾ ಅಂತರಾಷ್ಟ್ರೀಯ ವೇದವಿಜ್ಞಾನ ವಿಶ್ವವಿದ್ಯಾಲಯವು ಶ್ರೀಯುತರ ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ಘೋಷಿಸಿದೆ. ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಿರುವ ಹಿನ್ನೆಲೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಹಿತ್ಲಳ್ಳಿ ನಾಗೇಂದ್ರ ಭಟ್ಟ ರವರ ಮನೆಗೆ ತೆರಳಿ ಗೌರವ ಸನ್ಮಾನ ಮಾಡಲಾಯಿತು. ಅವರನ್ನು ನೋಡುತ್ತಿದ್ದಾಗ ಋಷಿಯ ಬಾವ, ತಪಸ್ಸಿನ ಶಕ್ತಿಯ ಆವರಣ, ಜ್ಞಾನ, ವೇದಾಧ್ಯಯನ ಅಲೆಗಳು ನಮಗೆ ಅಪ್ಪಳಿಸುತ್ತಿತ್ತು, ಇಂತಹ ಪ್ರಕಾಂಡ ಪಂಡಿತರು ನಮ್ಮ ತಾಲ್ಲೂಕಿನಲ್ಲಿರುವುದು ನಮಗೆಲ್ಲಾ ಹೆಮ್ಮೆಯ ಸರಿ, ಇಂತಹ ವಿದ್ವಾಂಸರೇ ಯಲ್ಲಾಪುರಕ್ಕೆ ಶಕ್ತಿ ಕೂಡ, ಆದರ್ಶ ಕೂಡ,

ಈ ಸಂಧರ್ಭದಲ್ಲಿ ಮಹಾಸಭಾದ ಉಪಾಧ್ಯಕ್ಷರಾದ ಶ್ರೀ ಶಶಿಭೂಷಣ ಹೆಗಡೆ,ಪ್ರಸಾದ ಹೆಗಡೆ,ಶ್ರೀಪಾದ ರೈಸದ ಸಿದ್ದಾಪುರ, ಕೆ ಎಸ್ ಭಟ್ಟ ಆನಗೋಡ, ನಾರಾಯಣ ಹೆಗಡೆ ಕರಿಕಲ್ ಅಂಕೊಲಾ, ಎಚ್ ಆರ್ ಗಣೇಶ ಹೊನ್ನಾವರ ಉಪಸ್ಥಿತರಿದ್ದರು.

## ಕಲೆ ಮತ್ತು ಸಾಂಸ್ಕೃತಿಕ ವೇದಿಕೆ ಉದ್ಘಾಟನೆ

# ನಾವೆಲ್ಲಾ ಹಿಂದೂಗಳಾಗಿ ಹುಟ್ಟಿರುವುದೇ ನಮ್ಮ ಪುಣ್ಯ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ದಿನಾಂಕ 30.7.2022 ಭಾರತೀಯ ವಿದ್ಯಾ ಭವನದಲ್ಲಿ ಕಲೆ ಮತ್ತು ಸಾಂಸ್ಕೃತಿಕ ವೇದಿಕೆ ಉದ್ಘಾಟನೆಯನ್ನು ಸುರಮಣಿ ಪಂಡಿತ್ ಡಾಕ್ಟರ್ ಶ್ರೀ ಪ್ರವೀಣ್ ಗೋಡ್ಖಿಂಡಿ ದೀಪ ಬೆಳಗಿ ಉದ್ಘಾಟಿಸಿದರು.

ಈ ಸಮಯದಲ್ಲಿ ಸುಪ್ರಸಿದ್ಧ ಸಂಗೀತಗಾರ ವಿದ್ವಾನ್ ಚಿ ||ರಾಹುಲ್ ಆರ್ ವೆಲ್ಲಾಲ್, ಶ್ರೀ ಕೆ ಜಿ ರಾಘವನ್ ಅಧ್ಯಕ್ಷರು ಭಾರತೀಯ ವಿದ್ಯಾ ಭವನ್, ಹೆಚ್ ಎನ್ ಸುರೇಶ್ ನಿರ್ದೇಶಕರು ಭಾರತೀಯ ವಿದ್ಯಾ ಭವನ್ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಅಶೋಕ್ ಹಾರನಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಕಲೆ ಮತ್ತು ಸಾಂಸ್ಕೃತಿಕ ವೇದಿಕೆ ಸಂಚಾಲಕಿ ಶ್ರೀಮತಿ ನಾಗಲಕ್ಷ್ಮಿ ಕೆ ರಾವ್‌ರವರು ಸ್ವಾಗತ ಮತ್ತು ಪ್ರಾಸ್ತಾವಿಕ ಭಾಷಣ ಮಾಡಿ ವೇದಿಕೆಯ ಉದ್ದೇಶ ಮತ್ತು ಚಟುವಟಿಕೆ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು. ಸುರಮಣಿ ಪಂಡಿತ್ ಡಾಕ್ಟರ್ ಶ್ರೀ ಪ್ರವೀಣ್ ಗೋಡ್ಖಿಂಡಿ ಅವರ ವ್ಯಕ್ತಿ ಪರಿಚಯವನ್ನು ಕಲೆ ಮತ್ತು ಸಾಂಸ್ಕೃತಿಕ ವೇದಿಕೆಯ ಸಹ ಸಂಚಾಲಕರಾದ ಶ್ರೀ ಎನ್. ಸತೀಶ್ ರವರು ಮಾಡಿದರು. ಪ್ರವೀಣ್ ಗೋಡ್ಖಿಂಡಿ ಅವರು ಉದ್ಘಾಟನಾ ಭಾಷಣ ಮಾಡಿ ಎ ಕೆ ಬಿ ಎಮ್ ಎಸ್ ಅಹ್ವಾನಕ್ಕೆ ಹರ್ಷ ವ್ಯಕ್ತಪಡಿಸಿ ಪ್ರೋತ್ಸಾಹ ನುಡಿಗಳನ್ನು ಹೇಳಿದರು.

ಮುಖ್ಯ ಅತಿಥಿಗಳಾದ ಶ್ರೀ ಕೆ ಜಿ ರಾಘವನ್ ಮಾತನಾಡುತ್ತ 'ಹಿಂದೂ ಧರ್ಮದಲ್ಲಿ ದೇವರಿಗೂ ನಮಗಿರುವ ಸಂಬಂಧವನ್ನು ಹಾಗೂ ಎಲ್ಲರನ್ನೂ ಗೌರವಿಸಬೇಕೆಂಬ ಮೌಲ್ಯವನ್ನು ತಿಳಿಸಿಕೊಟ್ಟಿರುವ ನಮ್ಮ ಧರ್ಮದ ಸಾಂಸ್ಕೃತಿಕ ಪರಂಪರೆಯಿಂದಲೇ ಜಗತ್ತಿನಾದ್ಯಂತ ಭಾರತೀಯರಿಗೆ ಮಾನ್ಯತೆ ದೊರೆಯಲು ಕಾರಣವಾಗಿದೆ. ಇಂತಹ ಭವ್ಯ ಪರಂಪರೆಯ ಸಂಸ್ಕೃತಿಯನ್ನು ಹೊಂದಿದ ಹಿಂದೂ ಧರ್ಮದಲ್ಲಿ ಹುಟ್ಟಿರುವುದೇ ನಮ್ಮೆಲ್ಲರ ಪುಣ್ಯ. ಜಾತಿ, ವರ್ಣ, ಧರ್ಮ, ದೇಶಗಳೆಂಬ ಮಿತಿಯನ್ನು ಮೀರಿದ ಇಂತಹ ಮಹಾನ್ ಸಂಸ್ಕೃತಿ–ಕಲೆಯನ್ನು ಪೋಷಣೆ ಮತ್ತು ಸಂರಕ್ಷಣೆಗೆ ಮಹಾಸಭೆಯು ಕಲೆ ಮತ್ತು ಸಾಂಸ್ಕೃತಿಕ ವೇದಿಕೆಯನ್ನು ಆರಂಭಿಸುತ್ತಿರುವುದು ಅತ್ಯಂತ ಯೋಗ್ಯವೂ, ಮಹತ್ವವೂ ಆಗಿದೆ' ಎಂದು ತಿಳಿಸಿದರು. ಮಹಾಸಭೆಯ ಮುಂದಿನ ಎಲ್ಲಾ ಕಲೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಭಾರತೀಯ ವಿದ್ಯಾಭವನವು ಸದಾ ತೆರೆದಿರುತ್ತದೆ ಎಂದು ಘೋಷಿಸಿದಾಗ ನೆರೆದಿದ್ದ ಕಲಾಭಿಮಾನಿ ಗಳೆಲ್ಲರೂ ದೀರ್ಘ ಕರತಾಡನದ ಮೂಲಕ ಸ್ವಾಗತಿಸಿದರು.

ಶ್ರೀ ಅಶೋಕ ಹಾರನಹಳ್ಳಿಯವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಸಂಖ್ಯಾಬಲದ ಕೊರತೆಯಿಂದ ರಾಜಕೀಯವಾಗಿ ಬಲಿಷ್ಠರಾಗಲು ಸಾಧ್ಯವಿಲ್ಲದ ಈ ಸಂದರ್ಭದಲ್ಲಿ ಸಮುದಾಯದ ಪ್ರತಿಭಾವಂತರುಗಳಿಗೆ ಸೂಕ್ತ ವೇದಿಕೆಯನ್ನು ನಿರ್ಮಿಸುವ ಮೂಲಕ ಸಾಂಸ್ಕೃತಿಕವಾಗಿ ಸಮಾಜವನ್ನು ಬಲಿಷ್ಠಗೊಳಿಸುವ ಉದ್ದೇಶದಿಂದ ಕಲೆ ಮತ್ತು ಸಾಂಸ್ಕೃತಿಕ ವೇದಿಕೆಯನ್ನು ಆರಂಭಿಸಲಾಗಿದೆ ಎಂದರು. ಮುಂಬರುವ ದಿನಗಳಲ್ಲಿ ಸ್ವತಃ ಕಲಾವಿದರು ಹಾಗೂ ಸಂಘಟನಾ ಚತುರರೂ ಆದ ಶ್ರೀಮತಿ ನಾಗಲಕ್ಷ್ಮಿ ಕೆ. ರಾವ್‌ರವರ ಸಂಚಾಲಕತ್ವದ ನೇತೃತ್ವ ಹಾಗೂ ಎನ್.ಕೆ.ಸತೀಶ್‌ರವರ ಸಹ ಸಂಚಾಲಕತ್ವದಲ್ಲಿ ಪೂರ್ಣ ಯಶಸ್ಸನ್ನು ಕಾಣುವ ಭರವಸೆಯನ್ನು ವ್ಯಕ್ತಪಡಿಸಿದರು. ಬೆಂಗಳೂರಿನ ವಿವಿಧ ಭಾಗಗಳಲ್ಲಿ ಪ್ರತೀ ತಿಂಗಳೂ ಹಾಗೂ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲೂ ನಿಯಮಿತವಾಗಿ ಕಾರ್ಯಕ್ರಮಗಳನ್ನು ನಡೆಸುವ ಯೋಜನೆಯನ್ನು ಪ್ರಕಟಿಸಿದರು.

ಶ್ರೀ ಕೆ.ಜಿ. ರಾಘವನ್, ಶ್ರೀ ಹೆಚ್ ಎನ್ ಸುರೇಶ್, ಪ್ರವೀಣ್ ಗೋಡ್ಖಿಂಡಿ ಹಾಗೂ ರಾಹುಲ್ ಆರ್ ವೆಲ್ಲಾಲ್ ದೇಣಿಗೆ ನೀಡಿದ ಶ್ರೀ ಉದಯ್ ಗರುಡಾಚಾರ್ – ಶಾಸಕರು, ಚಿಕ್ಕಪೇಟೆ ವಿಧಾನಸಭಾ ಮತ್ತು ಶ್ರೀಮತಿ ಮೇದಿನಿ ಉದಯ್ ಗರುಡಾಚಾರ್ ಅವರುಗಳಿಗೆ ಎ ಕೆ ಬಿ ಎಮ್ ಎಸ್ ವತಿಯಿಂದ ಸನ್ಮಾನಿಸಲಾಯಿತು. ಶ್ರೀ ಅಶೋಕ ಹಾರನಹಳ್ಳಿ ಅವರಿಗೆ ಭಾರತೀಯ ವಿದ್ಯಾ ಭವನದ ವತಿಯಿಂದ ವಿಶೇಷ ಸನ್ಮಾನ ಮಾಡಿದ್ದು ಸಭಿಕರಿಗೆ ಹರ್ಷ ತಂದು ಕೊಟ್ಟಿತು.

ಮಹಾಸಭೆಯ ಸದಸ್ಯರುಗಳಾದ ಶ್ರೀ ಸುನಿಲ್‌ಪುರಾಣಿಕ್, ಕಿಕ್ಕೇರಿ ಕೃಷ್ಣಮೂರ್ತಿ, ಶ್ರೀಮತಿ ವಿದ್ಯಾ ರವಿಶಂಕರ್ ಅವರುಗಳಿಗೆ ಗೌರವಯುತವಾಗಿ ಸನ್ಮಾನ ಮಾಡಲಾಯತು.

ಸುಂದರ ಸಂಜೆಯ ಪ್ರಾರಂಭವನ್ನು ವಿದ್ವಾನ್ ಚಿ|| ರಾಹುಲ್ ಆರ್ ವೆಲ್ಲಾಲ್ ತಮ್ಮ ಸಂಗೀತದಿಂದ ಶುರು ಮಾಡಿ ಸಭಿಕರನ್ನು ರಂಜಿಸಿದರು. ಮುಂದಿನ ಕಾರ್ಯಕ್ರಮವನ್ನು ವೇಣುವಾದನದಿಂದ ಸುರಮಣಿ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಅವರು ನಡೆಸಿಕೊಟ್ಟರು. ರಾಗ ಯಮನ್ ಇಂದ ಪ್ರಾರಂಭಿಸಿ, ಭೀಮಪಲಾಸ್ ರಾಗ ನುಡಿಸಿ ತಮ್ಮ ಕಚೇರಿಯನ್ನು ಪಿಳ್ಳಂಗೋವಿ ಚೆಲುವ ಕೃಷ್ಣ ಎಲ್ಲಿ ನೋಡಿದಿರಿ ಹಾಡಿನಿಂದ ಕೊನೆಗೊಂಡಿತು. ಸಭಿಕರು ಇನ್ನೊಂದು ಲೋಕದಲ್ಲಿ ತೇಲುತ್ತ ಭಾವನಾತ್ಮಕಕ್ಷಣ ಅನುಭವಿಸಿದ್ದು ಕಾರ್ಯಕ್ರಮಕ್ಕೆ ಮೆರಗು ಕೊಟ್ಟಿತ್ತು. ವಂದನಾರ್ಪಣೆಯನ್ನು ಶ್ರೀ ಸತೀಶ್ ಎನ್.ಎಸ್.ರವರು ನೆರವೇರಿಸಿಕೊಟ್ಟರು.

ಮನಸ್ಸಿಗೆ ಮುದ ನೀಡಿದ ಸಂಗೀತದೊಂದಿಗೆ ಕಾರ್ಯಕ್ರಮದ ಕೊನೆಯಲ್ಲಿ ಆಯೋಜಿಸಿದ ರುಚಿಕರ ಭೋಜನದೊಂದಿಗೆ ಅಪಾರ ಸಂಖ್ಯೆಯಲ್ಲಿ ಆಗಮಿಸಿದ ಸಹೃದಯ ರಸಿಕರಿಗೆ ಅವಿಸ್ಮರಣೀಯ ಕಾರ್ಯಕ್ರಮ ಎಂಬ ಭಾವನೆ ಮೂಡಿಸಿತು. ಮಹಾಸಭೆಯ ಇತ್ತೀಚಿನ ಕಾರ್ಯಕ್ರಮಗಳಲ್ಲಿ ಅತ್ಯಂತ ಸಮರ್ಪಕವೂ ಅಭೂತಪೂರ್ವವಾಗಿ ಸಂಘಟಿಸಿದ ಸಂಚಾಲಕರು, ಸಹ ಸಂಚಾಲಕರು ಮತ್ತು ಸದಸ್ಯರುಗಳು ಅಭಿನಂದನಾರ್ಹರು.

# ಮಹಾಸಭೆಯ ಪದಾಧಿಕಾರಿಗಳ ಪ್ರಗತಿ ಪರಾಮರ್ಶನ ಸಭೆ



ದಿನಾಂಕ 02.07.2022ರಂದು ಹಾಸನ ಜಿಲ್ಲೆ, ಬೇಲೂರಿನ ದ್ವಾರ ಸಮುದ್ರ ರೆಸಾರ್ಟ್‌ನಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಪದಾಧಿಕಾರಿಗಳ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ವಹಿಸಿದ್ದರು. ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ, ಖಜಾಂಚಿಯವರು ಹಲವಾರು ಉಪಾಧ್ಯಕ್ಷರು ಗಳು, ರಾಜ್ಯ ಸಂಘಟನಾ ಕಾರ್ಯದರ್ಶಿ, ಸಹಕಾರ್ಯದರ್ಶಿ ಗಳು, ಹಿರಿಯ ಪರಿಷತ್ತಿನ ಸದಸ್ಯರೂ ಹಾಗೂ ಇತರೆ ಪದಾಧಿಕಾರಿಗಳು ಭಾಗವಹಿಸಿದುದು ಸಂತೋಷಕರ ವಿಷಯ.

ಮೊದಲಿಗೆ ಮಹಾಸಭಾದ ಅಧ್ಯಕ್ಷರು ಹಾಗೂ ಇತರೆ ಪದಾಧಿಕಾರಿಗಳನ್ನು ಬೇಲೂರು ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನದ ಆವರಣದಲ್ಲಿ ದೇವಸ್ಥಾನದ ಆಡಳಿತಗಾರರು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಪದಾಧಿಕಾರಿಗಳ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿಗಳು ಸ್ವಾಗತ ಕೋರುತ್ತಾ, ಇಲ್ಲಿಯವರೆಗೆ ನಡೆದಿರುವ ಕಾರ್ಯಕ್ರಮ ಗಳನ್ನು ವಿವರಿಸುತ್ತಾ, ಎಲ್ಲಾ ಪದಾಧಿಕಾರಿಗಳಿಗೆ ಮಹಾಸಭೆಯ ಕಾರ್ಯಕ್ರಮಗಳಲ್ಲಿ ಹಾಗೂ ಸದಸ್ಯತ್ವ ನೋಂದಾವಣೆ ಕಾರ್ಯವನ್ನು ಹೆಚ್ಚಿನ ರೀತಿಯಲ್ಲಿ ನಿರ್ವಹಿಸಬೇಕೆಂದು ಕೋರಿರುತ್ತಾರೆ. ಮಾನ್ಯ ಖಜಾಂಚಿಯವರು ಮಹಾಸಭೆಯ ಹಾಲಿ ಆರ್ಥಿಕ ಪರಿಸ್ಥಿತಿಯನ್ನು ವಿವರವಾಗಿ ಸಭೆಯಲ್ಲಿ ಮಂಡಿಸಿದರು. ತದನಂತರ ಹಲವಾರು ಉಪಾಧ್ಯಕ್ಷರುಗಳು ತಮ್ಮ ಅಭಿಪ್ರಾಯ ಹಾಗೂ ಸೂಚನೆಗಳನ್ನು ವಿವರಿಸಿದರು. ಮಹಿಳಾ ವಿಭಾಗದ ಸಂಚಾಲಕರು ಮಹಿಳೆಯರಿಗೆ ಮೀಸಲಾಗಿರುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸಭೆಯಲ್ಲಿ ವಿವರಿಸುತ್ತಾ, ಎಲ್ಲರ ಸಹಕಾರವನ್ನು ಕೋರಿದರು. ಸಭೆಯಲ್ಲಿ ಸಹ ಕಾರ್ಯದರ್ಶಿಗಳು ಸಹ ತಮ್ಮ ಸಲಹೆ-ಸೂಚನೆಗಳನ್ನು ವಿವರಿಸಿದರು. ತದನಂತರದಲ್ಲಿ ಉಪ ಸಮಿತಿಗಳು ಕೈಗೊಂಡ ಕಾರ್ಯಕ್ರಮಗಳ ಬಗ್ಗೆಯೂ ಸಹ ವಿವರಣೆಗಳನ್ನು ನೀಡಿದರು.

ಮಹಾಸಭೆಯ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಸದಸ್ಯತ್ವ ನೋಂದಾವಣೆ ಬಗ್ಗೆ ಮತ್ತು ಸಂಘಟನೆ ಬಲವರ್ಧನೆಯ ಬಗ್ಗೆ ಸೂಕ್ತ ಸಲಹೆಗಳನ್ನು ವಿವರಿಸಿದರು. ಮತ್ತು ಸಭೆಯ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಹಲವಾರು ಕಾರ್ಯಕ್ರಮ ಗಳನ್ನು ಕಾರ್ಯರೂಪಕ್ಕೆ ತರಲು ಅಮೂಲ್ಯವಾದ ಸಲಹೆಗಳನ್ನು ನೀಡಿದರು.



ಪದಾಧಿಕಾರಿಗಳಿಗೆ ಕಮಾನು ಬಂಡಿ ಸವಾರಿ ಸ್ವಾಗತ

ಇದೇ ಸಂದರ್ಭದಲ್ಲಿ ಪದಾಧಿಕಾರಿಗಳ ಸಭೆಯ ನಂತರ ಮಹಾಸಭೆಯ ಬೈಲಾ ತಿದ್ದುಪಡಿ ಸಮಿತಿಯ ಸಭೆಯು ನಡೆಯಿತು. ಸಮಿತಿಯ ಸಂಚಾಲಕರು ಹಾಗೂ ಸದಸ್ಯರು ಪಾಲ್ಗೊಂಡು ತಮ್ಮ ಸಲಹೆ-ಸೂಚನೆಗಳನ್ನು ನೀಡಿದರು. ಸಮಿತಿಯಲ್ಲಿ ತೆಗೆದುಕೊಂಡ ನಿರ್ಣಯವನ್ನು ದಾಖಲಿಸ ಲಾಯಿತು.

ಮಹಾಸಭೆಯ ರಾಜ್ಯ ಪದಾಧಿಕಾರಿಗಳ ಸಭೆ ನಡೆಸಲು ಸ್ಥಳಾವಕಾಶ ನೀಡಿ ಎಲ್ಲ ರೀತಿಯ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ದ್ವಾರ ಸಮುದ್ರ ರೆಸಾರ್ಟ್‌ನ ಮಾಲೀಕರೂ ಹಾಗೂ ಮಹಾಸಭೆಯ ಕಾರ್ಯಕಾರಿಣಿ ಸಮಿತಿಯ ಸದಸ್ಯರಾದ ಶ್ರೀ ಸಿ.ಆರ್. ವಿಜಯಕೇಶವರವರನ್ನು ಮಹಾಸಭೆಯ ವತಿಯಿಂದ ಅಭಿನಂದಿಸಿ ಸನ್ಮಾನಿಸಲಾಯಿತು.



# ಶಿವಮೊಗ್ಗದಲ್ಲಿ ಸಾಮಸ್ಸಂಹಿತಾ ಯಾಗ




ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಸಾಮ ಸಂಹಿತಾ ಯಾಗದಲ್ಲಿ ವೇ॥ಬ್ರ॥ಶ್ರೀ ಹಂದಲಸು ರಾಘವೇಂದ್ರ ಭಟ್ ರವರು ಮಾತಾಡುತ್ತಾ ನಾವು ಲಭ್ಯವಿರುವ ಜ್ಞಾನದ ಭಂಡಾರವನ್ನು (ವೇದ) ವನ್ನು ಉಳಿಸದಿದ್ದರೆ ಅದು ನಶಿಸಿ ಹೋಗುತ್ತದೆ. ಆದ್ದರಿಂದ ಅದನ್ನು ಉಳಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಅಭಿಪ್ರಾಯಪಟ್ಟರು.

ಇಂದಿನ ವಾತಾವರಣದಲ್ಲಿ ಮನೆ ಮನೆಗಳಲ್ಲಿ ಸಂಹಿತಾಯಾಗ ವನ್ನು ಮಾಡುವುದು ಸುಲಭ ಸಾಧ್ಯವಲ್ಲ. ದೇವಸ್ಥಾನ, ಮಂದಿರ, ಸಾಮಜಿಕ ಸಂಸ್ಥೆಗಳು ಮಾತ್ರ ಇಂತಹ ಯಾಗಗಳನ್ನು ಮಾಡಲು ಸಾಧ್ಯ ಎಂದು ಮನಗಂಡ ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾ 2015 ರಿಂದ 2019ರವರೆಗೆ ಋಕ್, ಯಜುರ್, ಸಾಮ, ಅಥರ್ವ ವೇದ ಯಾಗವನ್ನು ಮಾಡಿ 2019ರಲ್ಲಿ ಆವರ್ತದಲ್ಲಿ ಋಕ್ ಸಂಹಿತ ಯಾಗ, 2020ರಲ್ಲಿ ಯಜುಸ್ಸಂಹಿತಾ ಯಾಗವನ್ನು, 2021ರಲ್ಲಿ ಕೋವಿಡ್ ಕಾರಣದಿಂದ ಯಾಗವನ್ನು ನಡೆಸಲಾಗಿಲ್ಲ. ಈಗ 2020ರಲ್ಲಿ ಸಾಮ ಸಂಹಿತಾ ಯಾಗವನ್ನು ದಿನಾಂಕ 18.07.2022 ರಿಂದ 22.07.2022 ರವರೆಗೆ ಆಚರಿಸಲಾಗಿದೆ. ವಿಶೇಷವಾಗಿ ನಮ್ಮ ವಿದ್ಯಾರ್ಥಿ ನಿಲಯದ ಮಕ್ಕಳಿಗೆ ಹಾಗೂ ಸಾಮಾನ್ಯರಿಗೂ ಈ ವೇದ ಮಂತ್ರಗಳು ಅವರ ಕಿವಿಗಳ ಮೇಲೆ ಬೀಳಲಿ ಎಂಬ ಸದುದ್ದೇಶದಿಂದ ಹಾಗೂ ತನ್ಮೂಲಕ ಅವುಗಳ ಅಧ್ಯಯನಕ್ಕೆ ಮತ್ತು ಉಳಿಸುವಿಕೆಗೆ ಸ್ಫೂರ್ತಿ ಯಾಗಲಿ ಎಂಬ ಆಶಯಹೊಂದಿ ಈ ಮಹತ್ಕಾರ್ಯವನ್ನು ನಡೆಸಲಾಗುತ್ತಿದೆ.

ಶುಭಕೃತ್ ನಾಮ ಸಂವತ್ಸರದ ಆಷಾಢ ಕೃಷ್ಣ ಪಂಚಮಿ ದಿನಾಂಕ 18.07.2022ರ ಸೋಮವಾರದಂದು "ಸಾಮ ಸಂಹಿತಯಾಗ"ವು ವಿದ್ಯುಕ್ತವಾಗಿ, ಶಾಸ್ತ್ರೋಕ್ತ ವಿಧಿ ವಿಧಾನಗಳ ಮೂಲಕ ಆರಂಭ ವಾಯಿತು. ವೇ॥ಬ್ರ॥ಶ್ರೀ ರಾಜೇಶ್ ಭಟ್ಟರು ಪ್ರಧಾನ ಆಚಾರ್ಯತ್ವವನ್ನು ವಹಿಸಿದ್ದರು. ವೇ॥ಬ್ರ॥ಶ್ರೀ ಪರಮೇಶ್ವರ ಭಟ್ಟರು ಬ್ರಹ್ಮತ್ವದ ಸ್ಥಾನವನ್ನು ಅಲಂಕರಿಸಿದ್ದರು. ವೇ॥ಬ್ರ॥ಶ್ರೀ ವಿನಾಯಕ ಭಟ್, ವೇ॥ಬ್ರ॥ಶ್ರೀ ಗಣೇಶ ಭಟ್, ವೇ॥ಬ್ರ॥ಶ್ರೀ ಲಕ್ಷ್ಮೀನಾರಯಣ ಭಟ್ಟರು ಪಾರಾಯಣ ಕಾರ್ಯ ಹಾಗೂ ಯಾಗದ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಿದ್ದರು. ಇವರೆಲ್ಲರೂ ಉತ್ತರ ಕನ್ನಡ ಜಿಲ್ಲೆಯ "ಹೊನ್ನಾವರ"ದವರು. ಯಾಗದ ಸಂಕಲ್ಪ ಮತ್ತು ನಾಂದಿ ಕಾರ್ಯದಲ್ಲಿ ಶ್ರೀ ಯು.ಎಸ್. ಕೇಶವಮೂರ್ತಿ, ಧಾರ್ಮಿಕ ಸಮಿತಿಯ ಸಂಚಾಲಕರು, ಅಧ್ಯಕ್ಷರಾದ ಶ್ರೀ ಕೆ.ಪಿ. ನಟರಾಜ ಭಾಗವತ್ ಹಾಗೂ ಮಹಾಸಭಾದ ನಿರ್ದೇಶಕರುಗಳು, ವಿಶೇಷ ಆಹ್ವಾನಿತರುಗಳು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

ಶ್ರೀಯುತರು ಮಾತನಾಡುತ್ತಾ, ವೇದ ಎಂಬುದು 'ವಿದ್' ನಿಂದ ನಿಷ್ಪನ್ನ ಹೊಂದಿದ್ದು 'ಜ್ಞಾನ' ಎಂಬ ಅರ್ಥವನ್ನು ಕೊಡುತ್ತದೆ. ಈ ಜ್ಞಾನ ಎಂಬದು ನಮ್ಮ ಕಲ್ಪನೆಗೂ ಮೀರಿದ ಒಂದು ಅಗಾಧ ರಾಶಿ/ ಭಂಡಾರ ಇದು ಅಪೌರುಷೇಯ, ಯಾವುದೇ ಒಬ್ಬ ಋಷಿ ಮುನಿ ಮಹರ್ಷಿ ಗಳಿಂದ ರಚಿತವಾದುದದಲ್ಲ. ಮಾನವನು ತನ್ನ ಜೀವನವನ್ನು ಸಾರ್ಥಕ ಮಾಡಿಕೊಳ್ಳಲು ಇದು ದಾರಿದೀಪವಾಗಿದೆ ಜೀವನ ವಿಧಾನವಾಗಿದೆ ಎಂದರು.

ಈ ವಿಶಿಷ್ಟವಾದ ಮಹತ್ತರವಾದ ಸಾಮವೇದವನ್ನು ಸಾಧ್ಯವಾದಷ್ಟು ಎಲ್ಲಾ ವಿಪ್ರರು ಅಧ್ಯಯನ ಅಥವಾ ಶ್ರವಣ ಮಾಡುವುದರ ಮೂಲಕ ಅದನ್ನು ನಶಿಸಿ ಹೋಗಲು ಬಿಡದೆ ಉಳಿಸುವಂತೆ ಕೋರಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತದಲ್ಲಿ ಸಾಧನೆ ಮಾಡಿದ ವೇ॥ಬ್ರ॥ಶ್ರೀ ನಾಗರಾಜ ಶಾಸ್ತ್ರಿ, ಭದ್ರಾವತಿ, ವೇ॥ಬ್ರ॥ಶ್ರೀ ರಾಮಚಂದ್ರ ಗಣೇಶ ಭಟ್ಟರು, ನೀಚಡಿ, ಸಾಗರ ತಾ॥, ವೇ॥ಬ್ರ॥ಶ್ರೀ ಸುಬ್ರಾಯ ಭಟ್ಟರು, ಸೊರಬ ತಾ॥, ವೇ॥ಬ್ರ॥ಶ್ರೀರಂಗನಾಥ ಭಾಗವತ್, ನಗರ, ಹೊಸನಗರ ತಾ॥ ಇವರುಗಳು ಧಾರ್ಮಿಕ ಕ್ಷೇತ್ರಕ್ಕೆ ಹಾಗೂ ಶ್ರೀಮತಿ ಕಾಮಾಕ್ಷಮ್ಮ ಜಗನ್ನಾಥ ಶಾಸ್ತ್ರಿ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಕ್ಕೆ ಮತ್ತು ಶ್ರೀಮತಿ ವಿಶಾಲಾಕ್ಷಿ, ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಸ್ಮರಿಸಿ ಇವರುಗಳನ್ನು ಗೌರವಿಸಿ ಸನ್ಮಾನಿಸಲಾಯಿತು.

ಹಾಗೆಯೇ 2015–2021ರ ಸಾಲಿನ ನಿರ್ಗಮಿತ ನಿರ್ದೇಶಕರು ಹಾಗೂ ವಿಶೇಷ ಆಹ್ವಾನಿತರುಗಳನ್ನು ಅಭಿನಂದಿಸಿ ಪುರಸ್ಕರಿಸಲಾಯಿತು.







## ವ್ಯಾಸಪೂರ್ಣಿಮೆ

**ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾದ ವತಿಯಿಂದ ವ್ಯಾಸ ಪೂರ್ಣಿಮೆಯ ಪ್ರಯುಕ್ತ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ಗುರುವಂದನಾ ಕಾರ್ಯಕ್ರಮ ನಡೆಸಲಾಯಿತು. ವೇ॥ಬ್ರ॥ಶ್ರೀ ಅ.ಪ.ರಾಮಭಟ್ಟರಿಗೆ ಗುರುವಂದನೆ ಯನ್ನು ಎಲ್ಲರ ಪರವಾಗಿ ಶ್ರೀ ನಟರಾಜ ಭಾಗವತ್ ನಡೆಸಿದರು.**

# ಬ್ರಾಹ್ಮಣ ಸಮುದಾಯದ ಏಳಿಗೆಗೆ ಹಲವು ಯೋಜನೆ



ಬೇಲೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದಿಂದ ಬ್ರಾಹ್ಮಣ ಸಮುದಾಯದ ಏಳಿಗೆಗೆ ಹಲವು ಯೋಜನೆಗಳನ್ನು ರೂಪಿಸಲಾಗುತ್ತಿದೆ. ರಾಜಧಾನಿ ಬೆಂಗಳೂರಿನಲ್ಲಿ ಬೃಹತ್ ಕನ್ವೆಷನ್ ಹಾಲ್ ನಿರ್ಮಾಣಕ್ಕೆ ನೆರವು ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ ಹೇಳಿದರು.

ಪಟ್ಟಣದ ಕೋಟೆ ಚನ್ನಕೇಶವ ಸಭಾಂಗಣದಲ್ಲಿ ತಾಲ್ಲೂಕು ಮಟ್ಟದ ವಿಪ್ರ ಸಮಾವೇಶ ಹಾಗೂ ರಾಜ್ಯ ಸಂಘದ ಸದಸ್ಯತ್ವ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಾಸಭಾ ವತಿಯಿಂದ ವಿದ್ಯಾನಿಧಿ ಯೋಜನೆಯಡಿ 2 ಕೋಟಿ ರೂ. ಸಂಗ್ರಹಿಸಿ ಅಗಸ್ಟ್‌ನಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ತಾಲ್ಲೂಕು ಮಟ್ಟದಲ್ಲಿ ಯುವಕರ ಸಮ್ಮೇಳನ ಆಯೋಜನೆ ಉದ್ದೇಶವಿದೆ. ರಾಜ್ಯದಲ್ಲಿರುವ ಬ್ರಾಹ್ಮಣ ಸಮುದಾಯದ ಶಿಕ್ಷಣ ಸಂಸ್ಥೆಗಳನ್ನು ಜೋಡಣೆ ಮಾಡಿ ಬಡಮಕ್ಕಳಿಗೆ ಉಚಿತ ಇಲ್ಲವೆ ಮಿತಿ ಶುಲ್ಕದಡಿ ಶಿಕ್ಷಣದ ಜೊತೆ ಉದ್ಯೋಗ ಇನ್ನಿತರ ಸೌಲಭ್ಯ ಕಲ್ಪಿಸುವ ಮಹತ್ತರ ಆಕಾಕ್ಷೆಯಿದೆ ಎಂದರು.

ಮಹಾಸಭಾದ ವಲಯ ಉಪಾಧ್ಯಕ್ಷ ಟಿ.ಹೆಚ್. ಚಂದ್ರಶೇಖರ್ ರವರು ಮಾತನಾಡಿ ಆಗಸ್ಟ್ 7ರಂದು ಉಚಿತ ಆರೋಗ್ಯ ಶಿಬಿರ ನಡೆಸಲಾಗುತ್ತಿದೆ ಎಂದರು. ಜಿಲ್ಲಾಧ್ಯಕ್ಷ ಶ್ರೀನಿವಾಸಮೂರ್ತಿ ಮಾತನಾಡಿ, ಸಂಘಟನೆ, ಸಂಸ್ಕಾರ, ಉಪನಿಷತ್ತು ಇದ್ದಂತೆ, ನಾವುಗಳು ನೈತಿಕತೆಯಿಂದ ನಡೆದುಕೊಳ್ಳಬೇಕಿದೆ ಎಂದರು.

ಮಹಾಸಭಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ, ಡಾ. ರಾಜೀವ್, ಐಡಿಡಿ ಪ್ರ.ದ. ಕಾಲೇಜು ಅಧೀಕ್ಷಕ ಕೇಶವಕಿರಣ ಪತ್ರಕರ್ತರ ಸಂಘದ ಅಧ್ಯಕ್ಷ ರಾಘವೇಂದ್ರ ಹೊಳ್ಳ ಅವರನ್ನು ಅಭಿನಂದಿಸಿ ಸನ್ಮಾನಿಸಲಾಯಿತು. ರಾಜ್ಯ ಪರಿಷತ್ ಸದಸ್ಯ ಹೊ.ನಾ. ಹಿರಿಯಣ್ಣಸ್ವಾಮಿ, ವಲಯ ನಿರ್ದೇಶಕ ಮಾನವಳ್ಳಿ, ರಾಜ್ಯ ಮಹಿಳಾ ಘಟಕದ ಸಂಚಾಲಕಿ ಶುಭಮಂಗಳ ಸುನೀಲ್ ಮಾತನಾಡಿದರು. ತಾಲ್ಲೂಕು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ವಿಜಯಕೇಶವ ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ವಿಪ್ರ ಮಹಿಳಾ ಘಟಕದ ಅಧ್ಯಕ್ಷೆ ಶ್ರೀವಿದ್ಯಾ ಉಪಸ್ಥಿತರಿದ್ದರು.

## ಸುಂದರ ದೇಗುಲ ಹಿಂದೂಗಳ ಸರ್ವಧರ್ಮ ಸಹಿಷ್ಣುತೆಗೆ ಸಾಕ್ಷಿ



ಬೇಲೂರು: ಹೊಯ್ಸಳ ಅರಸರು ನಿರ್ಮಿಸಿರುವ ಸುಂದರ ದೇಗುಲಗಳು ಹಿಂದುಗಳ ಸರ್ವಧರ್ಮಗಳ ಸಹಿಷ್ಣುತೆಗೆ ಸಾಕ್ಷಿಯಾಗಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸಿ.ಆರ್.ವಿಜಯ್ ಕೇಶವ್, ರಾಜ್ಯ ಉಪಾಧ್ಯಕ್ಷ ಟಿ.ಹೆಚ್. ಚಂದ್ರಶೇಖರ್, ಜಿಲ್ಲಾ ಅಧ್ಯಕ್ಷ ಶ್ರೀನಿವಾಸಮೂರ್ತಿ, ವೇದಬ್ರಹ್ಮ ಮಂಜುನಾಥ್, ದೇವಾಲಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿದ್ಯುಲತಾ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ. ನಾರಾಯಣಸ್ವಾಮಿ, ಸದಸ್ಯ ಗೋ.ಕೃ.ರವೀಂದ್ರ ಮೊದಲಾದವರಿದ್ದರು.

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯ ಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು) ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**–ಸಂಪಾದಕ ಮಂಡಳಿ**


## ಹಾವೇರಿಯಲ್ಲಿ ವಿಪ್ರ ಜಾಗೃತಿ ಸಮಾವೇಶ





ದಿನಾಂಕ 26 ಹಾಗೂ 27 ರಂದು ಹಾವೇರಿಯ ಶ್ರೀ ಕೃಷ್ಣ ದೇವಸ್ಥಾನದ ಶ್ರೀ ಲಕ್ಷ್ಮೀನಾರಾಯಣ ಸಭಾಭವನದಲ್ಲಿ 4ನೇ ಬಾರಿ ಸಾರ್ವಜನಿಕ ಚಿಕ್ಕಯ್ಯ- ದೊಡ್ಡಯ್ಯ ಕಾರ್ಯಕ್ರಮ ಜರುಗಿದವು. ಹಾವೇರಿ ತಾಲೂಕು ಬ್ರಾಹ್ಮಣ ಸಮಾಜದ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮತ-ಬೇಧವಿಲ್ಲದೆ ಜಿಲ್ಲೆಯ ತ್ರಿಮತಸ್ಥರು ಸಂಪೂರ್ಣವಾಗಿ ಪಾಲ್ಗೊಂಡಿದ್ದರಿಂದ ಅದ್ಭುತ ಉತ್ಸವವಾಗಿ ರೂಪುಗೊಂಡು ವಿಪ್ರರ ಜಾಗ್ರತಿ ಹಾಗೂ ಸಂಘಟನೆಗೆ ಸಾಕ್ಷಿಯಾಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಹ ಕಾರ್ಯದರ್ಶಿ ವಿಜಯನಾಡ ಜೋಶಿ ಮಾತನಾಡಿ ಸಂಘಟನೆ ಮತ್ತು ಸದಸ್ಯತ್ವ ಹೆಚ್ಚು ಆಗಬೇಕು ಎಂದರು. ಜಿಲ್ಲಾ ಮುಖಂಡರಲ್ಲೊಬ್ಬರಾದ ವಸಂತ ಮೊಕ್ತಾಲಿ ಮಾತನಾಡುತ್ತಾ "ಇಂಥ ಕಾರ್ಯಕ್ರಮಗಳು ಸಂಘಟನೆಯ ಮೂಲಸೂತ್ರ, ಎಲ್ಲ ವಿಪ್ರರು ಮತ-ಬೇಧವಿಲ್ಲದೆ ಪಾಲ್ಗೊಂಡು ಸಹಯೋಗ ನೀಡಿ, ಮುಂಬರುವ ದಿನಗಳಲ್ಲಿ ಎಲ್ಲಾ ಕಾರ್ಯಕ್ರಮಗಳು ಇದೇ ರೀತಿ ಸಂಘಟಿತವಾಗಿ ಆಚರಿಸುವಂತಾಗ ಬೇಕೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು. ಸಂಘಟನೆಯ ಕುರಿತು ಬದಲಾಗುತ್ತಿರುವ ವಿಪ್ರ ಸಮುದಾಯದ ವಿಚಾರ ಅಭಿನಂದನಾರ್ಹ ಎಂದರು.

## ವಿಪ್ರ ಉದ್ದಿಮೆದಾರರ ನೆರವಿಗೆ ಒಪ್ಪಂದ



ವಿಪ್ರರು ನಡೆಸುತ್ತಿರುವ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಆರ್ಥಿಕ, ಕಾನೂನು ನೆರವೂ ಸೇರಿದಂತೆ ಮಾರುಕಟ್ಟೆ ಸೌಲಭ್ಯ ಕಲ್ಪಿಸುವ ಮೂಲಕ ಉತ್ತೇಜನ ನೀಡುವ ಸಲುವಾಗಿ ಬೆಂಗಳೂರಿನ ವಿಪ್ರ ಫೋರಂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜೊತೆ ಒಡಂಬಡಿಕೆಗೆ ಸಹಿ ಹಾಕಿದೆ.

ಬಸವನಗುಡಿಯ ಅಬಲಾಶ್ರಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಪ್ರ ಬಿಸಿನೆಸ್ ಫೋರಂನ ಅಧ್ಯಕ್ಷ ಜಯತೀರ್ಥ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಒಡಂಬಡಿಕೆಯನ್ನು ಜಂಟಿಯಾಗಿ ಘೋಷಿಸಿದರು.

ಇದಕ್ಕೂ ಮುನ್ನ ಬ್ರಾಹ್ಮಣ ಸಮುದಾಯದ ಕಿರು ಉದ್ದಿಮೆದಾರರು ತಯಾರಿಸಿದ ಉತ್ಪನ್ನಗಳ ಮೂರು ದಿನಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಅಶೋಕ ಹಾರನಹಳ್ಳಿ ಚಾಲನೆ ನೀಡಿದರು. ಸಂಕಷ್ಟ ಸ್ಥಿತಿ ಎದುರಿಸುತ್ತಿರುವ ವಿಪ್ರ ಸಮುದಾಯದ ಕಿರು ಉದ್ದಿಮೆದಾರರಿಗೆ ಬ್ರಾಹ್ಮಣ ಮಹಾಸಭಾ ವತಿಯಿಂದ ಕಾನೂನು ನೆರವು ಸೇರಿದಂತೆ ಅಗತ್ಯವಿರುವ ಎಲ್ಲ ನೆರವನ್ನು ನೀಡುವುದು, ಈ ಒಪ್ಪಂದದ ಉದ್ದೇಶವಾಗಿದೆ. ಅದಕ್ಕಾಗಿ ಮಹಾಸಭಾದ ಕಾನೂನು ಘಟಕ, ಕೈಗಾರಿಕಾ ಘಟಕ ಮಧ್ಯವರ್ತಿಯಾಗಿ ಎಲ್ಲ ನೆರವು ನೀಡಲಿದೆ. ಔದ್ಯಮಿಕ ಕ್ಷೇತ್ರದಲ್ಲಿ ಸಮುದಾಯದ ಜನರು ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಮಹಾಸಭಾ ಆಸರೆಯಾಗಿ ನಿಲ್ಲಲಿದೆ ಎಂದು ಘೋಷಿಸಿದರು.

ಈಗಾಗಲೇ ಮಹಾಸಭಾ ವಿವಿಧ ಶೈಕ್ಷಣಿಕ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು ರಿಯಾಯ್ತಿ ದರದಲ್ಲಿ ಸಮುದಾಯದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ನಿಟ್ಟಿನಲ್ಲಿ ನೆರವಾಗಲಿದೆ. ಬ್ರಾಹ್ಮಣರಿಗೆ ಬದ್ಧಿವಂತಿಕೆಯೇ ಆಸ್ತಿ. ಅದನ್ನು ಬಳಸಿಕೊಂಡು ಸಮಾಜದ ವಿವಿಧ ಸ್ತರಗಳಲ್ಲಿ ಮೇಲೆ ಬರಬೇಕು. ಇದರ ಜತೆಗೆ ಇತರ ಸಮುದಾಯಗಳ ಜತೆಗೂ ಬೆರೆತು ಸಮಾಜದ ಹಿತಕ್ಕಾಗಿ ಒಟ್ಟಾಗಿ ದುಡಿಯಬೇಕು ಎಂದೂ ಕರೆ ನೀಡಿದರು.

ವಿಪ್ರ ಬಿಸಿನಿಎಸ್ ಫೋರಂನ ಅಧ್ಯಕ್ಷ ಜಯತೀರ್ಥ ಅಧ್ಯಕ್ಷತೆ ವಹಿಸಿದ್ದರು. ಮಹಾಸಭಾದ ಸಹ ಕಾರ್ಯದರ್ಶಿ ರವಿಕುಮಾರ್ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ವಿಪ್ರ ಉದ್ಯಮಿಗಳ ಸಂಪರ್ಕ ವಿಳಾಸ ವಿವರಗಳನ್ನೊಳಗೊಂಡ ಕಿರು ಡೈರೆಕ್ಟರಿ ಬಿಡುಗಡೆ ಮಾಡಲಾಯಿತು.

# ಮೈಸೂರಿನಲ್ಲಿ ಡಾ। ಶುಭ ಮಂಗಳರವರಿಗೆ ಸನ್ಮಾನ






ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮೈಸೂರು ವಲಯದ ಜಿಲ್ಲಾ ಬ್ರಾಹ್ಮಣ ಮಹಾಸಭಾ ಯುವ ಬ್ರಾಹ್ಮಣ ಮಹಾಸಭಾ ಹಾಗೂ ಮಹಿಳಾ ಘಟಕ ಮೈಸೂರು ಇವರ ವತಿಯಿಂದ ರಾಜ್ಯ ಸಂಚಾಲಕಿಯಾಗಿ ಆಯ್ಕೆಯಾದ ಡಾಕ್ಟರ್ ಶುಭಮಂಗಳ ಸುನೀಲ್ ಅವರಿಗೆ ಜಂಟಿಯಾಗಿ ಆಯೋಜಿಸಲ್ಪಟ್ಟ ಸನ್ಮಾನ ಸಮಾರಂಭವು ಸಂಧ್ಯಾ ಸುರಕ್ಷಾ ಚಾರಿಟಬಲ್ ಟ್ರಸ್ಟ್ ಇಲ್ಲಿ ಆಯೋಜನೆಗೊಂಡಿತ್ತು. ಈ ಕಾರ್ಯಕ್ರಮವನ್ನು ಕರ್ನಾಟಕದ ಮಾಜಿ ಉನ್ನತ ಶಿಕ್ಷಣ ಸಚಿವ, ನಾಡು ಕಂಡ ಅತ್ಯಂತ ಹಿರಿಯ ರಾಜಕಾರಣಿ ಜಿ ಟಿ ದೇವೇಗೌಡರು ಉದ್ಘಾಟಿಸಿ, ಮಾತನಾಡಿದ ಸಂದರ್ಭದಲ್ಲಿ ..ಬ್ರಾಹ್ಮಣರ ಜವಾಬ್ದಾರಿಗಳು ಹಾಗೂ ಸಂಘಟನೆಯ ಮಹತ್ವ ಹಾಗೂ ಬ್ರಾಹ್ಮಣ ಸಮಾಜದ ಬಗ್ಗೆ ಅವರಿಗಿರುವ ಕಾಳಜಿ ನಿಜಕ್ಕೂ ಮೆಚ್ಚುವಂತದ್ದು ಎಂದು ತಿಳಿಸಿದರು. ಸಭೆಯಲ್ಲಿ ರಾಜ್ಯ ಉಪಾಧ್ಯಕ್ಷರಾದ ನಟರಾಜ್ ಜೋಯಿಸ್ ಹಾಗೂ ಅವರ ತಂಡ ಹಾಗೂ ಮೈಸೂರು ವಿಭಾಗದ ಸಂಚಾಲಕಿ ಶ್ರೀಮತಿ ವಿಜಯಲಕ್ಷ್ಮಿ ಹಾಗೂ ಜಿಲ್ಲಾ ಯುವ ಅಧ್ಯಕ್ಷರಾದ ಸತ್ಯನಾರಾಯಣರವರು ಹಾಗೂ ಬೃಹತ್ ಸಂಖ್ಯೆಯಲ್ಲಿ ಮಹಿಳಾ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ನಂತರ ಸಂಜೆ ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ಅವಧೂತ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮಿಗಳು ಬೆಂಗಳೂರಿನ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ಕಾರ್ಯಕರ್ತರನ್ನು ಆಶೀರ್ವದಿಸಿದರು. ಇವರೊಂದಿಗೆ ಕೇಂದ್ರ ಕಾರ್ಯಕಾರಿಣಿ ಸದಸ್ಯರಾದ ಅನಂತ್ ರಾಮ್ ಹಾಗೂ ಸುನೀಲ್ ಪಾಲ್ಗೊಂಡಿದ್ದರು

## ಸಮಾಜ ಸೇವಾ ರತ್ನ ಪ್ರಶಸ್ತಿ



ಅಖಿಲ ಕರ್ನಾಟಕ ಬ್ರಾಹ್ಮಣ ಯುವಕರ ಸಂಘ ಹಾಗೂ ಶ್ರೀಗುರು ದತ್ತಾತ್ರೇಯ ಟ್ರಸ್ಟ್‌ನ ವತಿಯಿಂದ ಗಿರಿಜಾ ಕಲ್ಯಾಣೋತ್ಸವ ಹಾಗೂ "ಸಮಾಜ ಸೇವಾ ರತ್ನ ರಾಜ್ಯ ಪ್ರಶಸ್ತಿ" ಯನ್ನು ಚಿಂತಕರಾದ ಶ್ರೀ ಪಾವಗಡ ಪ್ರಕಾಶ್ ರಾವ್ ರವರು ಶ್ರೀ ಮೋಹನ್ ಕೆ. ಸಂಪಾದಕರು, ನಿಮ್ಮ ಸಹಕಾರಿ ಟೈಮ್ಸ್ ರವರಿಗೆ ಬೆಂಗಳೂರಿನ ಯಲಹಂಕದ ಶ್ರೀ ಗಾಯತ್ರಿ ಗಣೇಶ ದೇವಸ್ಥಾನದಲ್ಲಿ ವಿತರಿಸಿದರು. ಖ್ಯಾತ ಗಾಯಕ ಶ್ರೀ ಶಶಿಧರ್ ಕೋಟೆ, ಅಧ್ಯಕ್ಷ ಮಣಿಕಂಠ ಖಜಾಂಚಿ, ಲೋಕೇಶ್ ಶರ್ಮಾರವರನ್ನೂ ಚಿತ್ರದಲ್ಲಿ ಕಾಣಬಹುದು.

## ಪ್ರತಿಭಾ ಪುರಸ್ಕಾರ



ಜೆ ಪಿ ನಗರ 7ನೇ ಹಾಗೂ 8ನೇ ಹಂತದ ತ್ರಿಮತಸ್ಥ ವಿಪ್ರ ವೃಂದದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು, ಕಾರ್ಯಕ್ರಮದಲ್ಲಿ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರು, ದಕ್ಷಿಣ ವಲಯ ಸಂಚಾಲಕರದ ಅಶ್ವಥ್ ನಾರಾಯಣರವರು, ಕೇಂದ್ರೀಯ ಕಾರ್ಯಕಾರಿ ಸದಸ್ಯ ಪುಟ್ಟಣ್ಣನವರು ಭಾಜಪ ಪಕ್ಷದ ಪ್ರಮುಖರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಹಾಗೂ ನಾನಾ ರಂಗದ ಪ್ರಮುಖರು ಪಾಲ್ಗೊಂಡಿದ್ದರು.

# ಹೊಯ್ಸಳ ಕರ್ನಾಟಕ ಸಂಘದ ದಿನಾಚರಣೆ



ಎಲ್ಲ ಹಿರಿಯರಲ್ಲೂ ಉತ್ಸಾಹ, ಕುಟುಂಬದ ಸದಸ್ಯರಲ್ಲಿ ಸಂತಸ ಯುವ ಪೀಳಿಗೆಯಲ್ಲಿ ಸಂತಸದ ಕ್ಷಣವನ್ನು ಕಣ್ತುಂಬಿ ಕೊಳ್ಳುವ ತವಕ... ಇವೆಲ್ಲವೂ ಹೊಯ್ಸಳ ಕರ್ನಾಟಕ ಸಂಘದ ದಿನಾಚರಣೆ ಸಮಾರಂಭದಲ್ಲಿ ಕಂಡುಬಂದಿತು. ಬೆಂಗಳೂರು ನಗರದ ಹೊಯ್ಸಳ ಟ್ರಸ್ಟ್ ಸಭಾಂಗಣದಲ್ಲಿ ನಡೆದ ಸಮಾರಂಭ ದಲ್ಲಿ ಶಾಸಕರಾದ ಶ್ರೀ ರವಿಸುಬ್ರಹ್ಮಣ್ಯ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ, ಸಂಘದ ಅಧ್ಯಕ್ಷ ಶ್ರೀ ಹೆಚ್.ಬಿ. ಚಂದ್ರಶೇಖರಯ್ಯ, ಶ್ರೀ ಹೆಚ್.ಆರ್. ಸುರೇಶ್ ಪಾಲ್ಗೊಂಡು ಸಂತಸದ ಕ್ಷಣಕ್ಕೆ ಸಾಕ್ಷಿಯಾದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಮಾತನಾಡಿ ಬ್ರಾಹ್ಮಣ ಮಹಾಸಭಾ ಕೈಗೊಂಡ ಹಲವು ಯೋಜನೆಗಳಲ್ಲಿ ವೃದ್ದರಿಗೆ ಪಿಂಚಣಿ ಯೋಜನೆಯೂ ಒಂದಾಗಿದೆ. ಇದಕ್ಕಾಗಿಯೇ ಸಮಿತಿ ರಚಿಸಲಾಗಿದ್ದು, ಅದನ್ನು ಜಾರಿಗೊಳಿಸುವ ಕಾರ್ಯ ಸಾಗಿದೆ ಎಂದರು. ಇದಲ್ಲದೇ ಬಡಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಲವು ಯೋಜನೆಯನ್ನು ಮಹಾಸಭಾ ರೂಪಿಸಿದೆ. ಕೆಲಸ ಶಾಲೆಗಳ ಜತೆ ಒಡಂಬಡಿಕೆ ಮಾಡಿಕೊಂಡಿದ್ದು, ಬಡಮಕ್ಕಳಿಗೆ ಉಚಿತ ವಿದ್ಯಾ ಅವಕಾಸ ಕಲ್ಪಿಸಲಾಗುವುದು. ಮಹಾಸಭಾ ವತಿಯಿಂದ ಈಗಾಗಲೇ ಶೇ.98ಕ್ಕಿಂತ ಹೆಚ್ಚು ಅಂಕ ಗಳಿಸಿದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡಲಿದ್ದು, ರಾಜ್ಯದಾದ್ಯಂತ 400 ಕ್ಕೂ ಹೆಚ್ಚು ವಿದ್ಯಾರ್ಥಿಗಳ ಅರ್ಜಿಗಳು ಬಂದಿವೆ ಎಂದರು.

ಗದಗ ಜಿಲ್ಲಾ ಬ್ರಾಹ್ಮಣ ಸಮಾಜದಿಂದ ನೂತನ ಜಿಲ್ಲಾಧ್ಯಕ್ಷರಿಗೆ ಅಧಿಕಾರ ಪದಗ್ರಹಣ ಪ್ರತಿಭಾ ಪುರಸ್ಕಾರ ಸರಕಾರಿ ನಿವೃತ್ತ ನೌಕರರಿಗೆ ಸನ್ಮಾನ ಕಾರ್ಯಕ್ರಮ ದಿನಾಂಕ 31–7–22 ರಂದು ಗದುಗಿನ ವೀರನಾರಾಯಣ ದೇವಸ್ಥಾನದ ಆವರಣದಲ್ಲಿ 11 ಗಂಟೆಗೆ ಪ್ರಾರಂಭವಾಯಿತು ಸಭೆ ಸಾನಿಧ್ಯವನ್ನು ವೇದ ಮೂರ್ತಿ ದಂಡಪಾಣಿ ದೀಕ್ಷಿತರು ವಹಿಸಿದ್ದರು ವೇದಮೂರ್ತಿ ರತ್ನಾಕರ ಭಟ್ ಜೋಶಿ ವೇದಮೂರ್ತಿ ನೆಲೋಗಲ್ ಆಚಾರ್ಯರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಶ್ರೀ ನಟರಾಜ್ ಭಾಗವತ್ ಉಪಾಧ್ಯಕ್ಷರು.ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೆಂಗಳೂರು ಶಿವಮೊಗ್ಗ ಮುಖ್ಯ ಅತಿಥಿಗಳಾಗಿ ಶ್ರೀನಾಥ್ ಜೋಶಿ ಎಸ್ಪಿ ಲೋಕಾಯುಕ್ತರು ಬೆಂಗಳೂರು. ಮಾನ್ಯ ಶ್ರೀ ವಿಜಯ ನಾಡಜೋಶಿ ಸಹ ಕಾರ್ಯದರ್ಶಿಗಳು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೆಂಗಳೂರು ಹುಬ್ಬಳ್ಳಿ. ಗದಗ್ ಹಾವೇರಿ ಜಿಲ್ಲಾ ಉಸ್ತುವಾರಿಗಳು. ಮಾನ್ಯ ಶ್ರೀ ಡಿಪಿ ಪಾಟೀಲ್ ಶ್ರೀ ಶಂಕರ್ ಪಾಟೀಲ್. ಡಾಕ್ಟರ್. ದತ್ತಮೂರ್ತಿ ಕುಲಕರ್ಣಿ ಡಾ. ಉದಯ ಕುಲಕರ್ಣಿ. ಶ್ರೀಮತಿ ಕಲಾವತಿ ಅಲಗೂರ್. ಶ್ರೀಮತಿ ದೀಪ ಪಾಟೀಲ್ ಹಾವೇರಿ. ಆಗಮಿಸಿದ್ದರು ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷರಾದ ಮಾನ್ಯಶ್ರೀ ವೆಂಕಟೇಶ ಕುಲಕರ್ಣಿ ವಹಿಸಿದ್ದರು. ಪ್ರಾಸ್ತಾವಿಕವಾಗಿ ಮಾನ್ಯ ಶ್ರೀ ಗುರುಣ್ಣ ಬಳಗಾನೂರ ಮಾತನಾಡಿದರು ವಂದನಾರ್ಪಣೆಯನ್ನು ಡಾ. ದತ್ತ ಪ್ರಸನ್ನ ಪಾಟೀಲ್ ನೇರವೇರಿಸಿದರು. ಕಾರ್ಯಕ್ರಮವು ಅತಿ ವಿಜೃಂಭಣೆ ಯಿಂದ ನೆರವೇರಿತು ಗದಗ್ ಜಿಲ್ಲೆಯ ಬ್ರಾಹ್ಮಣರ ಸಮಾವೇಶ ಯಶಸ್ವಿಯಾಯಿತು. ಸದಸ್ಯತ್ವ ಫಾರ್ಮಗಳನ್ನು ಕೊಡಲಾಗಿ ಅಲ್ಲಿಯೇ ಫಾರ್ಮುಲನ್ನು ತುಂಬಿಕೊಟ್ಟರು

## ವಿಪ್ರನುಡಿಗೆ ಚಂದಾದಾರರಾಗಲು ಮನವಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮುಖವಾಣಿಯಾದ 'ವಿಪ್ರನುಡಿ' ಹೊಸ ವಿನ್ಯಾಸದೊಂದಿಗೆ ಪ್ರಕಟವಾಗುತ್ತಿದೆ. ಸಂಚಿಕೆ ಇನ್ನಷ್ಟು ಚೆನ್ನಾಗಿ ಮೂಡಿಬರಲು ತಮ್ಮ ಸಲಹೆಗೆ ಸ್ವಾಗತ. ಮುದ್ರಣ ದುಬಾರಿಯಾಗಿರುವ ಈ ಕಾಲದಲ್ಲಿ ಪತ್ರಿಕೆಯನ್ನು ಎಲ್ಲರಿಗೂ ಉಚಿತವಾಗಿ ತಲುಪಿಸಲು ಕಷ್ಟಸಾಧ್ಯ. ಆದ್ದರಿಂದ ತಾವು 'ವಿಪ್ರನುಡಿ'ಗೆ ಚಂದಾದಾರರಾಗಬೇಕೆಂದು ಸಂಪಾದಕ ಮಂಡಳಿಯ ವಿನಂತಿ. ಮೂರು ವರ್ಷಕ್ಕೆ 500/= ರೂ.ಗಳನ್ನು ನೀಡಿ ವಿಪ್ರನುಡಿ ಚಂದಾದಾರರಾಗಲು ವಿನಂತಿಸುತ್ತೇವೆ. ಈ ವಿಪ್ರನುಡಿ ಚಂದಾ ಹಣವನ್ನು ಪ್ರತ್ಯೇಕವಾಗಿ ತೆಗೆದಿಡಲಾಗುತ್ತದೆ. ದಯವಿಟ್ಟು ತಾವು ಹಾಗೂ ತಮ್ಮ ಬಂಧುಗಳು ಶೀಘ್ರವೇ ಚಂದಾದಾರರಾಗಬೇಕೆಂದು ಸಂಪಾದಕ ಮಂಡಲಿ ವಿನಂತಿಸುತ್ತದೆ.**

# ಶಿಡ್ಲಘಟ್ಟದಲ್ಲಿ "ವೇದೋನಿತ್ಯಮದೀಯತಾಂ' ಕಾರ್ಯಕ್ರಮ



ಚಿಕ್ಕಬಳ್ಳಾಪುರ ಜಿಲ್ಲಾ ವಿಪ್ರ ಪೌರೋಹಿತರ ಮತ್ತು ಆಗಮಿಕರ ವಿಶ್ವಸ್ಥ ಮಂಡಳಿ ಶಿಡ್ಲಘಟ್ಟದಲ್ಲಿ "ವೇದೋನಿತ್ಯಮದೀಯತಾಂ' ಕಾರ್ಯಕ್ರಮದಲ್ಲಿ ವೇದ ಪಾರಾಯಣ ಮಾಡಿದ ವಿದ್ವಾಂಸರುಗಳಿಗೆ ಅಭಿನಂದಿಸಿ ಸನ್ಮಾನ ಮಾಡಲಾಯಿತು.




ಚಿಕ್ಕಬಳ್ಳಾಪುರ ಜಿಲ್ಲಾ ವಿಪ್ರ ಪೌರೋಹಿತರ ಮತ್ತು ಆಗಮಿಕರ ವಿಶ್ವಸ್ಥ ಮಂಡಳಿ ಶಿಡ್ಲಘಟ್ಟದಲ್ಲಿ "ವೇದೋನಿತ್ಯಮದೀಯತಾಂ' ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀ ಹಾರನಹಳ್ಳಿ ರವರು ಭಾಗವಹಿಸಿದ್ದ ಸಂದರ್ಭದಲ್ಲಿ ಸಭಾ ಸದಸ್ಯತ್ವ ನೋಂದಣಿ ಮಾಡಲಾಯಿತು. ಶ್ರೀಯುತರಾದ ಅಟ್ಟೂರು ವೆಂಕಟೇಶಯ್ಯ, ನಾಗಭೂಷಣರಾವ್ ಕೆ. ಜಯಸಿಂಹೆಲ್. ಸುರೇಶ ಶಾಸ್ತ್ರೀ. ಪಿ.ಆರ್.ಪ್ರಕಾಶ್, ರಘುವೀರ ಶರ್ಮ, ಶ್ರೀಕಾಂತ್ ಇತರರು ಉಪಸ್ಥಿತರಿದ್ದರು.

## ರಾಯಚೂರಿನಲ್ಲಿ ಪ್ರತಿಭಾ ಪುರಸ್ಕಾರ



ಆಗಸ್ಟ್ 21ರಂದು ರಾಯಚೂರಿನಲ್ಲಿ ಆಯೋಜಿಸಿರುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಪೂರ್ವಭಾವಿ ಸಭೆ ಮತ್ತು ಸದಸ್ಯತ್ವ ಅಭಿಯಾನವನ್ನು ಶ್ರೀ ಸತ್ಯನಾಥ ಕಾಲೋನಿಯಲ್ಲಿ ವೇದಮೂರ್ತಿ ಪಂಡಿತ್ ಶ್ರೀ ಮುಕುಂದ ಆಚಾರ್ಯ ಮತ್ತು ವೇದಮೂರ್ತಿ ಪಂಡಿತ್ ಶ್ರೀಹರಿ ಆಚಾರ್ಯ ಇವರ ಉಪಸ್ಥಿತಿಯಲ್ಲಿ ನಡೆಸಲಾಯಿತು.

## ವ್ಯಾಪಾರಿ ಮತ್ತು ಕೈಗಾರಿಕಾ ವಿಭಾಗದ ಸಭೆ




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಗಾಯತ್ರಿ ಭವನದಲ್ಲಿ ದಿನಾಂಕ 04.08.2022ರಂದು ವ್ಯಾಪಾರಿ ಮತ್ತು ಕೈಗಾರಿಕಾ ಕ್ಷೇತ್ರದ ಕ್ಷೇತ್ರದ ಪ್ರಮುಖರ ಜೊತೆ ಸಮಾಲೋಚನೆ ನಡೆಸಲಾಯಿತು. ಮುಂದಿನ ಯೋಜನೆಗಳ ಬಗ್ಗೆ ಚರ್ಚಿಸಲಾಯಿತು.

## ಲಲಿತ ಸಹಸ್ರನಾಮ ಪಠಣ



ದಿನಾಂಕ 31.07.2022ರಂದು ಚಿತ್ತವಾಡಗಿ ಬ್ರಾಹ್ಮಣ ಸಂಘವು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಹಯೋಗದೊಂದಿಗೆ ಹೊಸಪೇಟೆಯ ಹೊರವಲಯದ ತುಂಗಭದ್ರಾ ನದಿಯ ದಡದಲ್ಲಿರುವ ಹೊಸೂರಮ್ಮನ ದೇವಸ್ಥಾನದಲ್ಲಿ ಬ್ರಾಹ್ಮಣ ಸಮಾಜದಿಂದ ಲಲಿತ ಸಹಸ್ರನಾಮ ಪಠಣ ಹಾಗೂ ರುದ್ರ ದೇವರ ಅಭಿಷೇಕ ನಡೆಯಿತು. ಬ್ರಾಹ್ಮಣ ಸಮಾಜದ ಹಿರಿಯ ಮುಖಂಡರು ಉಪಸ್ಥಿತರಿದ್ದರು.

# ಕೋಲಾರದಲ್ಲಿ ಸಂಘಟನಾ ಸಭೆ ಹಾಗೂ ಸದಸ್ಯತ್ವ ಅಭಿಯಾನ



ಕೋಲಾರ: ಕೋಲಾರ ಜಿಲ್ಲೆ ಹಾಗೂ ತಾಲ್ಲೂಕು ಬ್ರಾಹ್ಮಣ ಸಂಘಗಳನ್ನು ಸಂಘಟಿಸಿ, ಜಿಲ್ಲಾ ಸಮ್ಮೇಳನ ನಡೆಸಿ, ತಾಲ್ಲೂಕು, ಹೋಬಳಿ ಮಟ್ಟದಲ್ಲೂ ಸಂಘಟನೆಯನ್ನು ಬಲಗೊಳಿಸುವುದೇ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉದ್ದೇಶವಾಗಿದೆ ಎಂದು ಮಹಾಸಭೆಯ ರಾಜ್ಯ ಉಪಾಧ್ಯಕ್ಷರಾದ ಶ್ರೀ ಡಿ.ವಿ. ರಾಜೇಂದ್ರಪ್ರಸಾದ್ ತಿಳಿಸಿದರು. ನಗರದ ಗಾಯತ್ರಿ ಪ್ರಾರ್ಥನಾ ಮಂದಿರದಲ್ಲಿ ಜಿಲ್ಲಾ ಸಮ್ಮೇಳನ ಹಾಗೂ ಸಂಘಟನೆ ಕುರಿತು ಚರ್ಚಿಸಲು ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ಇದೇ ಸಂದರ್ಭದಲ್ಲಿ ಬಂಗಾರಪೇಟೆ ಬ್ರಾಹ್ಮಣ ಸಂಘಕ್ಕೆ ಮಹಾಸಭೆಯ 200 ಸದಸ್ಯರಿಗೆ ಗುರುತಿನ ಚೀಟಿ ವಿತರಿಸಿ ಸದಸ್ಯತ್ವಕ್ಕೆ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿದರು.

ಮಹಾಸಭಾದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎಂ.ಎಸ್.ನರಸಿಂಹಮೂರ್ತಿಯವರು ಮಾತನಾಡಿ ಶ್ರೀ ಅಶೋಕ ಹಾರನಹಳ್ಳಿರವರು ಮಹಾಸಭಾದ ಅಭಿವೃದ್ದಿಗೆ ವಿವಿಧ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದು ನೆನೆಗುದಿಗೆ ಬಿದ್ದಿದ್ದ ಕಟ್ಟಡದ ನವೀಕರಣಕ್ಕೆ ಚಾಲನೆ ನೀಡಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಬಂಗಾರಪೇಟೆಯ ಶ್ರೀ ಸೂರ್ಯನಾರಾಯಣ ಸ್ವಾಮಿ ಹಾಗೂ ಯೋಗೀಶ್ವರ ಯಜ್ಞಾವಲ್ಕ್ಯ ಮಹರ್ಷಿಗಳ ನೂತನ ಉತ್ಸವ ಮೂರ್ತಿಯನ್ನು ಮಾಡಿಸಲು ಡಿ.ವಿ.ರಾಜೇಂದ್ರಸಾದ್ ಹಾಗೂ ಪಿ.ಎಸ್. ಅಂಜನ್‌ಕುಮಾರ್ ಶರ್ಮಾರವರು ವೈಯುಕ್ತಿಕವಾಗಿ ತಲಾ 10,000 ರೂಗಳನ್ನು ಕೊಡುಗೆ ನೀಡಿದರು.

ಕೋಲಾರ ತಾಲ್ಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಬಿ.ಎನ್. ವಾಸುದೇವಮೂರ್ತಿ ಮಹಾಸಭಾ ಕಾರ್ಯಕಾರಿ ಸಮಿತಿ ಸದಸ್ಯರ ಶ್ರೀ ಪಿ.ಎಸ್. ಅಜಿಜನ್ ಕುಮಾರ್ ಶರ್ಮಾರವರು ಸಭೆಯಲ್ಲಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಶ್ರೀ ಶುಕ್ಲಯರ್ಜುಶಾಖಾ ಜಿಲ್ಲ ಸಂಚಾಲಕರಾದ ಆನಂದಮೂರ್ತಿ, ಮಾಲೂರು ಪ್ರಕಾಶ್, ಶ್ರೀನಿವಾಸಪುರ ದಿವಾಕರ್, ಮುಳಬಾಗಿಲು ಶ್ರೀನಿವಾಸ್, ಬಂಗಾರಪೇಟೆ ಚಂದ್ರಶೇಖರ್, ಉಲುಚಕಮ್ಮಿ ಜಿಲ್ಲಾಧ್ಯಕ್ಷ ಸಹನಾಮೂರ್ತಿ, ವೈ.ಎಸ್.ಕೃಷ್ಣಮೂರ್ತಿ, ಕೆ.ಜಿ.ಎಫ್. ಶೇಷಗಿರಿರಾವ್, ಗೋಪಿನಾಥರಾದ, ಶ್ರೀನಿವಾಸಪುರ ವಿಪ್ರ ಮಹಿಳಾ ವೇದಿಕೆ ಅಧ್ಯಕ್ಷೆ ಮಾಯಾಚಂದ್ರ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಕಾರ್ಯಕಾರಿ ಸಮಿತಿಯ ಅರುಣ್‌ಕುಮಾರ್, ಬ್ರಾಹ್ಮಣ ಸಂಘದ ನಿರ್ದೇಶಕ ಅಮರನಾಥ, ಎಂ.ಪಿ. ಆನಂದ್, ಹಾಬಿ ರಮೇಶ್, ಶ್ರೀನಿಧಿ ಸುಕ್ಲಯರ್ಜುವೇದ ಮಹಾಮಂಡಲದ ವೈ.ಎ.ಸುಧಾಕರಬಾಬು ಮತ್ತು ಜಿಲ್ಲೆಯ ಎಲ್ಲಾ ವಿಪ್ರ ಸಮುದಾಯದ ಮುಖಂಡರು ಉಪಸ್ಥಿತರಿದ್ದರು



## ಬಂಗಾರುಪೇಟೆ – ಸದಸ್ಯತ್ವ ಅಭಿಯಾನ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾದ ವೇದ ಬ್ರಹ್ಮ ಶ್ರೀ ಡಾ.ಪಿ.ಎಸ್.ಅಂಜನ್ ಕುಮಾರ್‌ಶರ್ಮಾ ರವರ ಮಾರ್ಗದರ್ಶನದಲ್ಲಿ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಯೋಗೀಶ್ವರ ಯಾಜ್ಞವಲ್ಕ್ಯ ಸಂಘದ ಅಧ್ಯಕ್ಷರಾದ ಶ್ರೀ ಪ್ರಹ್ಲಾದ ರಾವ್, ಕಾರ್ಯದರ್ಶಿಗಳಾದ ಶ್ರೀ ರಾಮಚಂದ್ರ ರಾವ್, ಖಜಾಂಚಿಗಳಾದ ಶ್ರೀ ಬ್ಯಾಂಕ್ ಮುರಳೀಧರ್ ರವರು ಪದಾಧಿಕಾರಿಗಳಾದ ಕೋಟಿಲಿಂಗೇಶ್ವರ ಶ್ರೀ ಚಂದ್ರಶೇಖರ್ ರವರು ಅಖಿಲ ಕರ್ನಾಟಕ ಬ್ರಾಹ್ಮಣ ಅರ್ಚಕರ ಮತ್ತು ಪುರೋಹಿತರ ಪರಿಷತ್ ಬಂಗಾರಪೇಟೆ ತಾ॥ ಪರಿಷತ್ ಘಟಕದ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ರವಿ ರವರು ಸೇರಿದಂತೆ ಬಂಗಾರಪೇಟೆ ತಾಲ್ಲೂಕಿನ ಯೋಗೀಶ್ವರ ಯಾಜ್ಞವಲ್ಕ್ಯ ಸಂಘದ ಪದಾಧಿಕಾರಿಗಳು 102 ಸದಸ್ಯರುಗಳ ಸದಸ್ಯತ್ವ ನೋಂದಣಿಯನ್ನು ಮಾಡಿಸಿದ ಅರ್ಜಿಗಳನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರು ಕೋಲಾರ ಜಿಲ್ಲೆಯ ಉಸ್ತುವಾರಿಗಳಾದ ಸನ್ಮಾನ್ಯ ಶ್ರೀ ರಾಜೇಂದ್ರ ಪ್ರಸಾದ್ ರವರಿಗೆ ನೀಡಲಾಯಿತು. ಶ್ರೀಯುತರು ಇವುಗಳನ್ನು ಮಹಾಸಭೆಯ ಅಧ್ಯಕ್ಷರಿಗೆ ಹಸ್ತಾಂತರಿಸಿದರು.

# ಜೀವನ ಸ್ಫೂರ್ತಿಯ ಚಿಲುಮೆ- ವಿದ್ವಾನ್ ಹಿತ್ಲಳ್ಳಿ ನಾಗೇಂದ್ರ ಭಟ್ಟರು

**ಡಾ| ರಾಮಚಂದ್ರ ನಾ. ಹೆಗಡೆ, ಭಂಡೀಮನೆ,**
(ವಿಶ್ರಾಂತ ಜನರಲ್ ಮ್ಯಾನೇಜರ, ನಬಾರ್ಡ್)



**ಪ್ರತಿಷ್ಠಿತವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ ಪಡೆದ ಸಂದರ್ಭದಲ್ಲಿದ ಮಹಾಸಭೆ ವೇ||ಮೂ|| ಹಿತ್ಲಳ್ಳಿ ನಾಗೇಂದ್ರ ಭಟ್ಟರಿಗೆ ಮಹಾಸಭೆಯ ಹಾರ್ಧಿಕ ಅಭಿನಂದನೆಗಳು.**

ವೇ| ಹಿತ್ಲಳ್ಳಿ ನಾಗೇಂದ್ರ ಭಟ್ಟರನ್ನು ನಾನು ನನ್ನ ಬಾಲ್ಯ ದಿಂದಲೂ ನೋಡುತ್ತಿದ್ದೇನೆ. ಅವರು ನನ್ನ ಅಜ್ಜ ಭಂಡೀಮನೆ ರಾಮಚಂದ್ರ ಹೆಗಡೆಯವರಿಗೆ ಬಹಳ ಹತ್ತಿರವಾಗಿದ್ದವರು. ದಟ್ಟ ಕಾಡಿನ ಮಧ್ಯೆ ಇರುವ ಒಂದು ಹಳ್ಳಿ. ಅಲ್ಲಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿ ಶಾಲ್ಮಲಾ ನದಿ ಹರಿಯುತ್ತದೆ. ಅಲ್ಲಿ ಗಣೇಶಪಾಲ್ ಎಂಬಲ್ಲಿ ನದಿಯ ಮಧ್ಯದಲ್ಲಿ ಒಂದು ಬಂಡೆಕಲ್ಲಿನಲ್ಲಿ ಸ್ವಯಂಭು ಗಣಪತಿ ಮೂಡಿ ಬಂದಿದೆ. ಅದು ಬಾಗಿಲು ಇಲ್ಲದ ತೆರೆದ ಪವಿತ್ರ ಸ್ಥಳವಾಗಿದೆ. ಮಳೆಗಾಲದಲ್ಲಿ ಈ ವಿಗ್ರಹ ನೀರಿನಿಂದ ಮುಚ್ಚಿಹೋಗುವದು. ಆದರೆ ಉಳಿದ ತಿಂಗಳುಗಳಲ್ಲಿ ಈ ದೇವರಿಗೆ ಜನರು ಪೂಜೆ ಸಲ್ಲಿಸುತ್ತಾರೆ.

ನನ್ನ ಅನುಭವದ ಪ್ರಕಾರ ವಿ| ನಾಗೇಂದ್ರ ಭಟ್ಟರು ಯಾವುದೇ ವಿಷಯವಾಗಿ ಮಾತನಾಡುವದಾದರೂ ಮೊದಲು ವಿಷಯಕ್ಕೆ ಸಂಬಂಧ ಪಟ್ಟ ವೇದ ಮಂತ್ರ ಬರುತ್ತದೆ, ನಂತರ ವಿಷಯದ ಪ್ರಸ್ತಾಪ ವಾಗುತ್ತದೆ. ಇದು ಅವರಿಗೆ ಜ್ಯೋತಿಷ್ಯ-ವೇದ-ಶಾಸ್ತ್ರಗಳ ಮೇಲೆ ಇರುವ ಅಪಾರ ಜ್ಞಾನವನ್ನು ಹೊರಸೂಸುತ್ತದೆ. ಮುಂಬೈಯಲ್ಲಿ ಹವ್ಯಕದ ವತಿಯಿಂದ ಒಮ್ಮೆ ಗಾಯತ್ರಿ ಪುರಶ್ಚರಣ ಹವನವನ್ನು ಏರ್ಪಡಿಸ ಲಾಗಿತ್ತು. ನಮ್ಮೆಲ್ಲರ ಆಗ್ರಹದ ಆಮಂತ್ರಣದ ಮೇಲೆ ವೇ| ನಾಗೇಂದ್ರ ಭಟ್ಟರು ಅಲ್ಲಿಗೆ ಆಗಮಿಸಿದ್ದರು. ಅವರು ಹವನದಲ್ಲಿ ಪಾಲ್ಗೊಂಡು ಗಾಯತ್ರಿ ಮಂತ್ರದ ಮೇಲೆ ಪರಿಣತ ಭಾಷಣವನ್ನು ನೀಡಿದರು. ಆಗ ಅಲ್ಲಿಯ ಸಭಿಕರು ಮಂತ್ರ ಮುಗ್ಧರಾಗಿ ಗಾಯತ್ರಿ ಮಂತ್ರದ ಮಹತ್ವವನ್ನು ಕೇಳಿ ಅವರಿಂದ ಅನೇಕ ಪ್ರಶ್ನೆಗಳಿಗೆ ಉತ್ತರ ಪಡೆದರು.

ವಿ| ಹಿತ್ಲಳ್ಳಿ ನಾಗೇಂದ್ರ ಭಟ್ಟರ ಮನೆಯೆಂದರೆ ಹಸಿರು ತೋರಣದ ಅಡಿಕೆ, ಬಾಳೆ, ತೆಂಗು, ಯಾಲಕ್ಕಿ, ಕರಿ ಮೆಣಸು ಮೊದಲಾದ ತೋಟದ ಬೆಳೆಗಳ ಮಧ್ಯೆ ಇರುವ ಮನೆ. ಪಕ್ಕದಲ್ಲೇ ಶ್ರೀ ಲಕ್ಷ್ಮಿನರಸಿಂಹ ದೇವರ ದೇವಾಲಯ. ಒಂದು ಕಾಲದಲ್ಲಿ ಈ ದೇವಸ್ಥಾನವು ಪೂರ್ಣ ಶಿಥಿಲ ವಾಗಿತ್ತು. ಆದರೆ ಈಗ ವಿ| ನಾಗೇಂದ್ರ ಭಟ್ಟರು ಮತ್ತು ಕುಟುಂಬದವರ ಪರಿಶ್ರಮದಿಂದ, ಒಂದು ಸುಂದರವಾದ ಹಾಗೂ ಪೂರ್ತಿ ಶಿಲೆಯಲ್ಲಿ ಕಟ್ಟಿದ ದೇವಾಲಯ ನಿರ್ಮಾಣಗೊಂಡಿದೆ.

ಅನೇಕ ಕಡೆ ದೇವಸ್ಥಾನ ಕಟ್ಟುವಲ್ಲಿ, ನಕ್ಷತ್ರವನ, ರಾಶಿವನ, ಪವಿತ್ರವನ, ಪಂಚವಟಿ ಮೊದಲಾದ ನಿಸರ್ಗದ ಸಂರಕ್ಷಣೆಗೆ ಪೂರಕ ವಾದ ಅತ್ಯಮೂಲ್ಯ ಸಸ್ಯಗಳನ್ನು ಬೆಳೆಸುವಲ್ಲಿ ವಿ| ನಾಗೇಂದ್ರ ಭಟ್ಟರ ಕೊಡುಗೆ ಅಪಾರ. ಈಗಿನ ದಿನಗಳಲ್ಲಿ ಸಮಾಜದಲ್ಲಿ ಆರ್ಥಿಕ-ಸಾಮಾಜಿಕ ಉನ್ನತಿಯಾದ ಹಾಗೆಲ್ಲ ಜೀವನದಲ್ಲಿ ಶಾಂತಿ-ನೆಮ್ಮದಿ ಕಡಿಮೆಯಾಗುತ್ತಾ ಹೋಗಿದೆ. ಇಂಥ ಸಂದರ್ಭಗಳಲ್ಲಿ ಜ್ಯೋತಿಷ್ಯ ಶಾಸ್ತ್ರದ ಮೊರೆ ಹೋಗುವದು ಹೆಚ್ಚಾಗುತ್ತಾ ಇದೆ. ಗೌತಮ ಬುದ್ಧನ ಕಾಲದಿಂದಲೂ ಸಮಸ್ಯೆಗಳಿಲ್ಲದ ಮನೆಯಿಲ್ಲವೆಂಬುದು ನಿರ್ವಿವಾದದ ಮಾತು. ಯಾರೇ ಆಗಲಿ ಸಂತೋಷದಿಂದ ಇದ್ದಾರೆಂದು ಹೊರ ನೋಟಕ್ಕೆ ಕಂಡರೂ ದೇವರು ಯಾವದಾದರೂ ಒಂದಾದರೂ ಕೊರತೆ ಯನ್ನು ನಿರ್ಮಿಸಿರುತ್ತಾನೆ. ಇದು ಸೃಷ್ಟಿ ನಿಯಮ. ಇಂಥ ಸಂದರ್ಭಗಳಲ್ಲಿ ಜನರು ಸಹಜವಾಗಿ ನಾಗೇಂದ್ರ ಭಟ್ಟರಂತಹ ವಿದ್ವಾಂಸರ ಸಲಹೆ ಪಡೆದು ಮುಂದಿನ ದಾರಿ ಗುರುತಿಸಿಕೊಳ್ಳುತ್ತಾರೆ. ಈಗ ವಿ| ಹಿತ್ಲಳ್ಳಿ ನಾಗೇಂದ್ರ ಭಟ್ಟರಿಗೆ 84 ವರ್ಷ ದಾಟಿದೆ. ಆದರೆ ಜೀವನದಲ್ಲಿ ಅವರಿಗಿರುವ ಆರೋಗ್ಯ, ಲವಲವಿಕೆ ಮತ್ತು ಸ್ಫೂರ್ತಿ ಈಗಿನ ಯುವಕ ಯುವತಿಯರು ನಾಚಿಕೊಳ್ಳುವಂತೆ ಇದೆ.

ಈಗಲೂ ಅವರು 55 ವರ್ಷದ ಹಿಂದೆ ನಾನು ನೋಡಿದ 30 ವರ್ಷದ ಯುವಕ ನಾಗೇಂದ್ರ ಭಟ್ಟರೇ ಆಗಿದ್ದಾರೆ. ಅವರ ದೇಹ ಪ್ರಕೃತಿಯಲ್ಲಿ ಸ್ವಲ್ಪವೂ ಬದಲಾವಣೆ ಕಾಣುವುದಿಲ್ಲ. ಶರೀರವು ಸ್ಥೂಲವಾಗದೇ ಹಾಗೆಯೇ ಇದೆ. ಅವರ ದಿನದ ಚಟುವಟಿಕೆ ನೋಡಿ ಯಾರಾದರೂ ಆಶ್ಚರ್ಯ ಪಡಬಹುದಾಗಿದೆ. ಮಧ್ಯಾಹ್ನ ನಿದ್ದೆಯನ್ನೂ ಮಾಡುವದಿಲ್ಲ. ಅವರ ಮುಂದಿನ ಒಂದು ತಿಂಗಳು ಕಾರ್ಯಕ್ರಮ ಮೊದಲೇ ನಿರ್ಧಾರವಾಗಿರುತ್ತದೆ ಮತ್ತು ಅವರ ದಿನದ ಪ್ರತಿ ನಿಮಿಷಗಳು ಅಮೂಲ್ಯವಾಗಿರುತ್ತದೆಯೆಂದು ನನಗೆ ಅನುಭವ ವಾಗಿದೆ. ನಾನು ಹಿತ್ಲಳ್ಳಿಗೆ ಅವರ ಮನೆಗೆ ಹೋದಾಗ ಯಾವಾಗಲೂ ಯಾರಾದರೊಬ್ಬರು ಜ್ಯೋತಿಷ್ಯ, ಧಾರ್ಮಿಕ ಕಾರ್ಯಗಳ ಬಗ್ಗೆ ಸಲಹೆ ಪಡೆಯುವವರು ಇದ್ದೇ ಇರುತ್ತಾರೆ ಮತ್ತು ಬಂದವರೆಲ್ಲಾ ಅವರ ಕುಟುಂಬದಿಂದ ಹವ್ಯಕರ ಆದರದ ಆತಿಥ್ಯ ಪಡೆದೇ ಹೋಗಬೇಕು.

ವಿ| ಹಿತ್ಲಳ್ಳಿ ನಾಗೇಂದ್ರ ಭಟ್ಟರು ದೇಶದ ಈಗಿನ ಅಗ್ರ ಶ್ರೇಣಿಯ ಮೇಧಾವಿ ವಿದ್ವಾಂಸರುಗಳಲ್ಲಿ ಒಬ್ಬರಾಗಿರುತ್ತಾರೆ. ಅವರ ಕಾರ್ಯಕ್ಷೇತ್ರವು ಈಗ ಕೇವಲ ಹಿತ್ಲಳ್ಳಿಗೆ ಸೀಮಿತವಾಗದೇ, ರಾಜ್ಯ ಮತ್ತು ರಾಷ್ಟ್ರದ ಇತರ ರಾಜ್ಯಗಳಿಗೂ ಪ್ರಸರಿಸಿದೆ. ಜಾತಿ-ಮತ ಭೇದವಿಲ್ಲದೇ ಅವರ ಮಾರ್ಗ ದರ್ಶನ ಪಡೆದುಕೊಂಡು ಹೋಗಲು ನಾನಾ ಭಾಗಗಳಿಂದ ಜನರು ಬರುತ್ತಲೇ ಇದ್ದಾರೆ. ಮೊದಲು ಹಿತ್ಲಳ್ಳಿ ನಾಗೇಂದ್ರ ಭಟ್ ಎಂದು ಕರೆಸಿಕೊಳ್ಳುತ್ತಿದ್ದವರು ಇವತ್ತು ಅನೇಕರಿಗೆ ಹಿತ್ಲಳ್ಳಿ ಗುರೂಜಿಯಾಗಿದ್ದಾರೆ. ಇವರ ಸಾತ್ವಿಕ ಜೀವನ ಧರ್ಮ ನಮಗೆಲ್ಲರಿಗೂ ಆದರ್ಶಪ್ರಾಯವಾಗಿದೆ. ವಿ| ನಾಗೇಂದ್ರ ಭಟ್ಟರು ಸ್ನೇಹಜೀವಿ. ಅವರ ಮನೆಯಲ್ಲಿ ಪಡೆಯುವ ಅತಿಥಿ ಸತ್ಕಾರವನ್ನು ಯಾರೂ ಮರೆಯಲಿಕ್ಕೆ ಸಾಧ್ಯವಿಲ್ಲ. ಇಂಥ ವ್ಯಕ್ತಿಗಳು ಸಮಾಜಕ್ಕೆ ಒಂದು ದಾರಿ ದೀಪ. ವಿ| ಹಿತ್ಲಳ್ಳಿ ನಾಗೇಂದ್ರ ಭಟ್ಟರು ಶತಾಯುಷಿಯಾಗಿ ಬಾಳಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.



# ದಿವಾನ್ ಎಂ. ಎನ್. ಕೃಷ್ಣರಾವ್

ಸುರೇಶ್ ಮೂನಾ

ಸುಮಾರು ಎಂಟು ದಶಕಗಳ ಹಿಂದೆಯೇ. ಬೆಂಗಳೂರಿನಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆಂದೇ ಪಾರ್ಕ್ ಒಂದನ್ನು ರೂಪಿಸಲಾಗಿತ್ತು. ಆಗ ಇಡೀ ಭಾರತದಲ್ಲೇ ಅಪರೂಪವೆನಿಸಿದ್ದ ಇದರ ಹೆಸರು ಎಂ. ಎನ್. ಕೃಷ್ಣರಾವ್ ಪಾರ್ಕ್. ಈಗ ಸಾರ್ವಜನಿಕವಾಗಿ ಬಳಸಲ್ಪಡುತ್ತಿರುವ ಇದು ಬಸವನಗುಡಿ ಪ್ರದೇಶದಲ್ಲಿದೆ. ಇನ್ನೊಂದು ವಿಶೇಷವೆಂದರೆ ಚೌಕಾಕಾರದಲ್ಲಿರುವ ಇದರ ನಾಲ್ಕೂ ಮೂಲೆಗಳಲ್ಲಿ ದೊಡ್ಡ ವೃತ್ತಗಳಿರುವುದು. ಗಾಂಧಿಬಜಾರ್ ಕಡೆಗಿರುವ ಟಾಗೂರ್ ವೃತ್ತ, ಎನ್. ಅರ್. ಕಾಲೋನಿ ಕಡೆಗಿರುವ ಕೆ. ನೆಟ್ಟಕಲ್ಲಪ್ಪ ವೃತ್ತ, ಸೌತ್ ಎಂಡ್ ರಸ್ತೆಗೆ ಸೇರಿದ ಬಿ.ಎಸ್. ಮಾಧವರಾವ್ ವೃತ್ತ, ಹಾಗೂ ಲಾಲ್‌ಬಾಗ್ ರಸ್ತೆ ಕಡೆಗಿರುವ ಡಾ. ಆರ್ಮುಗಂ ವೃತ್ತ. ಈ ನಾಲ್ಕೂ ವೃತ್ತಗಳು ಬಹಳ ದೊಡ್ಡವಾಗಿದ್ದು ಈ ನಗರದ ಬಹುತೇಕ ವೃತ್ತಗಳೆಲ್ಲವೂ ಕಣ್ಮರೆಯಾದರೂ, ವಿಪರೀತವಾದ ವಾಹನ ಸಂಚಾರದ ಪ್ರದೇಶದಲ್ಲಿದ್ದರೂ, ಇನ್ನೂ ಬೆಳವಣಿಗೆಯ ಭೂತಕ್ಕೆ ಆಹುತಿಯಾಗದೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ.

ಉಲುಚುಕಮ್ಮೆಯವರಾದ ದಿವಾನ್ ಎಂ.ಎನ್. ಕೃಷ್ಣರಾವ್, 1877ರ ಜನವರಿ 27ರಂದು ಮೈಸೂರಿನಲ್ಲಿ ಜನಿಸಿದರು. ಪ್ರಾರಂಭಿಕ ವಿದ್ಯಾಭ್ಯಾಸದ ನಂತರ ಬಿ.ಎ ಮತ್ತು ಎಫ್.ಎಲ್ ಪದವಿಗಳನ್ನು ಪಡೆದು, ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ಮುಗಿಸಿ ಸಂಸ್ಥಾನದ ಸರಕಾರದ ಸೇವೆಗೆ ಸೇರಿದರು. ಪ್ರಾಮಾಣಿಕತೆ, ಪರಿಶ್ರಮ, ಮತ್ತು ಪ್ರಭುದ್ಧತೆಯಿಂದಾಗಿ ಹಂತ ಹಂತವಾಗಿ ತಮ್ಮ ವೃತ್ತಿಯಲ್ಲಿನ ಉನ್ನತ ಸ್ಥಾನಗಳನ್ನು ಗಳಿಸಿ ದಿವಾನರಾಗಿಯೂ ಕಾರ್ಯ ನಿರ್ವಹಿಸಿದರು. ಇವರ ಕಾರ್ಯದಕ್ಷತೆಯನ್ನು ಗುರುತಿಸಿದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು 1922ರಲ್ಲಿ ಇವರಿಗೆ 'ರಾಜಕಾರ್ಯ ಪ್ರಸಕ್ತ' ಎಂಬ ಬಿರುದನ್ನಿತ್ತು ಗೌರವಿಸಿದರು. 1923ರಲ್ಲಿ ಭಾರತ ಸರಕಾರವು 'ದಿವಾನ್ ಬಹದ್ದೂರ್' ಎಂಬ ಬಿರುದಿನೊಂದಿಗೆ ಸತ್ಕರಿಸಿತು. 36 ವರ್ಷಗಳ ಕಾಲ ಸರಕಾರದ ಸೇವೆಯನ್ನು ಸಲ್ಲಿಸಿದ ಇವರು 1933ರಲ್ಲಿ ನಿವೃತ್ತರಾದರು. 1934ರಲ್ಲಿ ಇವರು ಪ್ರತಿಷ್ಠಿತ ನೈಟ್‌ಹುಡ್ ಪ್ರಶಸ್ತಿಯಿಂದ ಪುರಸ್ಕೃತರಾದರು.

1933ರ ವೇಳೆಗೆ ಬಸವನಗುಡಿಯಲ್ಲಿ ಸುಮಾರು 22 ಎಕರೆ ಪ್ರದೇಶದಲ್ಲಿ ಒಂದು ಉದ್ಯಾನವನ್ನು ರೂಪಿಸುವ ಯೋಜನೆಯನ್ನು ಕೈಗೊಳ್ಳಲಾಯಿತು. ಎಂ. ಎನ್. ಕೃಷ್ಣರಾವ್ ಅವರಿಗೆ ಮಹಿಳೆಯರು ಮತ್ತು ಮಕ್ಕಳ ಶ್ರೇಯೋಭಿವೃದ್ಧಿಯ ಬಗ್ಗೆ ವಿಶೇಷವಾದ ಕಾಳಜಿಯಿತ್ತು. ಆಗ ಮಹಿಳೆಯರು ಮತ್ತು ಮಕ್ಕಳಿಗಾಗಿಯೇ ಪ್ರತ್ಯೇಕವಾದ ಮನರಂಜನೆಯ ವ್ಯವಸ್ಥೆಯಿರಲಿಲ್ಲ. ಹೀಗಾಗಿ ಈ ಉದ್ಯಾನವನವನ್ನು ಅವರಿಗೇ ಮೀಸಲಿಡುವಂತೆ ಮಾಡಿ ಅಭಿವೃದ್ಧಿಗಾಗಿ ಇಪ್ಪತ್ತು ಸಾವಿರ ರೂ.ಗಳನ್ನು ನೀಡಿದರು.

ಒಮ್ಮೆ, ಈ ಮಹಾನುಭಾವರು ತಮ್ಮ ಮನೆಯಿಂದ ಪಾರ್ಕ್‌ನ ಆಚೆ ಬದಿಯಲ್ಲಿದ್ದ ಮಗಳ ಮನೆಗೆ ಇದರ ಮೂಲಕ ಹಾದು ಹೋಗಲು ಬಂದಾಗ ಅಲ್ಲಿದ್ದ ಕಾವಲುಗಾರ ಇವರು ಯಾರೆಂದು ತಿಳಿಯದೇ, ಇಲ್ಲಿ ಗಂಡಸರಿಗೆ ಪ್ರವೇಶವಿಲ್ಲವೆಂದು ಬಿಟ್ಟ. ಇದರಿಂದ ಬೇಸರಗೊಳ್ಳದೆ ತಮ್ಮ ಉದ್ದೇಶ ಈಡೇರಿದೆಯೆಂದು ಅವರು ಸಂತೋಷಪಟ್ಟಿದ್ದರು.

1937ರಲ್ಲಿ ಬೆಂಗಳೂರಿಗೆ ಆಗಮಿಸಿದ್ದ Otto KonigsbergerJA¨ ಜರ್ಮನ್ ಕಟ್ಟಡ ವಿನ್ಯಾಸಕಾರನನ್ನು ದಿವಾನ್ ಸರ್ ಮಿರ್ಜಾಇಸ್ಮಾಯಿಲ್ ಅವರು ಭೇಟಿಮಾಡಿ ಬೆಂಗಳೂರಿನಲ್ಲೂ ಕೆಲವು ಸುಂದರ ಕಟ್ಟಡಗಳನ್ನು ರೂಪಿಸಲು ಸೂಚಿಸಿದರು. ಸ್ಥಳೀಯ ವಸ್ತುಗಳನ್ನು ಬಳಸಿ ಅಲ್ಲಿನ ವಾತಾವರಣ ಮತ್ತು ಪರಿಸರಕ್ಕೆ ಹೊಂದುವಂತೆ ತಮ್ಮ ರಚನೆಗಳನ್ನು ರೂಪಿಸುವುದು Otto ಅವರ ವಿಶೇಷತೆಯಾಗಿತ್ತು.

ಅಂತಹ ಒಂದು ಸುಂದರ ಸಭಾಂಗಣವನ್ನು ಎಂ. ಎನ್. ಕೃಷ್ಣರಾವ್ ಪಾರ್ಕ್‌ನಲ್ಲಿ ವಿನ್ಯಾಸಗೊಳಿಸಿದರು. ಈ ಯೋಜನೆಗೂ ಎಂ. ಎನ್. ಕೃಷ್ಣರಾವ್ ಅವರು 15 ಸಾವಿರ ರೂ.ಗಳ ಧನ ಸಹಾಯವನ್ನು ಮಾಡಿದರು. ಸಂಪೂರ್ಣಗೊಂಡ ನಂತರ ಇಡೀ ಬೆಂಗಳೂರಿಗೆ ಆಪರೂಪವಾಗಿದ್ದ ಮತ್ತು ಪೆವಿಲಿಯನ್ ಎಂದು ಹೆಸರಿಸಲ್ಪಟ್ಟ ಈ ಸಭಾಭವನವು ಸುಮಾರು 45 ವರ್ಷಗಳ ಕಾಲ ಕೇವಲ ಮಹಿಳೆಯರು ಆಯೋಜಿಸುವ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತವಾಗಿತ್ತು. ಸುಮಾರು ಎರಡು ದಶಕಗಳ ಹಿಂದೆ ನಾನೂ ಹಾಗೆ ಮಹಿಳೆಯರೇ ನಡೆಸಿದ ಒಂದು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಹೋಗಿದ್ದೂ ಉಂಟು. ಇತ್ತೀಚಿನ ದಶಕಗಳಲ್ಲಿ ಇದರ ಮೂಲವಿನ್ಯಾಸವನ್ನು ಹಾಗೆ ಉಳಿಸಿಕೊಂಡು ಜೀರ್ಣೋದ್ಧಾರ ಮಾಡಿ ಸಾರ್ವಜನಿಕ ಗ್ರಂಥಾಲಯವನ್ನಾಗಿ ಮಾಡಿದ್ದಾರೆ. ಈ ಕಟ್ಟಡದ ಬದಿಗೆ ಎಂ. ಎನ್.ಕೃಷ್ಣರಾವ್ ಅವರ ಪ್ರತಿಮೆಯನ್ನು ಸ್ಥಾಪಿಸಲಾಗಿದ್ದು ಈ ಮರೆಯಲಾಗದ ಮಹನೀಯರನ್ನು ಇಂದಿಗೂ ಹೆಚ್ಚು ಸಂಖ್ಯೆಯಲ್ಲಿ ವಾಯುವಿಹಾರಕ್ಕೆ ಇಲ್ಲಿಗೆ ಬರುವ ಮಹಿಳೆಯರು ವಂದನೆಗಳೊಂದಿಗೆ ನೆನೆಪಿಸಿಕೊಳ್ಳುತ್ತಾರೆ.

ಡಾ. ಆರ್ಮುಗಂ ವೃತ್ತದ ಬಳಿಯೇ ಎಂ. ಎನ್. ಕೃಷ್ಣರಾವ್ ಅವರ ಮನೆಯಿದೆ. ಈ ಮನೆಗೆ 2007ರಲ್ಲಿ ನೂರು ವರ್ಷಗಳು ತುಂಬಿದವು. ಇಲ್ಲಿಂದ ಲಾಲ್‌ಬಾಗ್‌ಗೆ ಹೋಗುವ ಮುಖ್ಯರಸ್ತೆ ಇವರ ಹೆಸರಿನಲ್ಲಿದೆ. ಅವರ ಮೊಮ್ಮಗ ಎಂ. ಆರ್. ನರೇಂದ್ರ ತಮ್ಮ ತಾತನ ಬಗ್ಗೆ ಒಂದು ಒಳ್ಳೆಯ ಪುಸ್ತಕವನ್ನು ಬರೆದಿದ್ದಾರೆ.

# ಚಾತರ್ಮಾಸ್ಯ

ಡಾ। ಹಿತ್ಲಳ್ಳಿ ಸೂರ್ಯನಾರಾಯಣ ನಾಗೇಂದ್ರ ಭಟ್ಟ
(ಅಂತರರಾಷ್ಟ್ರೀಯ ಖ್ಯಾತಿಯ ಮೀಮಾಂಸಕರು)

**ಶ್ರೀಗುರುಃ ಶರಣಮ್**

ವೇದಗಳಲ್ಲಿ ವರ್ಣಿತವಾದ ಅಗಣಿತ ಯಾಗಗಳಲ್ಲಿ ಚಾತುರ್ಮಾಸ್ಯವೂ ಒಂದಾಗಿದ್ದರೂ, ಕಾಲದ ಮಹಿಮೆಯಿಂದಲೋ ಏನೋ, ಜನಮಾನಸದಿಂದ ಅದುದೂರವಾಗಿದೆ. ಈಗ ಸುಪ್ರಸಿದ್ಧವಾದ ಚಾತುರ್ಮಾಸ್ಯವು ಪುರಾಣೋಕ್ತವಾಗಿದ್ದು ಅದನ್ನು ಹೆಚ್ಚಾಗಿ ಸಂನ್ಯಾಸಿಗಳು ಆಚರಿಸುತ್ತಾರೆ. ಗೃಹಸ್ಥರೂ ಸ್ತ್ರೀಯರೂ ಅದನ್ನು ಆಚರಿಸಬಹುದೆಂಬುದು ಕೆಲವರಿಗಾದರೂ ತಿಳಿದಿದೆ. ಅದನ್ನು ಆಚರಿಸುತ್ತಿದ್ದ ಉತ್ತರ ಕನ್ನಡದ ಸದ್ಗೃಹಸ್ಥರಾದ ಶಿರಸಿಯ ಹಾರೂಗಾರ ನಾರಾಯಣ ಹೆಗಡೆಯವರು ದೈವಾಧೀನರಾಗಿದ್ದಾರೆ. ಹತ್ತಾರು ವರ್ಷಗಳಿಂದ ಈ ವ್ರತವನ್ನು ನಡೆಸಿಕೊಂಡು ಬರುತ್ತಿರುವ ಬೆಂಗಳೂರಿನ ಪ್ರಸಿದ್ಧ ಉದ್ಯಮಿ ಹಾಗೂ ವಯೋವೃದ್ಧ ಗೃಹಸ್ಥರಾದ ಎಂ.ಎನ್. ಭಟ್ ಮದ್ಗುಣಿ ರವರು ನಮ್ಮೊಡನಿರುವುದು ಸುದೈವ.

ಅಂತಹ ಆಸ್ತಿಕರು ಮಾತ್ರವಲ್ಲ, ನಾಸ್ತಿಕರೆಂದು ಹೇಳಲಾಗುವ ಕೆಲವರೂ ಈ ವ್ರತವನ್ನು ಅತ್ಯಂತ ಶ್ರದ್ಧೆಯಿಂದ ನಡೆಸಿಕೊಂಡು ಬರುತ್ತಿದ್ದಾರೆ. ಆಸ್ತಿಕರಂತೆಯೇ ನಾಸ್ತಿಕರೂ ಅಹಿಂಸೆಯು ಪರಮ ಧರ್ಮವೆಂದು ನಂಬುತ್ತಾರೆ. ಚಾತುರ್ಮಾಸ್ಯ ಹಿಂಸೆಯನ್ನು ಬದಿಗೊತ್ತಿ ಅಹಿಂಸೆಯನ್ನು ಪಾಲಿಸುವ ಶ್ರೇಷ್ಠ ವ್ರತವಾಗಿದೆ. ಮಳೆಗಾಲದಲ್ಲಿ ಎಲ್ಲೆಲ್ಲಿಯೂ ಕ್ಷುದ್ರ ಜೀವಿಗಳು ತುಂಬಿರುತ್ತವೆ. ಅವುಗಳನ್ನು ಹಿಂಸಿಸದೆ ಸಂಚರಿಸುವುದು ಸುಲಭವಲ್ಲ. ವ್ರತವನ್ನು ಕೈಗೊಂಡು ಒಂದೆಡೆ ವಾಸಿಸಿದರೆ ಮಾತ್ರ ಅದು ಸಾಧ್ಯವಾಗಬಹುದು.

**ಶಬ್ದಮೂಲ :** ಸಂಸ್ಕೃತ ಸಾಹಿತ್ಯದಲ್ಲಿ ಪಾಣಿನಿಯ ವ್ಯಾಕರಣ ಎಷ್ಟು ಪ್ರಾಚೀನವೋ ಚಾತುರ್ಮಾಸ್ಯ ಶಬ್ದವೂ ಅಷ್ಟೇ ಪ್ರಾಚೀನವಾದುದು ಅಥವಾ ಅದಕ್ಕಿಂತಲೂ ಪ್ರಾಚೀನವಾದುದು. ಪಾಣಿನಿಯು ಈ ಶಬ್ದವನ್ನು ಹೇಳದಿದ್ದರೂ ಅವನ ಸಹಾಧ್ಯಾಯಿಯಾದ ಕಾತ್ಯಾಯನನು ಈ ಶಬ್ದವನ್ನು ನೆನಪಿಸುತ್ತಾನೆ. ವೇದದಲ್ಲಿಯೇ ಈ ಶಬ್ದವನ್ನು ಪ್ರಯೋಗಿಸಿರುವುದರಿಂದ ಅದು ಪಾಣಿನಿ – ಕಾತ್ಯಾಯನರ ಸೃಷ್ಟಿಯೇನೂ ಅಲ್ಲ. ಆದರೆ ಅದೊಂದು ಯಜ್ಞದ ಹೆಸರು ಎಂಬುದು ಅಲ್ಲಿ ಸ್ಪಷ್ಟವಾಗುತ್ತದೆ. ಅದಲ್ಲದಿದ್ದರೆ ನಾಲ್ಕು ತಿಂಗಳುಗಳಲ್ಲಿ ಇರುವುದೆಲ್ಲವೂ ಚಾತುರ್ಮಾಸ್ಯ ಎಂದಾಗುತ್ತಿತ್ತು. ಹೀಗೆ ಅಪಾರ್ಥ ಮಾಡದಂತೆ ಜನರನ್ನು ತಡೆದಿರುವ ಕಾತ್ಯಾಯನ ರನ್ನು ಆಸ್ತಿಕರೆಲ್ಲರೂ ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಉಪಾಕರ್ಮ ದಲ್ಲಿ ಕೆಲವರಾದರೂ ಈ ಮುನಿಗಳನ್ನು ಸ್ಮರಿಸುತ್ತಾರೆ.

**ಅರ್ಥಸಾಮ್ಯ :** ಹೀಗೆ ಚಾತುರ್ಮಾಸ್ಯ ಮೊದಲು ಒಂದು ಯಜ್ಞವಾದರೂ, ಕಾಲ ಕಳೆದಂತೆ ಅದು ಯಜ್ಞದಂತೆ ಪವಿತ್ರವಾದ ಒಂದು ವ್ರತ ಎಂಬ ಅರ್ಥವನ್ನು ಪಡೆದಿದೆ. ಚಾತುರ್ಮಾಸ್ಯ ಯಜ್ಞವನ್ನು ಅನುಷ್ಠಾನ ಮಾಡಿದರೆ ಅಕ್ಷಯ ಅಥವಾ ಕ್ಷಯವಿಲ್ಲದ ಪುಣ್ಯವು ದೊರೆಯುವುದೆಂದು ವೇದವು ಹೇಳಿದರೆ, ಚಾತುರ್ಮಾಸ್ಯ ವ್ರತವನ್ನು ಅನುಷ್ಠಾನ ಮಾಡುವುದರಿಂದ ಆ ಪುಣ್ಯದ ಫಲವಾಗಿ ಸ್ವರಮಾಧುರ್ಯ, ಶರೀರಸೌಂದರ್ಯ, ಶತ್ರುನಾಶ, ಪುತ್ರಲಾಭ ಯೋಗಸಿದ್ಧಿ ಭಗವತ್ಪ್ರೀತಿ ಮುಂತಾದ ಅಪರಿಮಿತ ಫಲಗಳನ್ನು ಪುರಾಣಗಳು ತಿಳಿಸುತ್ತವೆ. ಪುರಾಣಗಳನ್ನು ರಚಿಸಿದ ವೇದವ್ಯಾಸರು ಸಮಸ್ತ ವೇದಗಳನ್ನೂ ಅರಿತಿರುವವರೇ ಆಗಿರುವುದರಿಂದ ಪುರಾಣಗಳಲ್ಲಿ ವೇದೋಕ್ತ ಕರ್ಮಗಳನ್ನು ವಿವರಿಸಿದ್ದಾರೆ ಎನ್ನಲು ಅವಕಾಶವಿದೆ.

**ಅವಧಿ :** ಚಾತುರ್ಮಾಸ್ಯವು ನಾಲ್ಕು ತಿಂಗಳುಗಳ ವ್ರತವಾದರೂ, ಹನ್ನೆರಡು ಅಥವಾ ಅಧಿಕ ಮಾಸವಿರುವಾಗ ಹದಿಮೂರು ತಿಂಗಳುಗಳಿರುವ ಒಂದು ವರ್ಷದಲ್ಲಿ ಆ ನಾಲ್ಕು ತಿಂಗಳುಗಳು ಯಾವವು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಉತ್ತರವಾಗಿ ಆಷಾಢ ಶುಕ್ಲ ದ್ವಾದಶಿಯಿಂದ ಕಾರ್ತಿಕ ಶುಕ್ಲ ದ್ವಾದಶಿಯವರೆಗೆ ಈ ವ್ರತವನ್ನು ಆಚರಿಸಬೇಕೆಂದು ಪುರಾಣಗಳಲ್ಲಿ ಹೇಳಿದೆ. ಚಾಂದ್ರಮಾನದಿಂದ ಈ ನಾಲ್ಕು ತಿಂಗಳುಗಳು ಎನ್ನಬಹುದಾದರೂ, ಇದೊಂದೇ ವಿಧಾನವಲ್ಲ. ಆಷಾಢ ಹುಣ್ಣಿಮೆಯ ದಿನವೂ ಈ ವ್ರತವನ್ನು ಆರಂಭಿಸಬಹುದು. ಕರ್ಕ ಸಂಕ್ರಾಂತಿಯಿಂದಲೂ, ಅದಾಗದಿದ್ದರೆ ತುಲಾ ರಾಶಿಯಲ್ಲಿ ರವಿಯಿರುವಾಗಲೂ ಆರಂಭಿಸಬಹುದು. ಈ ನಾಲ್ಕು ಪ್ರಕಾರಗಳಲ್ಲಿಯೂ ಕಾರ್ತಿಕ ಮಾಸದ ದ್ವಾದಶಿಯ ದಿನವೇ ವ್ರತವನ್ನು ಕೊನೆಗೊಳಿಸಬೇಕು.

ಮಳೆಗಾಲದ ನಾಲ್ಕು ತಿಂಗಳುಗಳಲ್ಲಿ ಮಹಾವಿಷ್ಣು ಯೋಗ ನಿದ್ರೆಗೆ ಒಳಗಾಗುತ್ತಾನೆ. ಅವನು ಯೋಗನಿದ್ರೆಗೆಜಾರಿದಾಗ ಈ ವ್ರತ ಆರಂಭವಾಗುತ್ತದೆ. ಅವನು ನಿದ್ದೆಯಿಂದ ಎಚ್ಚರಗೊಂಡಾಗ ಈ ವ್ರತವು ಸಮಾಪ್ತವಾಗುತ್ತದೆ.

**ವ್ರತಾಚರಣೆ :** ಚಾತುರ್ಮಾಸ್ಯದ ಸಮಯದಲ್ಲಿ ಬೆಲ್ಲವನ್ನೂ ಎಣ್ಣೆಯನ್ನೂ ಮೆಣಸನ್ನೂ ಬೇಯಿಸಿದ್ದನ್ನೂ ಜೇನುತುಪ್ಪವನ್ನೂ ಮಾಂಸವನ್ನೂ ತಾಂಬೂಲವನ್ನೂ ತುಪ್ಪವನ್ನೂ ಹಣ್ಣು–ಹಂಪಲುಗಳನ್ನೂ ಬಿಟ್ಟರೆ ಒಳ್ಳೆಯದು. ಉಗುರು ಕೂದಲುಗಳನ್ನು ತೆಗೆಯಬಾರದು. ಉಪವಾಸವನ್ನು ಮಾಡಬೇಕು. ಅಷ್ಟಾಕ್ಷರ

ಮಂತ್ರವನ್ನು ಜಪಿಸಬೇಕು. ವಿಷ್ಣುವಿಗೆ ನಮಸ್ಕರಿಸಬೇಕು. ಹೀಗೆ ಹಲವು ಬಗೆಯ ನಿಯಮಗಳನ್ನು ಅನುಸರಿಸುವುದು ಈ ವ್ರತದ ಆಚರಣೆಯಾಗಿದೆ. ಅದನ್ನು ಸ್ವತಃ ಆಚರಿಸುವುದು ಒಂದು ಬಗೆಯಾದರೆ, ಅದರಲ್ಲಿ ಪಾಲ್ಗೊಳ್ಳುವುದು ಇನ್ನೊಂದು ಬಗೆ. ವ್ರತವನ್ನು ಮಾಡುವವರಿಗೆ ಸಹಕರಿಸಿದರೂ ಸಾಕು, ಆ ವ್ರತವನ್ನು ಮಾಡಿದ ಪುಣ್ಯವೇ ಬರುತ್ತದೆ.

**ಫಲಲಾಭ :** ಹಿಂದೆ ಹೇಳಿದಂತೆ ಮಾಧುರ್ಯ ಸೌಂದರ್ಯ ಮುಂತಾದ ಫಲಗಳು ಈ ವ್ರತದಿಂದ ದೊರೆಯುತ್ತವೆ ಎನ್ನಲಾಗಿದೆ ಯಾದರೂ ವಿಷ್ಣು ಪ್ರೀತಿಯೇ ಈ ವ್ರತದ ಮುಖ್ಯವಾದ ಫಲವೆನ್ನಬಹುದು. ಗೀತೆಯಲ್ಲಿ ಹೇಳಿದಂತೆ ಫಲಕಾಮನೆಯು ಸಂಸಾರಬಂಧನಕ್ಕೆ ಕಾರಣವಾಗುತ್ತದೆ. ಭಗವಂತನಿಗೆ ವ್ರತವನ್ನು ಸಮರ್ಪಿಸಿದರೆ, ಮೋಕ್ಷವು ದೊರೆಯುತ್ತದೆ. ಈ ಕಾರಣದಿಂದ ಆಸ್ತಿಕರು ಭವಬಂಧ ವಿಮುಕ್ತಿಗಾಗಿ ಈ ವ್ರತವನ್ನು ಪ್ರತ್ಯಕ್ಷ ವಾಗಿಯೋ ಪರೋಕ್ಷವಾಗಿಯೋ ಪ್ರತಿವರ್ಷವೂ ಆಚರಿಸುತ್ತಾರೆ. ಅಷ್ಟರಲ್ಲಿಯೇ ಇನ್ನೂ ವ್ರತವು ಪೂರ್ಣವಾಗದಿರುವಾಗ ಸಾವು ಸಂಭವಿಸಿದರೂ ವ್ರತವು ಪೂರ್ಣವಾಗಲಿ ಎಂದು ಪರಮಾತ್ಮ ನನ್ನು ಪ್ರಾರ್ಥಿಸುತ್ತಾರೆ.

**ಯತಿವ್ರತ :** ಯತಿಗಳು, ಪರಿವ್ರಾಜಕರು ಅಂದರೆ ಒಂದು ಕಡೆಯಿಂದ ಇನ್ನೊಂದುಕಡೆ ಸಂಚರಿಸುತ್ತಾರೆ. ಅವರು ಹಳ್ಳಿಯಲ್ಲಿ ಒಂದು ದಿನ, ಪಟ್ಟಣದಲ್ಲಿ ಹೆಚ್ಚೆಂದರೆ ಐದು ದಿನಗಳ ವರೆಗೆ ವಾಸಮಾಡಬಹುದು. ಮಳೆಗಾಲದಲ್ಲಿ ಸಂಚಾರವು ಅಸಾಧ್ಯ ವಾದರೆ, ನಾಲ್ಕು ತಿಂಗಳ ವರೆಗೆ ಅವರು ಒಂದೇ ತಾಣದಲ್ಲಿ ತಂಗ ಬಹುದು. ಅದು ಕೆಲವರು ಹೇಳುವಂತೆ ವರ್ಷಋತುವಿನ ಎರಡು ತಿಂಗಳುಗಳೇ ಆದರೂ ಆಗಬಹುದು. ನಿಯಮವಿಲ್ಲದೆ, ವ್ರತವಿಲ್ಲದೆ, ಜಪವಿಲ್ಲದೆ ಚಾತುರ್ಮಾಸ್ಯವನ್ನು ಆಚರಿಸಿದರೆ ಇದ್ದೂ ಸತ್ತಂತೆ ಎಂದು ನಿಂದಿಸಲಾಗಿದೆ.

**ಮಾಸವ್ರತ :** ಒಂದೊಂದು ತಿಂಗಳಿಗೂ ಒಂದೊಂದು ವಸ್ತುವನ್ನು ವರ್ಜ್ಯ ಎನ್ನಲಾಗಿದೆ. ಶ್ರಾವಣದಲ್ಲಿ ತರಕಾರಿಯನ್ನೂ ಭಾದ್ರಪದದಲ್ಲಿ ಮೊಸರನ್ನೂ ಆಶ್ವಿನದಲ್ಲಿ ಹಾಲನ್ನೂ ಕಾರ್ತಿಕದಲ್ಲಿ ದ್ವಿದಳಧಾನ್ಯವನ್ನೂ ಸೇವಿಸಬಾರದು. ಕಾರ್ತಿಕದಲ್ಲಿ ಕೊಡುಗೆ ಯನ್ನು ತೆಗೆದುಕೊಳ್ಳಬಾರದು. ತೆನ್ನಾಲಿ ರಾಮನ ಬೆಕ್ಕಿನಂತೆ ಕೆಲವರಿಗೆ ಇವು ಬೇಕಾಗುವುದೇ ಇಲ್ಲ. ಯಾರು ಇವುಗಳನ್ನು ಮಾಡುವರೋ, ಅವರಿಗೆ ಮಾತ್ರ ಈ ನಿಷೇಧವು ಅನ್ವಯಿಸುತ್ತದೆ. ಅದನ್ನು ಒಂದು ತಿಂಗಳು ಸೇವಿಸದಿದ್ದರೆ, ವರ್ಷದಲ್ಲಿ ಉಳಿದ ಹನ್ನೊಂದು ತಿಂಗಳ ಕಾಲ ಸ್ವೀಕರಿಸುವ ಯೋಗ್ಯತೆ ಯುಂಟಾಗುತ್ತದೆ. ಆಹಾರ ಯಾವುದೇ ಆದರೂ ಅದನ್ನು ನಿರಂತರವಾಗಿ ಸೇವಿಸುವುದು ಒಳ್ಳೆಯದಲ್ಲ ಎಂಬುದನ್ನು ವೈದ್ಯರೇ ಹೇಳಬೇಕಿಲ್ಲ. ಯಾವ ವಿಜ್ಞಾನಿಯೂ ಅದನ್ನು ಸಂಶೋಧನೆಯಿಂದ ದೃಢಪಡಿಸಬೇಕಿಲ್ಲ. ಊಟ ಮಾಡುವವರಿಗೆಲ್ಲರಿಗೂ ಅದು ತಿಳಿದೇ ಇರುತ್ತದೆ.

**ಧಾನ್ಯ ನಿಷೇಧ :** ಅವರೆ, ರಾಜಮಾ ಎಂಬ ಉತ್ತರ ದೇಶದ ಕಾಳು ಇವುಗಳನ್ನು ಚಾತುರ್ಮಾಸ್ಯದಲ್ಲಿ ಉಪಯೋಗಿಸಿದರೆ ಪತಿತನಾಗುತ್ತಾನೆ. ಕಾರ್ತಿಕ ಮಾಸದಲ್ಲಿ ಇವುಗಳನ್ನು ಉಪಯೋಗಿಸಿದರಂತೂ ನರಕಕ್ಕೆ ಹೋಗುವುದು ನಿಶ್ಚಿತವಾಗುತ್ತದೆ. ಬೆಟ್ಟಮಲ್ಲಿಗೆ (ಕೊಡಸ), ಪಡುವಲ, ಬದನೆಗಳನ್ನು ಬಳಸಿದರೆ ಏಳು ಜನ್ಮಗಳಲ್ಲಿ ಸಂಪಾದಿಸಿದ ಪುಣ್ಯವು ನಾಶವಾಗುತ್ತದೆ. ಅವರೆ ಮುಂತಾದವುಗಳನ್ನು ಚಾತುರ್ಮಾಸ್ಯದಲ್ಲಿ ಸೇವಿಸಬಾರದೆಂದು ತಾತ್ಪರ್ಯವಲ್ಲದೆ ಈ ಅನಿಷ್ಟವುಂಟಾಗುವುದೆಂದಲ್ಲ. ಬೇಕೆನಿಸಿದ್ದನ್ನು ಬಿಡುವುದೂ ಬೇಡವೆನಿಸುವ ಉಪವಾಸ ನಾಮಸಂಕೀರ್ತನೆ ಮುಂತಾದವುಗಳನ್ನು ಮಾಡುವುದೂ ಇಲ್ಲಿ ಅಪೇಕ್ಷಣೀಯವಾಗಿದೆ.

**ವ್ರತ ಪ್ರಶಂಸೆ :** ವೈಷ್ಣವ ವ್ರತಗಳನ್ನು ಮನಸ್ಸಿನಲ್ಲಿಯೇ ಮಾಡಿದರೂ, ಮಾಡಬೇಕೆಂದು ಅಂದುಕೊಂಡರೂ ನೂರಾರು ಜನ್ಮಗಳ ಪಾಪವು ನಾಶವಾಗುತ್ತದೆ. ಪ್ರತಿದಿನವೂ ಸ್ನಾನ ಮಾಡುತ್ತಾ ಒಂದು ಹೊತ್ತು ಊಟ ಮಾಡಿ ಶಾಂತನಾಗಿದ್ದು ಚಂಚಲತೆಯಿಲ್ಲದೆ ನಾಲ್ಕು ತಿಂಗಳ ಕಾಲ ಹರಿಯನ್ನು ಪೂಜಿಸಿದರೆ ವೈಕುಂಠವೇ ದೊರೆಯುತ್ತದೆ. ನೆಲದ ಮೇಲೆ ಮಲಗುವುದು ಚಾಂದ್ರಾಯಣ ವೆಂಬ ಪ್ರಾಯಶ್ಚಿತ್ತವನ್ನು ಆಚರಿಸುವುದು ವಿಷ್ಣುವಿನ ಪ್ರೀತಿಗೆ ಕಾರಣ ವಾಗುವುದಲ್ಲದೆ, ಅದರಿಂದ ವಿಷ್ಣುಸಾಯುಜ್ಯವೆಂಬ ಮೋಕ್ಷವು ದೊರೆಯುತ್ತದೆ.


## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಆತ್ಮೀಯ ಬ್ರಾಹ್ಮಣ ಬಂಧು,

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾವು** ಮಕ್ಕಳ ವಿದ್ಯಾಭ್ಯಾಸ ಪ್ರೋತ್ಸಾಹಿಸುವ ನಿಟ್ಟಿನಲ್ಲಿ 2022 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ (10ನೇ ತರಗತಿ) ಹಾಗೂ ಪಿ.ಯು.ಸಿ.(ಪ್ಲಸ್ 2) ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾವಂತ ಮಕ್ಕಳಿಗೆ **'ಪ್ರತಿಭಾ ಪುರಸ್ಕಾರ'** ಕಾರ್ಯಕ್ರಮವನ್ನು ಮಹಾಸಭಾದ ವತಿಯಿಂದ ಆಯೋಜಿಸಲಾಗಿದ್ದು, ಆಸಕ್ತ ಮಕ್ಕಳು ಎಸ್.ಎಸ್.ಎಲ್.ಸಿ (10ನೇ ತರಗತಿ) ಹಾಗೂ ಪಿ.ಯು.ಸಿ.(ಪ್ಲಸ್ 2)ಪರೀಕ್ಷೆಗಳಲ್ಲಿ ಶೇ.98ಕ್ಕಿಂತ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾಗಿದ್ದಲ್ಲಿ, **ದೃಢೀಕೃತ ಅಂಕಪಟ್ಟಿ ಮತ್ತು ನಿಗದಿತ ಪ್ರಪತ್ರದಲ್ಲಿ ವಿವರಗಳನ್ನು ಭರ್ತಿ ಮಾಡಿ ದಿನಾಂಕ 20-08-2022 ರೊಳಗಾಗಿ ಅಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ, ಇವರಿಗೆ ಅರ್ಜಿ ಸಲ್ಲಿಸಲು ಕೋರಿದೆ.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99458 40620**

# ಶ್ರಾವಣ ಶನಿವಾರ

–ಡಾ। ಮುದ್ರಾಡಿ ವಾಸುದೇವ ಭಟ್

ಸೂರ್ಯೋಪಾಸಕರು ಆದಿತ್ಯವಾರ ಒಪ್ಪೊತ್ತು ಆಚರಿಸುತ್ತಾರೆ. ಇದರಂತೆ ಶಿವೋಪಾಸಕರು ಸೋಮವಾರ, ಸುಬ್ರಹ್ಮಣ್ಯ ಉಪಾಸಕರು ಮಂಗಳವಾರ, ರಾಮೋಪಾಸಕರು ಬುಧವಾರ, ರಾಯರ ಭಕ್ತರು ಗುರುವಾರ ಮತ್ತು ದೇವೀ ಉಪಾಸಕರು ಶುಕ್ರವಾರ ಆಚರಿಸುಂತೆ ತಿರುಪತಿ ಶ್ರೀನಿವಾಸನ ಭಕ್ತರು ಶನಿವಾರ ಅದರಲ್ಲೂ ಶ್ರಾವಣ ಶನಿವಾರ ತಪ್ಪದೆ ಆಚರಿಸುತ್ತಾರೆ.

ವ್ರತವೆಂದರೆ ಒಂದೊತ್ತು ಊಟ. ಎರಡು ಹೊತ್ತು ಫಲಾಹಾರ ಸೇವನೆ. ಋಷೀಮೂಲ, ಪಾಕಮೂಲ ನದೀಮೂಲಾದಿಗಳಲ್ಲಿ ಕೆದಕಲಿಕ್ಕೆ ಹೋಗಬಾರದು. 'ಅವಿಗೀತ ಶಿಷ್ಟಾಚಾರ ವಿಷಯಸ್ವಾತ್' ಎಂಬಂತೆ ಇದಕ್ಕೆಲ್ಲ ಸಂಪ್ರದಾಯವೇ ಮೂಲವು. ಸಂಪ್ರದಾಯಕ್ಕೆ ಅನುಭವವೇ ಮೂಲವು. ಗರುಡಪುರಾಣ, ಬ್ರಹ್ಮಾಂಡ ಪುರಾಣ, ಸ್ಥಳ ಪುರಾಣಾದಿಗಳಲ್ಲಿ ತಿರುಪತಿ ಕ್ಷೇತ್ರ ಮಹಾತ್ಮ್ಯೆ ಇರುವುದು.

ಈ ಒಪ್ಪೊತ್ತು ಊಟದಲ್ಲಿ ಎರಡುವಿಧ. ತಮ್ಮ ಸಂಪ್ರದಾಯ ಪ್ರಕಾರ ಹಗಲು ಊಟ. ಅಪ್ಪ ಸಂಪ್ರದಾಯ ಪ್ರಕಾರ. ವ್ರತಕಥಾದಿ ಪೂಜೆ ಮುಗಿದ ಮೇಲೆ ಅಂದರೆ 'ನಕ್ತೋಜೇ' ಎಂಬಂತೆ ರಾತ್ರಿ ಊಟ.

ಕೊಡಪಾನವನ್ನು ಸರಿಯಾಗಿ ಇಟ್ಟು ನೀರು ತುಂಬಿಸಿದರೆ ಪೂರ್ಣವಾಗಿ ನೀರು ತುಂಬುವುದು. ಇಲ್ಲದಿದ್ದರೆ ತುಂಬಲಾರದು. ಹೀಗೆಯೇ ಪ್ರತಿಯೊಂದು ವ್ರತವನ್ನು ಶಾಸ್ತ್ರೀಯವಾಗಿ ಆಚರಿಸಿದರೆ ಅದರ ಪೂರ್ಣಫಲ ಬರುವುದು, ಕಾಟಾಚಾರಕ್ಕೆ ಆಚರಿಸಿದರೆ ಹರಕೆ ಸಂದಾಯವಾಗಬಹುದು.

ಶ್ರಾವಣ ಶನಿವಾರ ವ್ರತದ ಕ್ರಮ ಹೇಗಿತ್ತೆಂದರೆ ಇದಕ್ಕೆ ಕ್ರಯಕ್ಕೆ ತಂದ ಅಕ್ಕಿಯ ನೈವೇದ್ಯ ನಿಷಿದ್ಧ. ನಾಲ್ಕಾರು ಮನೆಗೆ ಹೋಗಿ 'ಭವತಿ ಭಿಕ್ಷಾಂದೇಹಿ' ಎಂಬಂತೆ ಭಿಕ್ಷೆ ಬೇಡಿ ತಂದ ಅಕ್ಕಿಯಿಂದಲೇ ನೈವೇದ್ಯ ತಯಾರಿಸಬೇಕು. ಮತ್ತೆ ಕೋಸಂಬರಿ, ಎಳ್ಳಿನ ಪಂಚಕಜ್ಜಾಯ, ಬೆಲ್ಲದ ಪಾನಕ ಮಾಡಿ ದೇವರಿಗೆ ಸಮರ್ಪಿಸಬೇಕು. ಆಮೇಲೆ ಶ್ರೀನಿವಾಸ ದೇವರ ಹುಂಡಿಯನ್ನು ದೇವರ ಎದುರಿನಲ್ಲಿ ಇಟ್ಟು ಅದಕ್ಕೂ ಪಂಚೋಪಚಾರ ಪೂಜೆ ಮಾಡಬೇಕು. ತದನಂತರ ವಿಷ್ಣುಸಹಸ್ರನಾಮಾದಿಗಳನ್ನು ಹೇಳಿ ಮಹಾಮಂಗಳಾರತಿ ಮಾಡುವುದು.

ಮಹಾಮಂಗಳಾರತಿಯಾದ ಮೇಲೆ ಮನೆಮಂದಿಯೆಲ್ಲ ಸೇರಿಕೊಂಡು ಕೈಯಲ್ಲಿ ಹಣ, ಶ್ರೀ ತುಳಸಿ ಹಿಡಿದುಕೊಂಡು ವೆಂಕಟೇಶ ಸ್ತೋತ್ರ ಹೇಳಬೇಕು. ಸ್ತೋತ್ರ ಮುಗಿಯಲು ದೊಡ್ಡವರಿಂದ ಹಿಡಿದು ಚಿಕ್ಕವರತನಕ ಕೈಯಲ್ಲಿದ್ದ ಹಣವನ್ನು ಮನಸೋಭೀಷ್ಟ ಸಿದ್ಧಿಯಾಗಲೆಂದು ಪ್ರಾರ್ಥಿಸಿಕೊಂಡು ಪ್ರಸಾದ ಮುದ್ರೆಯಿಂದ ಹುಂಡಿಗೆ ಸಮರ್ಪಿಸಿ, ನಮಸ್ಕರಿಸಬೇಕು. ಉತ್ತರಪೂಜೆ ಮುಗಿಸಿ ಪ್ರಸಾದ ಸ್ವೀಕರಿಸಬೇಕು.

ಈ ವ್ರತಾಚರಣೆಯನ್ನು ಭಕ್ತಿಯಿಂದ ಮಾಡುವುದರಿದ ಶ್ರೀನಿವಾಸದೇವರ ಅನುಗ್ರಹ ಉಂಟಾಗಲಿರುವುದು. ಆಯುರಾರೋಗ್ಯ ಭಾಗ್ಯ ವೃದ್ಧಿಯಾಗಲಿರುವುದು. ಪುರುಷಾರ್ಥ ಚತುಷ್ಟಯಗಳು ಸಿದ್ಧಿಸಲಿರುವುದು. ದೇವರು ಎಲ್ಲರಿಗೂ ಒಳ್ಳೆಯದನ್ನು ಮಾಡಲಿ.

॥ **ಶುಭಂಭೂಯಾತ್** ॥

ಜಾಹಿರಾತು

**ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ**

**Sri Srinivasa Nilaya Dharmika Sabha Mandira**

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು
ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ
**ದೂರವಾಣಿ : 2672 2267, 98866 55755**

# ಸನಾತನ

– ಸತ್ಯೇಶ್ಎನ್. ಬೆಳ್ಳೂರ್
(ವಿಪ್ರನುಡಿ ಆಂಗ್ಲ ಪತ್ರಿಕೆ ಸಂಪಾದಕರು)

ನಾವೆಲ್ಲರೂ ಸನಾತನ ಎಂಬ ಪದವನ್ನು ಆಗಾಗ್ಗೆ ಬಳಸುತ್ತೇವೆ. ವಿಶೇಷವಾಗಿ ನಮ್ಮ ಧರ್ಮವನ್ನು ಕುರಿತಾಗಿ ಮಾತನಾಡುವಾಗ, "ನಮ್ಮದು ಸನಾತನ ಧರ್ಮ" ಎಂದು ಬಹಳ ಹೆಮ್ಮೆಯಿಂದ ಹೇಳುತ್ತೇವೆ, ಸನಾತನವೆಂದರೇನು ಎಂದು ಯಾರಾದರೂ ಕೇಳಿದರೆ, "ಬಹಳ ಹಿಂದಿನದು" ಎಂಬುದು ಸರ್ವೇಸಾಮಾನ್ಯವಾಗಿ ನಮ್ಮ ಉತ್ತರವಾಗಿರುತ್ತದೆ.

ಹಾಗಾದರೆ, ಬಹಳ ಹಿಂದಿನದ್ದೆಲ್ಲ ಸನಾತನವೇ? ಈ ಪ್ರಶ್ನೆಗೆ ಏನೆಂದು ಉತ್ತರಿಸಬೇಕು? ಇದೇ ನಿಟ್ಟಿನಲ್ಲಿ ಒಮ್ಮೆ ಚರ್ಚೆಯಾಗುತ್ತಿದ್ದಾಗ ಓರ್ವರು ಹೇಳಿದ್ದರು – "ನಮ್ಮ ಮತವೂ ಕೂಡ ಸನಾತನವೇ. ಅದಕ್ಕೆ ಸಾವಿರದ ಎಂಟು ನೂರು ವರ್ಷಗಳ ಇತಿಹಾಸವಿದೆ. ಇದು ಕಡಿಮೆ ಸಮಯವಾ?" ಅವರ ವಾದಕ್ಕೆ ಪ್ರತ್ಯುತ್ತರವಾಗಿ, "ನಮ್ಮದು ನಿಮಗಿಂತ ಹಿಂದಿನದು" ಎಂದಷ್ಟೇ ಹೇಳಬೇಕಾದೀತು. ಅಂದರೆ, "ನಮ್ಮಿಬ್ಬರದೂ ಸನಾತನವೇ ಹೌದು. ಆದರೆ, ನಮ್ಮದು ನಿಮಗಿಂತ ಹೆಚ್ಚು ಸನಾತನ" ಎಂದಂತೆ!

ಯಾವುದನ್ನು ನಾವು ಕೇವಲ ಕಾಲದಗಣನೆಯಲ್ಲಿ ತುಲನೆ ಮಾಡುತ್ತೇವೋ, ಅದು ಸನಾತನದ ವ್ಯಾಖ್ಯೆಗೆ ಬರುವುದಿಲ್ಲ. ಅದು, "ಪುರಾತನ" ಎಂಬ ತೆಕ್ಕೆಗೆ ಬರುತ್ತದಷ್ಟೆ! "ನನ್ನಲ್ಲಿರುವ ನಾಣ್ಯ ಎರಡನೆಯ ಶತಮಾನದ ರಾಜರ ಕಾಲದ್ದು" – ಹಾ... ಅದು ಸನಾತನವಲ್ಲ. ಅದು ಪುರಾತನ. ಹಾಗಾದರೆ, ಸನಾತನ ಎಂದು ನಾವು ಯಾವುದನ್ನು ಕರೆಯಬೇಕು? ಬನ್ನಿ ನೋಡೋಣ...

ಅಥರ್ವ ವೇದದ ಒಂದು ಮಂತ್ರ ಹೀಗಿದೆ:

**ಸನಾತನಮೇನಮಾಹುರುತಾದ್ಯ ಸ್ಯಾತ್ಪುನರ್ಣವಃ ।**
**ಅಹೋರಾತ್ರೇ ಪ್ರಜಾಯೇತೇಅನ್ಯೋಅನ್ಯಸ್ಯರೂಪಯೋಃ ॥**

**(ಅ – 10.8.23)**

ದಿನರಾತ್ರಿಗಳು ಅನ್ಯೋನ್ಯವಾಗಿ, ಒಂದಕ್ಕೊಂದು ಪೂರಕವಾಗಿ ಆದಿ–ಅಂತ್ಯಗಳಿಲ್ಲದಂತೆ ಸದಾ ನವನವೀನವಾಗಿ ಇವೆ. "ಏನಂ ಸನಾತನಂ ಆಹುಃ"–ಇದನ್ನು (ಅಥವಾ ಇವನನ್ನು) ಸನಾತನ ಎಂದು ಕರೆಯುತ್ತಾರೆ. ಇದು ಸನಾತನ ಎಂಬ ಪದಕ್ಕೆ ವೇದ ಕಲ್ಪಿಸುವ ಅರ್ಥ.

ಈ ವ್ಯಾಖ್ಯೆಯ ಹಿನ್ನೆಲೆಯಲ್ಲಿ ಈಗ ನಾವು ಸನಾತನ ಎಂಬ ಪದವನ್ನು ಅರ್ಥೈಸಿಕೊಂಡರೆ, ಅದು ಕೇವಲ ಹಿಂದಿನದು ಎಂದಷ್ಟೇ ಆಗುವುದಿಲ್ಲ. ಅದಕ್ಕೆ ಮುಖ್ಯವಾಗಿ ಎರಡು ಆಯಾಮಗಳು ಇರಲೇಬೇಕು.

ಮೊದಲನೆಯದಾಗಿ, ಅದು ಆದಿಅಂತ್ಯಗಳು ಇಲ್ಲದ್ದಾಗಿರಬೇಕು. ಹುಟ್ಟು ಸಾವುಗಳಿಂದ ಹೊರತಾಗಿರಬೇಕು. ಸೃಷ್ಟಿಲಯಗಳನ್ನು ಮೀರಿರಬೇಕು. ಎಲ್ಲ ಕಾಲದಲ್ಲಿಯೂ ನಿರಂತರವಾದ ಅಸ್ತಿತ್ವ ಅದಕ್ಕಿರಬೇಕು. ಇಷ್ಟಿದ್ದರೆ ಸಾಲದು, ಬಹಳ ಮುಖ್ಯವಾಗಿ ಅದು ಎಲ್ಲ ಕಾಲಗಳಲ್ಲಿಯೂ ನಿತ್ಯನೂತನವಾಗಿಯೂ ಇರಬೇಕು. ಸಾವಿರಾರು ವರ್ಷಗಳ ಹಿಂದೆ ಅದು ಎಷ್ಟು ಪ್ರಸ್ತುತವಾಗಿತ್ತೋ, ಈ ಹೊತ್ತಿಗೆ ಹಾಗೂ ಸಾವಿರಾರು ವರ್ಷಗಳ ತರುವಾಯವೂ ಅಷ್ಟೇ ಪ್ರಸ್ತುತವಾಗಿರಬೇಕು. ಆಗ, ಅದನ್ನು ನಾವು ಸನಾತನ ಎಂದು ಕರೆಯಬಹುದು. ಇದಕ್ಕೆ ಉತ್ತಮವಾದ ಉದಾಹರಣೆಗಳೆಂದರೆ – ಪರಮಾತ್ಮ ಎಂಬ ಪ್ರಜ್ಞೆ ಹಾಗೂ ವೇದಗಳೆಂಬ ಜ್ಞಾನಭಂಡಾರ. ಈ ಎರಡಕ್ಕೂ, ಕಾಲದ ಚೌಕಟ್ಟಿಲ್ಲ. ಅವುಗಳಿಗೆ ಆದಿಅಂತ್ಯಗಳಿಲ್ಲ. ಅವು ನಿರಂತರ. ಇದಕ್ಕೂ ಮಿಗಿಲಾಗಿ, ಅವು ಎಲ್ಲ ಕಾಲಗಳಲ್ಲಿಯೂ, ನವನವೀನ. ಸದಾ ಪ್ರಸ್ತುತ.

**ಆದಿಯಿಂ ಆವುದಿದೆಅಂತ್ಯಆವುದಕಿಲ್ಲ ।**
**ಬೋಧನೆಯು ಆವುದರದನುದಿನವು ಹೊಸತೊ ॥**
**ಮೇದುರದ ಶಾಸ್ತ್ರವೊಂದಿಹುದೇನುಮೆಂದೆನಲು ।**
**ವೇದಒಂದೇ ನೋಡ – ನವ್ಯಜೀವಿ ॥**
**(ಮೇದುರ = ಅತಿಶಯ, ಶ್ರೇಷ್ಠ)**

ಇನ್ನು ಮುಂದೆ ಯಾವುದನ್ನಾದರೂ ಸನಾತನ ಎಂದು ಕರೆಯುವಾಗ ಅದಕ್ಕೆ ಈ ಎರಡು ಗುಣವಿಶೇಷಗಳು ಇವೆಯಾ ಎಂದು ತರ್ಕಬದ್ಧವಾಗಿ ಅರಸಿ. ಹೌದು ಎನ್ನಿಸಿದರೆ, ಅದು "ಸನಾತನ". ಇಲ್ಲದಿದ್ದರೆ, ಅದು "ಪುರಾತನ". ನಿಮ್ಮ ಈ ಹುಡುಕಾಟ ನಿಮಗೆ ಜ್ಞಾನಪ್ರದವಾಗಿರಲೆಂದೇ ಆಶಿಸುತ್ತೇನೆ. ಎಲ್ಲರಿಗೂ ಒಳಿತಾಗಲಿ.

## ಉದಾರ ದೇಣಿಗೆ ನೀಡಲು ಮನವಿ

ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಸಮರ್ಥ ಮಾರ್ಗದರ್ಶನದಲ್ಲಿ ಗಾಯತ್ರೀ ಭವನ ಮತ್ತು ವಿದ್ಯಾವಾಸಿನಿ ಮಹಿಳಾ ವಿದ್ಯಾರ್ಥಿನಿಲಯದ ನವೀಕರಣವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಕಾಮಗಾರಿಗೆ ಸಾಕಷ್ಟು ಧನ ಸಂಪನ್ಮೂಲದ ಅಗತ್ಯವಿದೆ. ಈ ದಿಶೆಯಲ್ಲಿ ತಮ್ಮ ಸಹಾಯವನ್ನು ನಿರೀಕ್ಷಿಸುತ್ತೇವೆ. ಮಹಾಸಭಾದ ಅಂಗಸಂಸ್ಥೆಯಾದ ಸಪ್ತರ್ಷಿ ಫೌಂಡೇಷನ್ ಹೆಸರಿನಲ್ಲಿ ತಾವು ಚೆಕ್ ಅನ್ನು ನೀಡಬಹುದು. ತಾವು ಉದಾರವಾಗಿ ನೀಡಿದ ಹಣಕ್ಕೆ 80ಜಿ ತೆರಿಗೆ ವಿನಾಯಿತಿ ಇದೆ. ತಾವು ನಮ್ಮೊಂದಿಗೆ ಈ ಕಾರ್ಯದಲ್ಲಿ ಕೈಜೋಡಿಸಬೇಕಾಗಿ ಸವಿನಯ ಕೋರಿಕೆ.

**ಬ್ಯಾಂಕ್ ವಿವರ**

| | | |
|---|---|---|
| ಬ್ಯಾಂಕ್ | : | ಕರ್ನಾಟಕ ಬ್ಯಾಂಕ್ |
| ಖಾತಾ ಹೆಸರು | : | ಸಪ್ತರ್ಷಿ ಫೌಂಡೇಷನ್ |
| ಖಾತಾ ಸಂಖ್ಯೆ | : | 1072500102061001 |
| ಐಎಫ್ಎಸ್ಸಿ | : | KARB0000107 |
| ಶಾಖೆ | : | ಬನಶಂಕರಿ ಎರಡನೇ ಹಂತ, ಬೆಂಗಳೂರು |

– ಪ್ರಧಾನ ಕಾರ್ಯದರ್ಶಿ

# ತತ್ತ್ವಬೋಧಃ

ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

## ಮುನ್ನುಡಿ :

ಸನಾತನ ಧರ್ಮದ ಆಧಾರವಾದಂತಹ ಶಾಸ್ತ್ರವು ವೇದ. ವೇದಶಾಸ್ತ್ರದಲ್ಲಿ ಕರ್ಮಕಾಂಡ ಹಾಗೂ ಜ್ಞಾನಕಾಂಡ ಎಂಬ ಎರಡು ಕಾಂಡಗಳಿವೆ. ಅವುಗಳಲ್ಲಿ ಕರ್ಮಕಾಂಡವು ಅಗ್ನಿಹೋತ್ರಾದಿ ಕರ್ಮಗಳನ್ನು ತಿಳಿಸಿದರೆ ಜ್ಞಾನಕಾಂಡವು ಪಾರಮಾರ್ಥಿಕ ಸತ್ಯವಾದಂತಹ ಪರಬ್ರಹ್ಮನ ತತ್ತ್ವವನ್ನು ಪ್ರತಿಪಾದಿಸುತ್ತದೆ. ವೇದಗಳ ಅಂತ್ಯಭಾಗದಲ್ಲಿರುವ ಈ ಜ್ಞಾನಕಾಂಡವು ವೇದಾಂತ ಹಾಗೂ ಉಪನಿಷತ್ತು ಎಂದು ಪ್ರಖ್ಯಾತವಾಗಿದೆ.

ಆತ್ಮನ ಯಥಾರ್ಥವನ್ನು ತಿಳಿಯಲು ಉಪನಿಷತ್ತಿನ ವಾಕ್ಯಗಳೇ ಪ್ರಮಾಣ. ಮಹಾಭಾರತದ ಭಾಗವಾದ ಭಗವದ್ಗೀತೆ ಹಾಗೂ ಬಾದರಾಯಣ ಮಹರ್ಷಿ ರಚಿಸಿದ ಬ್ರಹ್ಮಸೂತ್ರಗಳು ಈ ವೇದಾಂತದ ಪ್ರಮೇಯಗಳನ್ನು ಇನ್ನಷ್ಟು ಸ್ಪಷ್ಟಪಡಿಸುತ್ತದೆ. ಉಪನಿಷತ್ತು, ಭಗವದ್ಗೀತೆ ಹಾಗೂ ಬ್ರಹ್ಮಸೂತ್ರ ಈ ಮೂರು ಗ್ರಂಥಗಳ ಸಮೂಹವನ್ನು ಪ್ರಸ್ಥಾನತ್ರಯ ಎಂದು ಕರೆಯುವುದು ರೂಢಿ. ಪ್ರಸ್ಥಾನತ್ರಯದ ಆಶಯವನ್ನು ವಿಶದವಾಗಿ ತಿಳಿಸಲೆಂದು ಶ್ರೀಶಂಕರಾಚಾರ್ಯರು ಭಾಷ್ಯಗಳನ್ನು ಭಾಷ್ಯಗಳನ್ನು ರಚಿಸಿದ್ದಾರೆ.

ಈ ಮೇಲಿನ ಗ್ರಂಥಗಳನ್ನು ನೇರವಾಗಿ ಅಧ್ಯಯನ ಮಾಡುವುದು ಆರಂಭಿಕರಿಗೆ ಅಷ್ಟು ಸುಲಭವಲ್ಲ. ಹಾಗಾಗಿ ಶಂಕರಾಚಾರ್ಯರು ಹಾಗೂ ಇತರ ಆಚಾರ್ಯರು ವೇದಾಂತದ ತಿರುಳನ್ನು ಸರಳ ಹಾಗೂ ಸಂಕ್ಷಿಪ್ತ ರೀತಿಯಲ್ಲಿ ತಿಳಿಸುವಂತಹ ಪ್ರಕರಣ ಗ್ರಂಥಗಳನ್ನು ಬರೆದಿದ್ದಾರೆ. ತತ್ತ್ವಬೋಧ ಎನ್ನುವ ಪ್ರಸ್ತುತ ಗ್ರಂಥವು ಇಂಥವುಗಳಲ್ಲಿ ಒಂದು.

ತತ್ತ್ವಬೋಧವನ್ನು ರಚಿಸಿದವರು ಯಾರೆಂಬುದು ತಿಳಿದಿಲ್ಲ. ಇದನ್ನು ಆದಿಶಂಕರಾಚಾರ್ಯರೇ ರಚಿಸಿದ್ದಾರೆ ಎಂದು ಕೆಲವರ ನಂಬಿಕೆಗೆ ಯಾವ ಆಧಾರವೂ ಕಂಡುಬರುವುದಿಲ್ಲ. ಗ್ರಂಥದ ಆದಿಯಲ್ಲಿ ಲೇಖಕರು ತಮ್ಮಗುರುಗಳನ್ನು ಸ್ಮರಿಸುತ್ತಾ 'ವಾಸುದೇವೇಂದ್ರ ಯೋಗೀಂದ್ರ' ಎಂದಿದ್ದಾರೆ. ಇದರಿಂದ ಅವರ ಗುರುಗಳ ಹೆಸರು ವಾಸುದೇವೇಂದ್ರ ಯೋಗೀಂದ್ರ ಎಂಬುದನ್ನು ತಿಳಿಯಬಹುದು.

ಈ ಗ್ರಂಥವು ವೇದಾಂತದಲ್ಲಿ ಉಪದೇಶಿಸಲ್ಪಡುವ ಜೀವ–ಬ್ರಹ್ಮ–ಐಕ್ಯವನ್ನು ಅತ್ಯಂತ ಸಂಕ್ಷಿಪ್ತವಾಗಿ ತಿಳಿಸುತ್ತದೆ. ಅಷ್ಟೇ ಅಲ್ಲದೆ ವೇದಾಂತದಲ್ಲಿ ಸಾಮಾನ್ಯವಾಗಿ ಉಪಯೋಗಿಸಲ್ಪಡುವ ಹಲವಾರು ಪಾರಿಭಾಷಿಕ ಶಬ್ದಗಳನ್ನು ಈ ಗ್ರಂಥವು ಪರಿಚಯಿಸುತ್ತದೆ. ವೇದಾಂತದ ಅಧ್ಯಯನಕ್ಕೆ ಅಧಿಕಾರಿ, ಆತ್ಮ ಹಾಗೂ ಅನಾತ್ಮಗಳ ವಿವೇಕ, ಬ್ರಹ್ಮ, ಮಾಯೆ, ತತ್ತ್ವಮಸಿ ಎಂಬ ಮಹಾವಾಕ್ಯದ ಅರ್ಥ ಹಾಗೂ ಬ್ರಹ್ಮಜ್ಞಾನದ ಫಲ ಈ ವಿಷಯಗಳನ್ನು ಕ್ರಮಬದ್ಧವಾಗಿ ತಿಳಿಸಲಾಗಿದೆ. ವೇದಾಂತದಲ್ಲಿ ಪ್ರವೇಶವನ್ನು ಬಯಸುವ ಜಿಜ್ಞಾಸುಗಳಿಗೆ ಈ ಗ್ರಂಥವು ವರದಾನದಂತಿದೆ.

**ಮಂಗಳ:**

**ವಾಸುದೇವೇಂದ್ರಯೋಗೀಂದ್ರಂನತ್ವಾಜ್ಞಾನಪ್ರದಂಗುರುಮ್।**
**ಮುಮುಕ್ಷೂಣಾಂಹಿತಾರ್ಥಾಯತತ್ತ್ವಬೋಧೋಽಭಿಧೀಯತೇ॥**

**ಅನುವಾದ:** ಜ್ಞಾನವನ್ನು ಕರುಣಿಸಿದ ಗುರುಗಳಾದ ವಾಸುದೇವೇಂದ್ರ ಯೋಗೀಂದ್ರರಿಗೆ ನಮಸ್ಕರಿಸಿ ಮುಮುಕ್ಷುಗಳ ಹಿತಕ್ಕಾಗಿ ತತ್ತ್ವಬೋಧವು ಹೇಳಲ್ಪಡುತ್ತದೆ.

**ವಿವರಣೆ:** ಗ್ರಂಥದ ಆದಿಯಲ್ಲಿ ಮಂಗಳಾಚರಣೆಯನ್ನು ಮಾಡುವುದರಿಂದ ಗ್ರಂಥದ ರಚನೆಯಲ್ಲಿ ಬರುವ ವಿಘ್ನಗಳು ನಿವಾರಿಸಲ್ಪಡುತ್ತದೆ ಹಾಗೂ ಗ್ರಂಥವು ಸರಿಯಾದ ಓದುಗರನ್ನು ತಲುಪುತ್ತದೆ ಎಂಬುದು ಪರಂಪರಾಗತವಾದ ವಿಶ್ವಾಸ. ಗ್ರಂಥವನ್ನು ರಚಿಸಿದ ಆಚಾರ್ಯಪ್ರವರರು ತಮ್ಮ ಗುರುಗಳಿಗೆ ನಮಸ್ಕರಿಸುವ ಮೂಲಕ ಮಂಗಳಾಚರಣೆಯನ್ನು ಮಾಡಿದ್ದಾರೆ.

ತತ್ತ್ವಬೋಧ ಎನ್ನುವ ಗ್ರಂಥದ ಹೆಸರಿನಿಂದಲೇ ಇದರ ವಿಷಯವೇನೆಂದು ತಿಳಿಯಬಹುದು. ತತ್ತ್ವ ಎಂದರೆ ಪಾರಮಾರ್ಥಿಕವಾದ ವಸ್ತು. ಅದು ವೇದ ವೇದಾಂತದಲ್ಲಿ ಬ್ರಹ್ಮ, ಪರಮಾತ್ಮಾ ಇತ್ಯಾದಿ ಶಬ್ದಗಳಿಂದ ಕರೆಯಲ್ಪಡುತ್ತದೆ. ಅದರ ಬೋಧ ಎಂದರೆ ಜ್ಞಾನ. ಈ ಗ್ರಂಥವು ಮುಮುಕ್ಷುಗಳ ಹಿತಕ್ಕಾಗಿ ರಚಿಸಲ್ಪಟ್ಟಿದೆ. ಹಾಗಾಗಿ ಮುಮುಕ್ಷುಗಳೇ ಈ ಗ್ರಂಥದ ಅಧ್ಯಯನಕ್ಕೆ ಅಧಿಕಾರಿಗಳು ಹಾಗೂ ಮುಮುಕ್ಷುಗಳು ಬಯಸುವ ಮೋಕ್ಷವೇ ಈ ಗ್ರಂಥದ ಪ್ರಯೋಜನ ಎಂಬುದು ಸೂಚಿಸಿದಂತಾಗುತ್ತದೆ. ಗ್ರಂಥ ಹಾಗೂ ಪ್ರಮೇಯವಾದ ವಸ್ತು ಇವುಗಳ ನಡುವಿನ ಪ್ರತಿಪಾದ್ಯ–ಪ್ರತಿಪಾದಕ–ಸಂಬಂಧವಂತೂ ಸ್ಪಷ್ಟವೇ ಆಗಿದೆ.

**ಸಾಧನಚತುಷ್ಟಯಸಂಪನ್ನಾಧಿಕಾರಿಣಾಂಮೋಕ್ಷಸಾಧನಭೂತಂ ತತ್ತ್ವವಿವೇಕಪ್ರಕಾರಂವಕ್ಷ್ಯಾಮಃ।**

**ಅನುವಾದ** : ಸಾಧನ ಚತುಷ್ಟಯ ಸಂಪನ್ನರಾದ ಅಧಿಕಾರಿಗಳ ಮೋಕ್ಷಕ್ಕೆ ಸಾಧನವಾದ ತತ್ತ್ವವಿವೇಕದ ಪ್ರಕಾರವನ್ನು ಹೇಳುವೆವು.

**ವಿವರಣೆ** : ಅಧಿಕಾರಿಗಳು ಎಂದರೆ ಗ್ರಂಥದ ಅಧ್ಯಯನಕ್ಕೆ ಯೋಗ್ಯರಾದವರು. ಪ್ರತಿಯೊಂದು ಶಾಸ್ತ್ರಕ್ಕೂ ಅದರದ್ದೇ ಆದ ಅಧಿಕಾರಿಗಳಿರುತ್ತಾರೆ. ಸಾಧನ ಚತುಷ್ಟಯವನ್ನು ಹೊಂದಿದವನು ವೇದಾಂತಕ್ಕೆ ಅಧಿಕಾರಿ. ಇಲ್ಲಿ ಸಾಧನ ಎಂದರೆ ಆತ್ಮಜ್ಞಾನವನ್ನು ಪಡೆಯಲು ಆವಶ್ಯಕವಾದ ಕೆಲವು ಗುಣಗಳು. ಇವುಗಳ ಸಂಖ್ಯೆ ನಾಲ್ಕು. ಹಾಗಾಗಿ ಇವುಗಳನ್ನು ಸಾಧನ ಚತುಷ್ಟಯ ಎನ್ನುವರು. ಚತುಷ್ಟಯ ಎಂದರೆ ನಾಲ್ಕರ ಸಮೂಹ ಎಂದರ್ಥ.

ತತ್ತ್ವಜ್ಞಾನವು ಮೋಕ್ಷಕ್ಕೆ ಸಾಧನ. 'ತತ್ತ್ವ' ಎಂದರೆ ಪಾರಮಾರ್ಥಿಕವಾದ ಸತ್ಯ. ವೇದಾಂತದ ಪ್ರಕಾರ ಆತ್ಮ ಅಥವಾ ಬ್ರಹ್ಮ ಎನ್ನುವುದೊಂದೇ ತತ್ತ್ವ. ಅದಕ್ಕಿಂತ ಭಿನ್ನವಾದುದೆಲ್ಲವೂ ಅತತ್ತ್ವವೇ. ಆದರೆ ಅಜ್ಞಾನದಿಂದಾಗಿ ತತ್ತ್ವ ಮತ್ತು ಅ ತತ್ತ್ವಗಳು ಪರಸ್ಪರ ಬೆರೆತು ಕೊಂಡಿರುವುದೇ ಸಂಸಾರಕ್ಕೆ ಕಾರಣ. ಅ ತತ್ತ್ವದಿಂದ ತತ್ತ್ವವನ್ನು ಬೇರ್ಪಡಿಸಿ ಅದರ ಯಥಾರ್ಥವನ್ನು ತಿಳಿಯುವುದೇ ಮೋಕ್ಷಕ್ಕೆ ಸಾಧನವಾದ ತತ್ತ್ವವಿವೇಕ. ಪ್ರಸ್ತುತ ಗ್ರಂಥವು ಇದನ್ನೇ ವಿವರಿಸುತ್ತದೆ.

**ಸಾಧನಚತುಷ್ಟಯಂಕಿವಮ್? ನಿತ್ಯಾನಿತ್ಯವಸ್ತುವಿವೇಕಃ, ಇಹಾಮುತ್ರಾರ್ಥ ಫಲಭೋಗವಿರಾಗಃ, ಶಮಾದಿಷಟ್ಕಸಂಪತ್ತಿಃ, ಮುಮುಕ್ಷುತ್ವಂಚೇತಿ।**

**ಅನುವಾದ:** ಸಾಧನ ಚತುಷ್ಟಯ ಯಾವುದು? ನಿತ್ಯಾ ನಿತ್ಯವಸ್ತು ವಿವೇಕ, ಇಹಾಮುತ್ರಾರ್ಥಫಲಭೋಗವಿರಾಗ, ಶಮಾದಿಷಟ್ಕ ಸಂಪತ್ತಿ, ಹಾಗೂ ಮುಮುಕ್ಷುತ್ವ ಇವುಗಳು.

**ವಿವರಣೆ :** ಈ ಗ್ರಂಥವು ಪ್ರಶ್ನೋತ್ತರದ ರೂಪದಲ್ಲಿದೆ. ಇಲ್ಲಿ ಶಿಷ್ಯನು ಪ್ರಶ್ನೆಯನ್ನು ಕೇಳುತ್ತಾನೆ ಹಾಗೂ ಗುರುಗಳು ಅವುಗಳಿಗೆ ಉತ್ತರವನ್ನು ಕೊಡುತ್ತಾರೆ ಎಂದು ಕಲ್ಪಿಸಬೇಕು. ನಿತ್ಯಾ ನಿತ್ಯವಸ್ತು ವಿವೇಕ ಇತ್ಯಾದಿ ನಾಲ್ಕರ ಸಮೂಹವೇ ಸಾಧನ ಚತುಷ್ಟಯ ಎನ್ನಲ್ಪಡುವುದು. ಶಾಸ್ತ್ರೋಕ್ತ ಕರ್ಮಗಳನ್ನು ಈಶ್ವರಾರ್ಪಣ ಬುದ್ಧಿಯಿಂದ ಅನುಷ್ಠಾನ ಮಾಡುವುದೇ ಈ ಸಾಧನ ಚತುಷ್ಟಯಗಳ ಪ್ರಾಪ್ತಿಗೆ ಉಪಾಯ.

**ನಿತ್ಯಾನಿತ್ಯವಸ್ತುವಿವೇಕಃ ಕಃ ? ನಿತ್ಯಂವಸ್ತುಏಕಂಬ್ರಹ್ಮ, ತದ್ವ್ಯತಿರಿಕ್ತಂಸರ್ವ ಅನಿತ್ಯಮ್। ಅಯಮೇವನಿತ್ಯಾನಿತ್ಯವಸ್ತುವಿವೇಕಃ॥**

**ಅನುವಾದ:** ನಿತ್ಯಾನಿತ್ಯವಸ್ತು ವಿವೇಕ ಯಾವುದು? ನಿತ್ಯವಾದ ವಸ್ತು ಬ್ರಹ್ಮವೊಂದೇ. ಅದಕ್ಕಿಂತ ಭಿನ್ನವಾದದ್ದು ಎಲ್ಲವೂ ಅನಿತ್ಯ. ಇದುವೇ ನಿತ್ಯಾನಿತ್ಯವಸ್ತು ವಿವೇಕ.

**ವಿವರಣೆ:** ನಿತ್ಯ ಎಂದರೆ ಶಾಶ್ವತವಾದದ್ದು, ನಾಶವಿಲ್ಲದ್ದು. ಈ ಜಗತ್ತಿನಲ್ಲಿರುವ ಎಲ್ಲವೂ ನಶ್ವರವಾಗಿದೆ. ಹಾಗಾಗಿ ಅವುಗಳು ಶಾಶ್ವತ ವಾದ ಸುಖವನ್ನು ಕೊಡಲಾರವು. ವೇದಾಂತವು ತಿಳಿಸುವ ಬ್ರಹ್ಮವೊಂದೇ ನಿತ್ಯವಾದ ವಸ್ತು. ಶಾಶ್ವತವಾದ ಸುಖ ಹಾಗೂ ಶಾಂತಿಯು ಅದರಿಂದಲೇ ದೊರಕುವುದು. ಈ ರೀತಿಯ ನಿತ್ಯ ಹಾಗೂ ಅನಿತ್ಯ ವಸ್ತುಗಳ ಅಂತರದ ಅರಿವೇ ನಿತ್ಯಾನಿತ್ಯವಸ್ತು ವಿವೇಕ ಎನ್ನಲ್ಪಡುತ್ತದೆ.

**ಇಹಾಮುತ್ರಾರ್ಥಫಲಭೋಗವಿರಾಗಃಕಃ?**

**ಇಹಸ್ವಕ್ಷನ್ದನವನಿತಾದಿಷು ಅಮುತ್ರಸ್ವರ್ಗಭೋಗೇಷು ಇಚ್ಛಾರಾಹಿತ್ಯಮೇವ॥**

**ಅನುವಾದ :** ಇಹಾಮುತ್ರಾರ್ಥಫಲಭೋಗ ವಿರಾಗವು ಏನು? ಇಹ ಲೋಕದಹಾರ, ಚಂದನ, ವನಿತೆ ಇತ್ಯಾದಿಗಳಲ್ಲಿ ಹಾಗೂ ಪರಲೋಕದ ಸ್ವರ್ಗಭೋಗಗಳಲ್ಲಿ ಇಚ್ಛೆಯಿಲ್ಲದಿರುವುದೇ.

**ವಿವರಣೆ:** ಭೋಗ್ಯ ವಸ್ತುಗಳು ಇಹಲೋಕದಲ್ಲೂ ಪರಲೋಕದಲ್ಲೂ ಇವೆ.ಈ ವಸ್ತುಗಳು ಸುಖವನ್ನುಂಟು ಮಾಡುವವು ಎಂದು ತಿಳಿದಾಗ ಅವುಗಳಲ್ಲಿ ಇಚ್ಛೆ ಅಥವಾ ರಾಗ ಉಂಟಾಗುತ್ತದೆ. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಈ ಲೋಕದಲ್ಲಿ ದೊರಕುವ ಭೋಗ್ಯ ವಸ್ತುಗಳು ಕೇವಲ ಕ್ಷಣಿಕವಾದ ಸುಖವನ್ನು ಕೊಡುತ್ತವೆ ಎಂದೂ, ಅವುಗಳಲ್ಲಿ ಆಸಕ್ತನಾದವನನ್ನು ನಿರಾಶೆ, ದುಃಖಾದಿಗಳಿಂದ ಪೀಡಿಸುತ್ತವೆ ಎಂದೂ ತಿಳಿದು ಕೊಳ್ಳಬಹುದು. ಪರಲೋಕದಲ್ಲಿರುವ ಭೋಗ್ಯಗಳು ನಮ್ಮ ಪುಣ್ಯ ಕರ್ಮಗಳ ಫಲವಾಗಿ ಪ್ರಾಪ್ತವಾಗುತ್ತವೆ. ಕರ್ಮದ ಫಲವು ಎಂದೂ ಶಾಶ್ವತವಾಗಲು ಸಾಧ್ಯವಿಲ್ಲ. ಹಾಗಾಗಿ ಇಹಲೋಕದಂತೆಯೇ ಪರಲೋಕದ ವಸ್ತುಗಳೂ ಅನಿತ್ಯ ಎಂದು ತಿಳಿಯಬಹುದು. ಬಾಹ್ಯ ಭೋಗಗಳಲ್ಲಿ ಆಸಕ್ತನಾದವನು ಅವುಗಳನ್ನು ಪಡೆಯಲು ಬಹಳ ಪ್ರಯತ್ನ ಮಾಡಬೇಕಾಗುತ್ತದೆ. ಅವುಗಳನ್ನು ಪಡೆದ ಮೇಲೂ ಅವುಗಳನ್ನು ರಕ್ಷಿಸುವುದಕ್ಕೆ ದುಡಿಯಬೇಕಾಗುತ್ತದೆ. ಅವುಗಳು ನಮ್ಮಿಂದ ದೂರವಾಗುವ ಭಯ, ಅವುಗಳು ನಾಶವಾದಾಗ ಉಂಟಾಗುವ ನೋವು ಇತ್ಯಾದಿಗಳನ್ನು ಪದೇಪದೇ ಯೋಚಿಸಿದಾಗ ಅವುಗಳಲ್ಲಿರುವ ಆಸಕ್ತಿ ಕಡಿಮೆಯಾಗುತ್ತದೆ. ಇದನ್ನೇ ವೈರಾಗ್ಯ ಎನ್ನುವರು.

**ಶಮಾದಿಷಟ್ಕಸಂಪತ್ತಿಃಕಾ?**

**ಶಮೋದಮ ಉಪರತಿಸ್ತಿತಿಕ್ಷಾ ಶ್ರದ್ಧಾಸಮಾಧಾನಂಚೇತಿ॥**

**ಅನುವಾದ:** ಶಮಾದಿಷಟ್ಕಸಂಪತ್ತಿ ಏನು? ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ ಹಾಗೂ ಸಮಾಧಾನ ಎಂದು.

**ವಿವರಣೆ :** ಸಾಧನ ಚತುಷ್ಟಯದಲ್ಲಿ ಮೂರನೆಯದಾಗಿ ಪರಿಗಣಿಸಲ್ಪಡುವುದು ಶಮ, ದಮ ಇತ್ಯಾದಿ ಆರುಗುಣಗಳು. ಶಮವು ಇವುಗಳ ಆದಿಯಾದ್ದರಿಂದ ಶಮಾದಿ ಎಂದು ಕರೆಯುತ್ತಾರೆ. ಆರರ ಗುಂಪನ್ನು ಷಟ್ಕ ಎನ್ನುವರು. ಇವುಗಳು ಆಂತರಿಕವಾದ ಸಂಪತ್ತಿನ ಹಾಗಿರುವುದರಿಂದ ಇವುಗಳನ್ನು ಸಂಪತ್ತಿ ಎಂದಿದ್ದಾರೆ. ನಿರಂತರ ಸಾಧನೆಯ ಮೂಲಕ ನಿಯಂತ್ರಿಸಲ್ಪಟ್ಟ ಮನಸ್ಸಿನಲ್ಲಿ ಈ ಗುಣಗಳು ಕಂಡುಬರುತ್ತವೆ.

**ಶಮಃ ಕಃ? ಮನೋನಿಗ್ರಹಃ॥**

**ಅನುವಾದ:** ಶಮ ಏನು? ಮನೋನಿಗ್ರಹ.

**ವಿವರಣೆ :** ಶಮಾದಿಗಳನ್ನು ಒಂದೊಂದಾಗಿ ವಿವರಿಸುತ್ತಿದ್ದಾರೆ. ಮನಸ್ಸು ಎಂದರೆ ಅಂತರಿಂದ್ರಿಯ ಅಥವಾ ಅಂತಃಕರಣ. ಅದರ ನಿಗ್ರಹವನ್ನೇ ಶಮ ಎನ್ನುವರು. ತನಗೆ ಇಷ್ಟವಿರುವ ಬಾಹ್ಯ ವಸ್ತುಗಳ ಕಡೆಗೆ ಹೋಗಿ ಅದನ್ನು ಆಲಿಂಗಿಸಿಕೊಳ್ಳುವುದು ಒಂದು ಸಾಮಾನ್ಯ ಮನಸ್ಸಿನ ಸ್ವಭಾವ. ನಿರಂತರ ಸಾಧನೆಯ ಮೂಲಕ ಮನಸ್ಸಿನ ಸ್ವಚ್ಛಂದವಾದ ಓಡಾಟವನ್ನು ನಿಲ್ಲಿಸಬಹುದು. ಮನಸ್ಸನ್ನು ಅನಾವಶ್ಯಕ ವಿಷಯಗಳ ಕಡೆಗೆ ಹೋಗದಂತೆ ತಡೆಹಿಡಿಯುವ ಸಾಮರ್ಥ್ಯವೇ ಶಮ.

**ದಮಃಕಃ? ಬಾಹ್ಯೇಂದ್ರಿಯನಿಗ್ರಹಃ॥**

**ಅನುವಾದ :** ದಮ ಏನು? ಬಾಹ್ಯೇಂದ್ರಿಯ ನಿಗ್ರಹ.

**ವಿವರಣೆ :** ಐದು ಜ್ಞಾನೇಂದ್ರಿಯಗಳು ಹಾಗೂ ಐದು ಕರ್ಮೇಂದ್ರಿಯಗಳು ಸೇರಿ ಹತ್ತು ಬಾಹ್ಯೇಂದ್ರಿಯಗಳಾಗುತ್ತವೆ. ಇವುಗಳ ಚಪಲತೆಯನ್ನು ಕಡಿಮೆಗೊಳಿಸಿ ನಮ್ಮ ವಶದಲ್ಲಿಟ್ಟುಕೊಳ್ಳುವುದು ದಮ. ದಮವನ್ನು ಹೊಂದಿದ ಸಾಧಕನು ತನ್ನಕೈ, ಕಾಲು ಇತ್ಯಾದಿ ಕರ್ಮೇಂದ್ರಿಯಗಳನ್ನು ಅನಾವಶ್ಯಕವಾಗಿ ಚಲಾಯಿಸುವುದಿಲ್ಲ. ಅವನ ಕಣ್ಣು, ಕಿವಿ ಇತ್ಯಾದಿ ಜ್ಞಾನೇಂದ್ರಿಯಗಳು ಅನಾವಶ್ಯಕವಾದ ವಿಷಯಗಳ ಕಡೆಗೆ ಅನಿಯಂತ್ರಿತವಾಗಿ ಓಡುವುದಿಲ್ಲ.

**ಋಷಿಗಳ ಸಂದೇಶ–3**

# ಆಚಾರ್ಯೋಪದೇಶ

**ಎಸ್. ಶ್ರೀಧರಮೂರ್ತಿ**

**16. ಯಾವ ಮಹಾಪುರುಷರು ಸನ್ಮಾರ್ಗದಲ್ಲಿ ನಡೆದರೋ ಅವರನ್ನು ಅನುಸರಿಸು:**

ಜೀವನದಲ್ಲಿ ಯಾವ ಮಹಾಪುರುಷರು ಎಷ್ಟೇ ಕಷ್ಟ ಬಂದರೂ ಋಜುಮಾರ್ಗವನ್ನು ಬಿಡದೆ ಧರ್ಮದ ಹಾದಿಯಲ್ಲಿ ನಡೆದು ಆದರ್ಶಪ್ರಾಯರಾದರೋ ಅವರು ನಡೆದ ಹಾದಿಯಲ್ಲೇ ನಾವು ನಡೆದು ಸನ್ಮಾರ್ಗಿಗಳಾಗಬೇಕು. ಅವರ ಹಾದಿಯನ್ನೇ ಅನುಸರಿಸು ಎಂಬುದು ಗುರುವಿನ ಆದೇಶ.

**17. ನಮಗಿಂತ ಹಿರಿಯರು ಬಂದಾಗ ಹೇಗೆ ನಡೆದುಕೊಳ್ಳಬೇಕು:**

ನಮಗಿಂತ ಹಿರಿಯರು, ಆಚಾರ್ಯರು ಬಂದಾಗ ಆದ್ದರಿಂದ ಬರಮಾಡಿಕೊಂಡು ಶ್ರೇಷ್ಠ ಆಸನವನ್ನು ನೀಡಿ ವಿನೀತರಾಗಿ ಸೇವೆ ಮಾಡಬೇಕು. 'ವಿನಯ' ಎಂಬುದು ಮಾನವನ ಒಂದು ಅತ್ಯಮೂಲ್ಯ ಆಸ್ತಿ.

**18. ಇನ್ನು ದಾನ ಮಾಡುವಾಗ ತಿಳಿದಿರಬೇಕಾದ ಸತ್ಯಗಳು:**

ನಮ್ಮಲ್ಲಿರುವ ಜ್ಞಾನವನ್ನಾಗಲಿ, ವಸ್ತುಗಳನ್ನಾಗಲಿ, ದ್ರವ್ಯವನ್ನಾಗಲಿ ಅಥವ ಸಮಯವನ್ನಾಗಲಿ ನಾವು ಅವಶ್ಯಕತೆಗೆ ತಕ್ಕಂತೆ ಸಮಾಜದಲ್ಲಿ ಹಂಚಿಕೊಂಡು ಬಾಳಬೇಕು. ಇದನ್ನೇ ಶಾಸ್ತ್ರ 'ದಾನ' ಎಂದು ಕರೆದಿದೆ. ಈ ಹಂಚಿಕೊಂಡು ಬಾಳ್ವುದೇ ಆರೋಗ್ಯಕರ ಸಮಾಜದ ಗುಟ್ಟು.

ದಾನ ಹೇಗೆ ಮಾಡಬೇಕು? ಶ್ರದ್ಧೆಯಿಂದ ಅಂದರೆ ಇದು ಭಗವಂತ ನನಗೆ ಕೊಟ್ಟ ಸೌಭಾಗ್ಯ ಎಂದು ತಿಳಿದು ಯಜ್ಞ ದೃಷ್ಟಿಯಿಂದ ದಾನ ಮಾಡಬೇಕು. ಅಹಂಕಾರದಿಂದ ದಾನ ಮಾಡ ಬಾರದು. ನಮಗೆ ಭಗವಂತ ಕರುಣಿಸಿದ್ದನ್ನು ನಮ್ಮ ಯೋಗ್ಯತಾನು ಸಾರ ದಾನ ಮಾಡಬೇಕು. ಅತಿ ವಿನಯದಿಂದ ದಾನ ಮಾಡಬೇಕು. ಇನ್ನೂ ಹೆಚ್ಚು ದಾನ ಮಾಡಬೇಕೆಂಬ ಮನಸ್ಸಿದೆ. ಆದರೆ ಯಥಾಶಕ್ತಿ ದಾನ ಮಾಡುತ್ತಿದ್ದೇನೆ ಎಂಬ ನಾಚಿಕೆಯಿಂದ ದಾನ ಮಾಡಬೇಕು.

ದಾನ ಮಾಡುವಾಗ, ಸೇವೆ ಮಾಡುವಾಗ ನಾವು ಒಳ್ಳೆಯ ಮನಸ್ಸಿನಿಂದ ಮಾಡಬೇಕು. ದಾನ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅ ಭಗವಂತನಿಗೂ ದಾನ ಸ್ವೀಕರಿಸಿದ ವ್ಯಕ್ತಿಗೂ ನಾವು ಕೃತಜ್ಞರಾಗಿರ ಬೇಕು. ಯಜ್ಞ, ದಾನ, ತಪಸ್ಸು ಈ ಮೂರು ಉನ್ನತ ಸಾಧನೆಗಳು.

**19. ಕರ್ಮಗಳನ್ನು ಮಾಡುವಾಗ ಸಂದೇಹ ಬಂದರೆ ಏನು ಮಾಡಬೇಕು :**

ಅನೇಕ ವೇಳೆ ಪ್ರಪಂಚದಲ್ಲಿ ನಾವು ಶಾಸ್ತ್ರವಿಹಿತ ಕರ್ಮಗಳನ್ನು ಆಚರಿಸುವಾಗ ಸರಿಯೇ ತಪ್ಪೇ ಎಂಬ ಜಿಜ್ಞಾಸೆ ಉಂಟಾಗುವುದು ಸಹಜ. ಇದಕ್ಕಾಗಿ ಗುರು ಆದೇಶಿಸಿದ್ದಾನೆ. ಈ ರೀತಿ ಜಿಜ್ಞಾಸೆ ಬಂದರೆ ನೀನು ಅಂತಹ ಸಮಯದಲ್ಲಿ ಯಾರು ಋಜುಮಾರ್ಗದಲ್ಲಿ ಜೀವಿಸುತ್ತಿರುವರೋ, ಶಾಸ್ತ್ರವನ್ನು ಚೆನ್ನಾಗಿ ಬಲ್ಲರೋ ಮತ್ತು ಅನುಷ್ಠಾನಪರರೋ, ಯಾರು ಶಾಸ್ತ್ರವಿಹಿತ ಕರ್ಮಗಳಲ್ಲಿ ನಿಷ್ಣಾತರೋ, ಯಾರು ಸ್ವಾರ್ಥರಹಿತರೋ ಅಂತವರಲ್ಲಿ ವಿನಂತಿಸಿಕೊ ಮತ್ತು ಅವರು ತೋರಿಸಿದ ಮಾರ್ಗದಲ್ಲಿ ನಡೆ. ಏಕೆಂದರೆ ಅವರು ಅನಸೂಯರು. ಸಮಾಜದ ಮತ್ತು ವ್ಯಕ್ತಿಯ ಏಳಿಗೆಯೇ ಅವರ ಗುರಿ. ಅವರ ಮಾರ್ಗದರ್ಶನ ನಮ್ಮನ್ನು ಸನ್ಮಾರ್ಗಕ್ಕೆ ಕೊಂಡೊಯ್ಯುತ್ತದೆ.

**20. ಇನ್ನು ಸಮಾಜದಲ್ಲಿ ದೋಷ ಹೊರಿಸಲ್ಪಟ್ಟವರ ವಿಚಾರದಲ್ಲಿ ಹೇಗಿರಬೇಕು ಎಂದು ಗುರು ಆದೇಶಿಸುತ್ತಾನೆ:**

ಸಮಾಜದಲ್ಲಿ ಕಾರಣಾಂತರದಿಂದ ಕೆಲವರು ಅಥವಾ ಮನಸ್ಸಿನ ದೌರ್ಬಲ್ಯದಿಂದ ಅಪರಾಧ ಮಾಡಿ ದೋಷಿಗಳಾಗಿರುತ್ತಾರೆ. ಅಂಥವರನ್ನು ನಾವು ಪರಿವರ್ತನೆಗೊಳ್ಳಲು ಅವಕಾಶ ನೀಡಿ, ಅದು ಸಾಂದರ್ಭಿಕ ದೋಷ ಎಂದು ತಿಳಿದು ಸಜ್ಜನರು, ಶಾಸ್ತ್ರಜ್ಞರು ಅನಸೂಯರೂ, ಕ್ಷಮಾಶೀಲರು ಹೀಗೆ ಅವರೊಡನೆ ನಡೆದು ಕೊಂಡರೋ ಹಾಗೆ ನಾವೂ ಅವರೊಂದಿಗೆ ವ್ಯವಹರಿಸಬೇಕು. ಅವರನ್ನು ಪರಿವರ್ತಿಸಿ ಸಮಾಜದ ಮುಖ್ಯವಾಹಿನಿಗೆ ತರುವುದೇ ಸಜ್ಜನರ ಗುಣ.

ಸಾಧು ಸಂತರ ಜೀವನದಲ್ಲಿ ಅವರು ದೋಷಿಗಳೊಡನೆ ವ್ಯವಹರಿಸಿದ ರೀತಿಯನ್ನು ಬಿಂಬಿಸುವ ಅನೇಕ ನಿದರ್ಶನಗಳನ್ನು ಇಲ್ಲಿ ನಾವು ಸ್ಮರಿಸಬಹುದು.

ಈ ಉಪದೇಶಗಳನ್ನು ನೀಡಿದ ನಂತರ ಗುರುವು ಇವುಗಳನ್ನು ಪಾಲಿಸುವುದು ಶಿಷ್ಯನ ಆದ್ಯಕರ್ತವ್ಯ ಮತ್ತು ಸಮಾಜದ ದೃಷ್ಟಿಯಿಂದ ಪ್ರಮುಖ ಎಂದು ತಿಳಿಸಲು ಮತ್ತೆ ಒತ್ತು ನೀಡಿ ಹೇಳುತ್ತಿದ್ದಾನೆ:

**"ಇದು ಆದೇಶ, ಇದು ಶಾಸ್ತ್ರ ನೀಡಿದ ಮಾರ್ಗ ಇವುಗಳು ವೇದ ಮತ್ತು ಉಪನಿಷತ್ತುಗಳ ಸಾರ. ಇವುಗಳನ್ನು ದೈವಾದೇಶವೆಂದು ಸ್ವಹಿತ ದೃಷ್ಟಿಯಿಂದ ಮತ್ತು ಸಮಾಜದ ಒಳಿತಿಗಾಗಿ ನೀನು ಪಾಲಿಸಬೇಕು ಎಂದು ಮತ್ತೆ ಮತ್ತೆ ಜ್ಞಾಪಿಸಿದ್ದಾನೆ."**

ಅಂತಿಮವಾಗಿ ಈ ಉಪದೇಶಗಳನ್ನು ಸ್ವೀಕರಿಸಿ ಅದರ ಅಂತರಾರ್ಥವನ್ನು ಮನಗಂಡ ಶಿಷ್ಯನು ದೇವತೆಗಳಲ್ಲಿ ತನಗಾಗಿ ಮತ್ತು ಗುರುಗಳಿಗಾಗಿ ಪ್ರಾರ್ಥಿಸಿ ನಂತರ ಹೇಳುತ್ತಾನೆ. "ಯಾವ ಋತ ಮತ್ತು ಸತ್ಯದ ದಾರಿಯನ್ನು ಗುರು ತೋರಿದನೋ ಅದು ನನ್ನನ್ನು ಕಾಪಾಡಿತು. ಅದು ನನ್ನ ಗುರುವನ್ನು ಕಾಪಾಡಿತು."

ಇದು ನಮ್ಮ ಋಷಿ ಸಂಪ್ರದಾಯದಲ್ಲಿನ ಗುರುಶಿಷ್ಯರ ಸಂಬಂಧ.

ಈ ರೀತಿ ಗುರುಗಳಿಂದ ಆದೇಶಿಸಲ್ಪಟ್ಟವರು ಸಮಾಜಮುಖಿ ಗಳಾದಾಗ ಅಂತಹ ಸಮಾಜ ಸುಸಂಸ್ಕೃತ, ಸುಶೀಲ ಮತ್ತು ಸ್ವಾಸ್ಥ್ಯ ಸಮಾಜವಾಗುವುದರಲ್ಲಿ ಅನುಮಾನವೇ ಇಲ್ಲ.

ನಾವೆಲ್ಲರೂ ಈ ಶೀಲಗಳನ್ನು ಅರಿತು ಆಚರಿಸುವಂತಾಗಲಿ ಮತ್ತು ತನ್ಮೂಲಕ ಸಮಾಜ ಸೇವೆ ಮತ್ತು ರಾಷ್ಟ್ರಹಿತ ಚಿಂತಕ, ಋಜು ಬುದ್ಧಿ ಹೊಂದುವಂತಾಗಲಿ ಎಂದು ಆ ಸದ್ಗುರುರೂಪಿ ಭಗವಂತನನ್ನು ಪ್ರಾರ್ಥಿಸೋಣ.

**ಓಂ ನಮೋ ಬ್ರಹ್ಮಾದಿಭ್ಯೋ ಬ್ರಹ್ಮವಿದ್ಯಾ ಸಂಪ್ರದಾಯ ಕತೃಭ್ಯೋ ವಂಶ ಋಷಿಭ್ಯೋ ನಮೋ ಗುರುಭ್ಯಃ॥**

# ಗೋವುಗಳು

-ವೈ.ಎನ್. ವೆಂಕಟೇಶಮೂರ್ತಿ

ಭಾರತೀಯ ಸಂಸ್ಕೃತಿಯ ಪ್ರತೀಕ ಗೋವುಗಳು ಎನ್ನುವುದಾಗಿ ಪ್ರಾಜ್ಞರ ನುಡಿ. ಇಂತಹ ಗೋವುಗಳನ್ನು ಋಗ್ವೇದದಲ್ಲಿ ವಿಶೇಷವಾಗಿ ಹೀಗೆ ವರ್ಣಿಸಲಾಗಿದೆ. ಈ ಕಾಮಧೇನು ಬಗ್ಗೆ ಋಗ್ವೇದ ಅನೇಕ ಹೆಸರುಗಳಿಂದ ವರ್ಣಿಸಿರುವ ಈ ಪ್ರತಿನಾಮಗಳು ಹೀಗಿವೆ.

1 ಗೋ 2 ಧೇನು 3 ಉಸ್ರಿಯಾ 4 ಶ್ರಾವಿ(ಶ್ಯಾವಿ) ಸುದುಘಾ 5 ಪೃಶೀ 6 ದುಘಾ 7 ವಿಷ್ವದಾಯಿಸ 8 ಅವಸಾ 9 ಸುರಭಿ 10 ಇಳಾ 11 ದಕ್ಷಿಣಾ 12 ಅಷ್ಟಕರ್ಣ್ಯ 13 ಅಷ್ಟಾಪದಿ 14 ಆಮಸ 15 ವಶಾ 16 ವಾಸ 17 ಸ್ತರಿ 18 ಪರ್ಜನ್ಯ 19 ಆಫ್ನ್ಯ 20 ಸುಬುರ್ದಘಾ 21 ಪೃಷತೀ 22 ನವಸ್ವ 23 ಮಧು 24 ಉರುಧಾರಾ 25 ಸಹಸ್ರಧಾರಾ 26 ಕ್ಷಾಮಾ 27 ಔರ್ಣಿ 28 ಶಿಶ್ವರೀ 29 ವಾಸರೀ 30 ಅದಿತಿ 31 ವಾಶ್ರಾ 32 ಗೃಷ್ಟಿ 33 ತನೂ 34 ವತ್ಸ 35 ಗೌರ 36 ಶ್ವತ್ನ 37 ಅರುಣೀ 38 ರೋಹಿಣೀ 39 ಪುರುಷ್ಣೀ 40 ಘತಶ್ಚುತ 41 ಘತದುಹ 42 ಪಶು ಹೀಗೆ ಅನೇಕಾನೇಕ.

ಬೆಳಿಗ್ಗೆ ಎದ್ದು ನೋಡಬೇಕಾದ ವಸ್ತುಗಳಲ್ಲಿ ಮೊದಲ ಸ್ಥಾನ ಗೋಮಾತೆಗೆ ನೀಡಲಾಗಿದೆ.

**"ಕಪಿಲಾಂ ದರ್ಪಣಂ ಭಾನುಂ ಭಾಗ್ಯವಂತಂ ಚ ಭೂಪತಿಮ್।**

**ಆಚಾರ್ಯಂ ಅನ್ನದಾತಾರಂ ಪ್ರಾತಃ ಪಶ್ಯೇತ್ ಪತಿವ್ರತಾಮ್॥**

ಪ್ರಾತಃಕಾಲದಲ್ಲಿ ಅವಶ್ಯ ನೋಡಬೇಕಾದ ವಸ್ತುಗಳು ಕಪಿಲಾ ಗೌ-ಕನ್ನಡಿ-ಸೂರ್ಯ-ಭಾಗ್ಯವಂತ- ರಾಜ-ಪಂಡಿತ-ಅನ್ನದಾತ ಹಾಗೂ ಪತಿವ್ರತೆ.

ಕಾಮಧೇನು ಎಂದರೆ ಸಮಸ್ತರು ಕೇಳಿದ್ದನ್ನೆಲ್ಲ ನೀಡುವವಳು ಎಂಬುವುದಾಗಿ.

ಗೋಮಾತೆ ಜಾತಿ-ಮತ-ಪಂಥ-ಹೆಣ್ಣು-ಗಂಡುಗಳೆಂಬ ಬೇಧ ಭಾವಗಳಿಲ್ಲದೆ ನಿರಂತರ ತಾಯಿಯ ಸ್ಥಾನದಲ್ಲಿದ್ದು , ಎಲ್ಲರಿಗೂ "ಅಮೃತಸದೃಶ"ವಾದ ಹಾಲನ್ನು ನೀಡಿ ಪೋಷಿಸುವ ಮಹಾತಾಯಿಯಾಗಿದ್ದಾಳೆ ಗೋಮಾತೆ.

ಗೋವಿನ ಉತ್ಪನ್ನಗಳಿಲ್ಲದೆ ದೇವತಾ ಕಾರ್ಯವಾಗಲಿ, ಪಿತೃಕಾರ್ಯವಾಗಲಿ ನಡೆಯದು.

ಮನುಷ್ಯ ತನ್ನ ಕೃಷಿ ಭೂಮಿಗೆ ಗೋವಿನ ಉತ್ಪನ್ನಗಳಿಂದ ತಯಾರಿಸಿದ ಗೊಬ್ಬರ ಹಾಕಿ,ಉತ್ತಮ ಬೆಳೆ ಬೆಳೆಯುತ್ತಾನೆ. ಜಮೀನು ಉಳಿಮೆ ಮಾಡಲು ಕೂಡ ಗೋವಿನ ಸಂತತಿಗಳಾದ ಎತ್ತುಗಳು-ಬಸವಗಳನ್ನು ಉಪಯೋಗಿಸಿಕೊಂಡು ,ಉತ್ತಮ ಫಸಲು ಬೆಳೆಯುತ್ತಾನೆ.

ಗೋವುಗಳಿಗೂ ಮನುಷ್ಯನಿಗೂ ಅವಿನಾಭಾವ ಸಂಬಂಧವಿದೆ. ಗೋಸಂತತಿ ಉಳಿದರೆ ಮಾತ್ರ ಈ ಜಗತ್ತು ಉಳಿಯಲಿದೆ. ಗೋವುಗಳಿಲ್ಲದಿರುವ ಪ್ರಕೃತಿ ಪರಿಸರ ಊಹಿಸಿಕೊಳ್ಳಲು ಅಸಾಧ್ಯ. ಗೋವುಗಳ ರಕ್ಷಣೆ ಪೋಷಣೆ ಇಂದು ಎಂದಿಗಿಂತಲೂ ಅತಿ ಅಗತ್ಯವಾದ ಕೆಲಸಗಳಲ್ಲಿ ಒಂದಾಗಿದೆ.

"ಗಾವೋ ವಿಶ್ವಸ್ಯ ಮಾತರಃ" ಇಡೀ ವಿಶ್ವಕ್ಕೆ ಗೋವುಗಳು ತಾಯಿಯ ಸಮಾನವಾಗಿವೆ. ಆ ತಾಯಿಯ ಕೊಡುಗೆ ಅಪಾರ. ಯಾವುದೇ ಫಲಾಪೇಕ್ಷೆ ಇಲ್ಲದೆ ಹಾಲನ್ನು ನೀಡುವ ಕರುಣಾಮಯಿ ಯಾದ ಆಕೆ. ಗೋವುಗಳ ಋಣ ಏಳೇಳು ಜನುಮಗಳಲ್ಲೂ ತೀರಿಸಲು ಅಸಾಧ್ಯ. ಈ ನಿಜ ಅರಿತು ಮಾನವ ಗೋವುಗಳಿಗೆ ಕೃತಜ್ಞನಾಗಿರಬೇಕು.

ಗೋಮಾತೆಯ ಹಾಲು-ಮೊಸರು-ಬೆಣ್ಣೆ-ತುಪ್ಪ-ಗೋಮೂತ್ರ -ಗೋಮಯ ಎಲ್ಲವೂ ಮಾನವನ ಬದುಕಿಗೆ ಅತ್ಯಗತ್ಯ ವಾಗಿದೆ. ಗೋವುಗಳ ಉತ್ಪನ್ನಗಳನ್ನು ಮಾರಿ, ತನ್ನ ಬದುಕನ್ನು ಸಿರಿವಂತ ಗೊಳಿಸಿಕೊಂಡಿದ್ದಾನೆ. ಗೋವಿನ ರೋಮ- ರೋಮಗಳಲ್ಲೂ ಪರಮಾತ್ಮ ಇರುತ್ತಾನೆ.

ಭಗವಂತನಿಗೆ "ಪಂಚಾಮೃತ "ಅಭಿಷೇಕಕ್ಕೆ ಗೋಮಾತೆಯ ಹಾಲು-ಮೊಸರು-ತುಪ್ಪ ಇರಲೇಬೇಕು.

ಹಾಗೆಯೇ ಮನುಷ್ಯನ ದೇಹ ಶುದ್ಧಿಗೆ ಗೋವಿನ ಹಾಲು-ಮೊಸರು-ತುಪ್ಪ-ಗೋಮೂತ್ರ-ಗೋಮಯ ಮಂತ್ರಗಳಿಂದ ತಯಾರಿಸಿದ "ಪಂಚಗವ್ಯ"ಎಂಬ ಶುದ್ಧೌಷಧ ಸೇವಿಸುವುದು ವಿಶೇಷ. ಮಾನವನ ದೇಹ ಶುದ್ಧಿಯಾಗಿ, ಆರೋಗ್ಯವಂತ ನಾಗುತ್ತಾನೆ.

ಆಕಳ ಹಾಲಿನಲ್ಲಿ ಭಗವಂತ "ಗಂಧಕ"ವನ್ನು ಸೇರಿಸಿ ಮಾನವನಿಗೆ ಮಹದುಪಕಾರ ಮಾಡಿದ್ದಾನೆ.ಈ ಹಾಲು ಅಶಕ್ತರಿಗೆ, ಅಮ್ಮನಿಲ್ಲದ ಪುಟಾಣಿ ಮಕ್ಕಳಿಗೆ ಪರಮ ಔಷಧವಾಗಿದೆ.ಈ ಎಲ್ಲಾ ಕಾರಣಗಳಿಂದ ಗೋಲೋಕದ ಕಾಮಧೇನು (ಹಸು) ವಿನ ಶಕ್ತಿ ಅಪರಿಮಿತವಾದ್ದದೆಂದು ತಿಳಿಯುತ್ತದೆ. ಹಾಲು ಎಂಬ "ದಿವ್ಯಾಮೃತ"ವು ಮನುಕುಲದ ಅಭ್ಯುದಯಕ್ಕೆ ಕಾರಣವಾಗಿದೆ. ಗೋವಿನ ಹಾಲು ಕುಡಿಯದೇ ಬೆಳೆದಂತಹ ಸಂತತಿ ಕೃಶವಾಗಿ, ಕುರೂಪವೂ ಆಗಬಹುದು ಎಂಬುದನ್ನು ಋಗ್ವೇದ ಹೇಳಿದೆ.

"ಗಾವಾಂ ಗ್ರಾಸಪ್ರದಾನೇನ ಸ್ವರ್ಗಲೋಕೇ ಮಹೀಯತೇ" ಗೋಗ್ರಾಸ ನೀಡಿದರೆ ಪಿತೃಗಳಿಗೂ, ನಮಗೂ ಸ್ವರ್ಗ ಸುಖ, ಆನಂದ ಲಭಿಸುತ್ತದೆ, ದೇವತೆಗಳು ಕೊಂಡಾಡುತ್ತಾರೆ.

ಮೂವತ್ತಮೂರು ದೇವತೆಗಳ ಸನ್ನಿಧಾನವಿರುವ ನಡೆದಾಡುವ ದೇವರೆಂದೇ ಪೂಜಿಸುವ ಶ್ರೇಷ್ಠ ಪೂಜನೀಯ ಪ್ರಾಣಿ ಗೋಮಾತೆ. ಗೋವುಗಳನ್ನು ಸಾಕುವುದು, ರಕ್ಷಿಸಿ, ಪೋಷಿಸುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯ ವಾಗಿದೆ.

ಗೋವುಗಳನ್ನು ಸಾಕುವುದು ಮಹತ್ಕಾರ್ಯಗಳಲ್ಲಿ ಒಂದಾಗಿದೆ. ಅಂತೆಯೇ ಗೋವುಗಳ ಹತ್ಯೆಯಾಗದಂತೆ ತಡೆಯುವಂತಾಗ ಬೇಕು.

ಸೃಷ್ಟಿಕರ್ತರಾದ ಶ್ರೀ ಬ್ರಹ್ಮ ದೇವರು ಹಾಗೂ ಸಮಸ್ತ ದೇವಾನು ದೇವತೆಗಳಿಂದಲೂ, ಪಿತೃಗಳಿಂದಲೂ , ಅನುಗ್ರಹ ಪಡೆದುಕೊಂಡ ಮಂಗಲಕರ ಗೋವುಗಳು ದೇವತಾನುಗ್ರಹ ಪಡೆದ ಈ ಮಾತೆಗೆ ನಮೋ ನಮಃ ಎನ್ನುವುದು ಅತ್ಯವಶ್ಯವಾಗಿದೆ.

**"ಭೂಮಾತಾ ದೇಶಮಾತಾ ಚ ದೇಹಮಾತಾ ತಥೈವ ಚ।**

**ಗೋಮಾತಾ ವೇದಮಾತೇತಿ ಪಂಚೈತಾ ಮಾತರೋ ಮಮ॥**

ಭೂಮಾತೆ–ದೇಶಮಾತೆ– ದೇಹಮಾತೆ– ಗೋಮಾತೆ ಮತ್ತು ವೇದಮಾತೆ ಇವರು ತಾಯಂದಿರು. ಈ ಐದನ್ನು ಅಮೂಲ್ಯವಾಗಿ ನಮ್ಮ ಅಮ್ಮನ ಸ್ಥಾನ ನೀಡಿರುತ್ತೇವೆ.

ಮಹಾಭಾರತ ಎಂಬ ಮಹಾಕಾವ್ಯ ನಿತ್ಯವೂ ಪಠಿಸಿದವರಿಗೆ ಸಿಗುವಂತಹ ಪುಣ್ಯ, ವೇದಾಧ್ಯಾಯನ ಮಾಡಿದ ವಿಪ್ರರಿಗೆ ಗೋದಾನ ನೀಡಿದರೆ ಅಷ್ಟೇ ವಿಶೇಷ ಪುಣ್ಯ ಸಿಗುತ್ತದೆ. ಪ್ರತಿ ನಿತ್ಯ ಪ್ರಾತಃಕಾಲ ಶುಚಿರ್ಭೂತರಾಗಿ, ಶುದ್ಧವಾದ ಮನಸ್ಸಿನಿಂದ ಗೋಮಾತೆಗೆ ಅಭಿವಂದಿಸಿ, ಪ್ರದಕ್ಷಿಣೆ ಮಾಡಿದರೆ ಅತಿಶಯವಾದ ಪುಣ್ಯ ಪ್ರಾಪ್ತವಾಗುವುದರೊಂದಿಗೆ–ಅವರ ಮನಃಸಂಕಲ್ಪ ಸಿದ್ಧಿಯಾಗಲಿದೆ.

**"ಲೋಕಾಃಸಮಸ್ತಾಃ ಸುಖಿನೋ ಭವಂತು"**


## ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

**ಶುಭಾಶಯಗಳೊಂದಿಗೆ**



**ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',**
**ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ**
**ಪೂರ್ಣಪ್ರಜ್ಞ ನಗರ, ಬೆಂಗಳೂರು–560 061.**
**ದೂ. ಸಂ. 080–26731335, 26731336**

**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

### ಸಂಘದ ಆಡಳಿತ ಮಂಡಳಿ ಸದಸ್ಯರು

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜೆ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜೆ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)
## ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು
### ಸ್ಥಳ : ಗಾಯತ್ರಿ ಭವನ

ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು-70.
ದೂರವಾಣಿ : 080-26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ
**ಮಂಗಳವಾರ ಮತ್ತು ಶನಿವಾರ**

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್

**ಸದಸ್ಯರು**

ಶ್ರೀಮತಿ ರಮಾ ಶ್ರೀನಾಥ್, ಶ್ರೀಮತಿ ಪಾರ್ವತಿ ಸ್ವಾಮಿ
ಶ್ರೀಮತಿ ಗಾಯತ್ರಿ ರಾವ್


## ಭಟ್ ಟ್ರಾವೆಲ್ & ಟೂರ್ಸ್

**ರಿಯಾಯಿತಿ ದರದಲ್ಲಿ ವಿದೇಶಿ ಪ್ರವಾಸ**

- 7 ದಿನಗಳ ಸಿಂಗಾಪುರ ಮಲೇಶಿಯಾ
- 5 ದಿನಗಳ ಬಾಲಿ
- 9 ದಿನಗಳ ವಿಯೆಟ್ನಾಂ
- 6 ದಿನಗಳ ಅಂಡಮಾನ್
- 4 ದಿನಗಳ ಮಾಲ್ಡೀವ್ಸ್
- 6 ದಿನಗಳ ದುಬೈ , ಅಬುಧಾಬಿ

**ಪಾಸ್ ಪೋರ್ಟ್ ಮಾಡಿಕೊಡಲಾಗುತ್ತದೆ**

ನಂ. 24 /3 ಮೊದಲನೇ ಮಹಡಿ, 3ನೇ ಕ್ರಾಸ್, 4ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು-560018,
ಮೊಬೈಲ್: 98441 66555, 98440 37295,
ಫೋನ್: 080-2667 2555
E-mail: bhattravelandtours@gmail.com


## ಸೂಚನೆ

ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಈಗಿರುವ ಸದಸ್ಯರ ಪಟ್ಟಿಯನ್ನು ಪರಿಶೀಲಿಸಿ ಪರಿಷ್ಕರಣೆ ಮಾಡಲು ಶ್ರೀ ವಿ. ಸತ್ಯೇಂದ್ರರವರನ್ನು ಸಂಚಾಲಕರನ್ನಾಗಿ ನೇಮಿಸಿ ಉಪಸಮಿತಿಯನ್ನು ರಚಿಸಿರುತ್ತಾರೆ.

ಸಂಚಾಲಕರು ಮಹಾಸಭಾದ ಕೇಂದ್ರಕಾರಿಣಿ ಸಭೆಯ ಸದಸ್ಯರನ್ನು ಸಂಪರ್ಕಿಸಿ ತಮ್ಮ ವ್ಯಾಪ್ತಿಗೆ ಬರುವ ಮಹಾಸಭಾ ಸದಸ್ಯರ ವಿವರವನ್ನು ಸಲ್ಲಿಸುವಂತೆ ಕೋರುತ್ತೇವೆ. ದಯವಾಡಿ ಸಹಕರಿಸಬೇಕೆಂದು ವಿನಂತಿಸುತ್ತೇನೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ :
ವಿ. ಸತ್ಯೇಂದ್ರ -9844001238
ಎಸ್. ಶ್ರೀಧರಮೂರ್ತಿ-ಪ್ರಧಾನ ಕಾರ್ಯದರ್ಶಿ

ವಿಪ್ರನುಡಿ ಪತ್ರಿಕೆಗೆ ವರದಿ, ಲೇಖನಗಳನ್ನು ಕಳುಹಿಸುವವರು ಬರಹ, ನುಡಿಯಲ್ಲಿ ಟೈಪ್‌ಮಾಡಿ ಈ ಮೇಲ್ ಮುಖಾಂತರವೇ ಕಳುಹಿಸತಕ್ಕದ್ದು.
ಲೇಖನ ವರದಿಗಳನ್ನು ಕಳುಹಿಸಬೇಕಾದ
ಇ-ಮೇಲ್ : e mail : vipranudi@gmail.com

**ವಿಪ್ರನುಡಿ ಮಾಸಪತ್ರಿಕೆಗೆ ರೂ. 500/-**
**ಸಂದಾಯಮಾಡಿ ಚಂದಾದಾರರಾಗಿ**

## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ಕಲಾ ಮತ್ತು ಸಾಂಸ್ಕೃತಿಕ ವೇದಿಕೆಯ ಉದ್ಘಾಟನಾ ಸಮಾರಂಭ
# ಗಣ್ಯರಿಗೆ ಹಾಗೂ ಕಲಾವಿದರಿಗೆ ಸನ್ಮಾನ


ಕಾರ್ಯಕ್ರಮ ಉದ್ಘಾಟಿಸಿದ ಸುರಮಣಿ ಪ್ರವೀಣ ಗೋಡ್ಖಿಂಡಿ


ಮುಖ್ಯ ಅತಿಥಿ ವಿದ್ವಾನ್ ಚಿ॥ ರಾಹುಲ್ ವೇಲ್ಲಾಲ್


ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ.ಜಿ. ರಾಘವನ್


ಭಾರತೀಯ ವಿದ್ಯಾಭವನದ ಕಾರ್ಯದರ್ಶಿ ಹೆಚ್.ಎನ್. ಸುರೇಶ್


ಖ್ಯಾತ ನೃತ್ಯ ಕಲಾವಿದೆ ಶ್ರೀಮತಿ ವಿದ್ಯಾ ರವಿಶಂಕರ್


ಖ್ಯಾತ ಸುಗಮ ಸಂಗೀತ ಕಲಾವಿದ ಕಿಕ್ಕೇರಿ ಕೃಷ್ಣಮೂರ್ತಿ


ಚಿಕ್ಕಪೇಟೆ ಶಾಸಕರಾದ ಉದಯ ಗರುಡಾಚಾರ್ ಹಾಗೂ ಮೇಧಿನಿ ಗರುಡಾಚಾರ್


ಖ್ಯಾತ ಚಲನಚಿತ್ರ ನಟ–ನಿರ್ಮಾಪಕ ಸುನೀಲ್ ಪುರಾಣಿಕ್

PERIODICAL RATE

VIPRANUDI KANNADA MONTHLY.
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on Date of Publishing 9-08-2022

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್

ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar

MLA, Chickpet Assembly Constituency

/BGUdayBJP www.udaygarudachar.in

If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar